ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ವೈಜ್ಞಾನಿಕ ಮನೋಭಾವದ ಧ್ರುವತಾರೆಗಳು



ಡಾ. ಯು.ಆರ್.ರಾವ್   ಪ್ರೊ. ಯಶಪಾಲ್

ಸಂಪುಟ 11 | ಸಂಚಿಕೆ 32 | ಪುಟ 16 | ಜುಲೈ 31– ಆಗಸ್ಟ್ 6, 2017 | ರೂ. 10/–

web: www.janashakthi.co.in | e-mail : js_weekly@yahoo.com



ಚುನಾವಣಾ ಭರವಸೆಗಳನ್ನು ಈಡೇರಿಸಿ

ಆಗಸ್ಟ 15-31 ಚಳುವಳಿ



ಬೀಡಿ, ವಿದ್ಯುತ್ ಗುತ್ತಿಗೆ ಕಾರ್ಮಿಕರ ಮುನ್ನಡೆ



ಕಾರ್ಪೋರೇಟ್ ಪರ GST : ಬದಲಾಯಿಸಿ

ಸಾಮ್ರಾಜ್ಯಶಾಹಿ ವಿರೋಧಿ ದಿನ : ಸೆ.-1



'ಸಮಾನತೆಯ ಅನ್ವೇಷಣೆ'ಯಲ್ಲಿ



ಕಟ್ಟಡ ಕಾರ್ಮಿಕರ ಮುತ್ತಿಗೆ

ಕೇರಳ : ಬಿಜೆಪಿಯ ಭಾನಗಡಿಗಳು

ರೈತರು, ಯುವಜನರು, ಮಹಿಳೆಯರಿಗೆ ನೀಡಿದ ಚುನಾವಣಾ ಭರವಸೆಗಳ ಈಡೇರಿಕೆಗಾಗಿ, ವ್ಯಾಪಕ ಖಾಸಗೀಕರಣದ ವಿರುದ್ಧ ದೇಶವ್ಯಾಪಿ ಪ್ರತಿಭಟನಾ ಚಳುವಳಿಗಳು: ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

*** ಆಗಸ್ಟ್ 15ರಿಂದ 31 ರ ವರೆಗೆ ದೇಶಾದ್ಯಂತ ಈ ಕೆಳಗಿನ ಆಗ್ರಹಗಳ ಮೇಲೆ ಚಳುವಳಿಗಳನ್ನು ಆರಂಭಿಸಲು ಜುಲೈ 24ರಿಂದ 26 ರ ವರೆಗೆ ನವದೆಹಲಿಯಲ್ಲಿ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ:**

1.ತಕ್ಷಣವೇ ಸಾಲದ ಹೊರೆಯಿಂದ ಹತಾಶರಾಗಿ ಆತ್ಮ ಹತ್ಯೆಗಳತ್ತ ತಳ್ಳಲ್ಪಡುತ್ತಿರುವ ರೈತರಿಗೆ ಸಾಲಮನ್ನಾದ ಪರಿಹಾರ ಒದಗಿಸಬೇಕು.

2.ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟಿನ ಕನಿಷ್ಟ ಬೆಂಬಲ ಬೆಲೆ ಕೊಡುವ ಬಿಜೆಪಿಯ ಚುನಾವಣಾ ಭರವಸೆಯನ್ನು ಜಾರಿ ಮಾಡಬೇಕು.

3.ಪ್ರತಿವರ್ಷ ಎರಡು ಕೋಟಿ ಉದ್ಯೋಗಗಳನ್ನು ನಿರ್ಮಿಸುವ ಚುನಾವಣಾ ಭರವಸೆಯನ್ನು ಜಾರಿಗೊಳಿಸಬೇಕು.

4.ಸಾರ್ವಜನಿಕ ವಲಯ ಮತ್ತು ಸಾರ್ವಜನಿಕ ಸೇವೆಗಳ ವ್ಯಾಪಕ ಖಾಸಗೀಕರಣವನ್ನು ನಿಲ್ಲಿಸಬೇಕು.

5.2014 ರ ಚುನಾವಣೆಗಳಲ್ಲಿ ಭರವಸೆ ನೀಡಿದಂತೆ ಮಹಿಳಾ ಮೀಸಲಾತಿ ಮಸೂದೆಯನ್ನು ತಕ್ಷಣವೇ ಶಾಸನವಾಗಿ ಮಾಡಬೇಕು.

* **ಇದಲ್ಲದೆ ಸೆಪ್ಟಂಬರ್ 1 ರಂದು ಪಕ್ಷದ ಎಲ್ಲ ಘಟಕಗಳು ವಿಶ್ವಶಾಂತಿ ಮತ್ತು ಸಾಮ್ರಾಜ್ಯಶಾಹಿ–ವಿರೋಧಿ ದಿನವನ್ನು ಆಚರಿಸಬೇಕು ಎಂದು ಕೇಂದ್ರ ಸಮಿತಿ ಕರೆ ನೀಡಿದೆ**. ಈ ಸಂದರ್ಭದಲ್ಲಿ ಮೋದಿ ಸರಕಾರ ಅಮೆರಿಕನ್ ಸಾಮ್ರಾಜ್ಯಶಾಹಿಗೆ ಶರಣಾಗಿ, ಭಾರತವನ್ನು ಅಮೆರಿಕನ್ ಸಾಮ್ರಾಜ್ಯಶಾಹಿಯ ಕಿರಿಯ ಸಾಮರಿಕ ಮಿತ್ರನ ಮಟ್ಟಕ್ಕೆ ಇಳಿಸಿರುವುದರ ಮೇಲೆ ಒತ್ತು ನೀಡಬೇಕು. ಇಸ್ರೇಲಿಗೆ ಪ್ರಧಾನ ಮಂತ್ರಿಗಳ ಇತ್ತೀಚಿನ ಭೇಟಿ ಮತ್ತು ಒಂದು ಜಾಗತಿಕ ಅಮೆರಿಕ–ಇಸ್ರೇಲ್–ಭಾರತ ಅಕ್ಷವನ್ನು ರೂಪಿಸುವ ಬಿಜೆಪಿ ಸರಕಾರದ ಆಶಯ ಭಾರತ ಮತ್ತು ಅದರ ಜನತೆಯ ಹಿತಗಳಿಗೆ ಮಾರಕ ಎಂಬ ಸಂಗತಿಯನ್ನು ಒತ್ತಿ ಹೇಳಬೇಕು ಎಂದು ಅದು ಕರೆ ನೀಡಿದೆ.

* **ಸೆಪ್ಟಂಬರ್ ತಿಂಗಳಲ್ಲಿ ದೇಶಾದ್ಯಂತ ಎಲ್ಲ ಮಟ್ಟಗಳಲ್ಲಿ ಎಲ್ಲ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಅಣಿನೆರೆಸಿ ಕೋಮುವಾದ–ವಿರೋಧಿ ಕಾರ್ಯಕ್ರಮಗಳನ್ನು** ರೂಪಿಸುವಲ್ಲಿ ಮುತುವರ್ಜಿ ವಹಿಸಬೇಕು.

* ದಲಿತರು ಮತ್ತು ಮುಸ್ಲಿಮರ ವಿರುದ್ಧ ಹಲ್ಲೆಗಳನ್ನು ಬಲವಾಗಿ ಖಂಡಿಸುತ್ತ ಪಕ್ಷ ಎಲ್ಲ ಮಟ್ಟಗಳಲ್ಲಿ ಜನಗಳನ್ನು ಅಣಿನೆರೆಸಿ ಗೋರಕ್ಷಕ ಸಮಿತಿಗಳನ್ನು ಮತ್ತು ನೈತಿಕ ಪೋಲೀಸ್‌ಗಿರಿ ಮುಂತಾದವನ್ನು ನಡೆಸುವ ಆರೆಸ್ಸೆಸ್–ಪ್ರಾಯೋಜಿತ **ಖಾಸಗಿ ಪಡೆಗಳನ್ನು ನಿಷೇಧಿಸುವ ಕೇಂದ್ರೀಯ ಕಾನೂನನ್ನು ತರಬೇಕು ಎಂದು ಆಗ್ರಹಿಸಿ ಸೆಪ್ಟಂಬರಿನಲ್ಲಿ ಚಳುವಳಗಳನ್ನು ನಡೆಸಬೇಕು** ಎಂದೂ ಕೇಂದ್ರ ಸಮಿತಿ ಕರೆ ನೀಡಿದೆ.



ಜನಗಳ ಮೇಲೆ ಸರ್ವತೋಮುಖ ದಾಳಿ

ದೇಶ ಈಗ ಬಿಜೆಪಿ ನೇತೃತ್ವದ ಸರಕಾರ ನಮ್ಮ ಬಹುಪಾಲು ಜನಗಳ ಜೀವನಾಧಾರಗಳ ಮೇಲೆ ಎಲ್ಲೆಡೆಗಳಿಂದಲೂ ದಾಳಿ ಮಾಡುತ್ತಿರುವುದನ್ನು ಕಾಣುತ್ತಿದೆ ಎಂದು ಕೇಂದ್ರ ಸಮಿತಿ ಪ್ರಸಕ್ತ ಸನ್ನಿವೇಶವನ್ನು ವಿಶ್ಲೇಷಿಸುತ್ತ ಹೇಳಿದೆ. **ನಾಲ್ಕುಖದ ದಾಳಿಗಳು ನಡೆಯುತ್ತಿವೆ**–ನಮ್ಮ ಬಹುಪಾಲು ಜನಗಳ ಮೇಲೆ ಹೆಚ್ಚೆಚ್ಚು ಸಂಕಟಗಳನ್ನು ಹೇರುವ ನವ–ಉದಾರವಾದಿ ಧೋರಣೆಗಳು; ದಲಿತರು ಮತ್ತು ಅಲ್ಪಸಂಖ್ಯಾತರ ಮೇಲೆ ಗೋರಕ್ಷರಂರಹ ಕಾಸಗಿ ಪಡೆಗಳಿಂದ ದಾಳಿಗಳ ಮೂಲಕ ತೀಕ್ಷ್ಣಗೊಳ್ಳುತ್ತಿರುವ ಕೋಮುವಾದಿ ಧ್ರುವೀಕರಣ; ಜನಗಳ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ದಾಳಿ, ಆಮೂಲಕ ಸಂಸದೀಯ ಸಂಸ್ಥೆಗಳನ್ನು ಬುಡಮೇಲು ಮಾಡುತ್ತಿರುವುದು; ಮತ್ತು ಭಾರತವನ್ನು ಮತ್ತಷ್ಟು ಗಟ್ಟಿಯಾಗಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಕಿರಿಯ ಸಾಮರಿಕ ಮಿತ್ರನ ಮಟ್ಟಕ್ಕೆ ಇಳಿಸಿರುವುದು, ಅದರಿಂದಾಗಿ ನಮ್ಮ ವಿದೇಶಾಂಗ ಧೋರಣೆಯಲ್ಲಿ ಪಲ್ಲಟ– ಇವೀಗ ಎದ್ದು ಕಾಣುತ್ತಿವೆ ಎಂದು ಕೇಂದ್ರ ಸಮಿತಿ ವಿಶ್ಲೇಷಿಸಿದೆ.

ಹೆಚ್ಚುತ್ತಿರುವ ಅಸಹಿಷ್ಣುತೆ:

ಬಿಜೆಪಿಗೆ ತನ್ನ ಸ್ಥಾನವನ್ನು ಗಟ್ಟಿಗೊಳಿಸಲು ಸಾಧ್ಯವಾಗಿರುವುದು ಮುಖ್ಯವಾಗಿ ದೇಶದೆಲ್ಲೆಡೆಯಲ್ಲಿ ಕೋಮುವಾದಿ ಧ್ರುವೀಕರಣವನ್ನು ಬೃಹತ್ ಪ್ರಮಾಣದಲ್ಲಿ ಗಟ್ಟಿಗೊಳಿಸುವ ಮೂಲಕವೇ. ಸಂಸದೀಯ ಪ್ರಜಾಪ್ರಭುತ್ವದ ಪ್ರತಿಯೊಂದು ಸಂಸ್ಥೆಯೊಳಕ್ಕೂ ನುಗ್ಗಿ ಅದನ್ನು ಕೋಮುಗ್ರಸ್ತಗೊಳಿಸಲಾಗುತ್ತಿದೆ. ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸಲು ಶೈಕ್ಷಣಿಕ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು, ಪುರಾತತ್ವ ಸರ್ವೆ ಇಲಾಖೆಯುಂತಹ ಸಂಸ್ಥೆಗಳೊಳಕ್ಕೆ ಆರೆಸ್ಸೆಸ್ ಮಂದಿಯನ್ನು ತೂರಿಸಿ ಇತಿಹಾಸವನ್ನು ತಿರುಚಲಾಗುತ್ತಿದೆ. ಸಾರ್ವಜನಿಕ ಅವಕಾಶಗಳನ್ನೆಲ್ಲವನ್ನೂ ಕೋಮುಗ್ರಸ್ತಗೊಳಿಸುವ ಭರದ ಪ್ರಯತ್ನ ನಡೆಯುತ್ತಿದೆ. ಟಾಗೋರ್, ಗಾಲಿಬ್, ದಿನಕರ್, ಅವತಾರ್ ಸಿಂಗ್ ಪಾಶ್, ಉರ್ದು ಪದಗಳು, ಮೊಗಲರ ಬಗ್ಗೆ ಪ್ರಶಂಸೆ ಮುಂತಾದವುಗಳನ್ನು ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳನ್ನು ‘ಶುದ್ಧೀಕರಿಸಬೇಕೆಂದು ಆರೆಸ್ಸೆಸ್ ಕೂಗಾಡುತ್ತಿದೆ. ನೋಬೆಲ್ ಪ್ರಶಸ್ತಿ ವಿಜೇತ ಅಮಾರ್ತ್ಯ ಸೆನ್ ಅವರನ್ನು ಕುರಿತ ಡಾಕ್ಯುಮೆಂಟರಿ ಚಿತ್ರದಲ್ಲಿ ‘ಹಸು’, ‘ಗುಜರಾತ್’, ‘ಹಿಂದುತ್ವ’ ಮುಂತಾದ ಪದಗಳನ್ನು ತೆಗೆಯದೆ ಅದರ ಪ್ರದರ್ಶನಕ್ಕೆ ಅವಕಾಶ ಕೊಡುವುದಿಲ್ಲ ಎಂದು ಸೆನ್ಸಾರ್ ಮಮಡಳಿ ಅನುಮತಿ ನಿರಾಕರಿಸಿದೆ. ಈ ಎಲ್ಲದರ ಮೂಲಕ ದೇಶದಲ್ಲಿ ಒಂದು ಅಸಹಿಷ್ಣುತೆಯ ವಾತಾವರಣ ತೀವ್ರವಾಗಿ ಏರುತ್ತಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ಎಲ್ಲ ಇಂತಹ ಖಾಸಗಿ ಪಡೆಗಳ ಸೇನೆಗಳ ಮೇಲೆ, ನಿರ್ದಿಷ್ಟವಾಗಿ ಗೋರಕ್ಷಕ ಸಮಿತಿಗಳ ಮೇಲೆ ಒಂದು ಕೇಂದ್ರೀಯ ನಿಷೇಧ ತರಬೇಕು ಎಂದು ಸಿಪಿಐ(ಎಂ) ಕೇಂದ್ರಸಮಿತಿ ಆಗ್ರಹಿಸಿದೆ.

ಜಾನುವಾರು ವ್ಯಾಪಾರದ ಮೇಲೆ ನಿಷೇಧದದ ಅಧಿಸೂಚನೆಗೆ ಮದ್ರಾಸ್ ಹೈಕೋರ್ಟ್ ತಡೆ–ಯಾಜ್ಞೆಯ ನ್ನು ಅನುಸರಿಸಿ ಈಗ ಸುಪ್ರಿಂ ಕೋರ್ಟ್ ಕೂಡ ತಡೆಯಾಜ್ಞೆ ನೀಡಿದೆ. ತನ್ನ ಅಧಿಸೂಚನೆಯನ್ನು ಮಾರ್ಪಡಿಸಿ ನ್ಯಾಯಾಲಯದ ಮುಂದೆ ಮತ್ತೆ ಬರುವುದಾಗಿ ಬಿಜೆಪಿ ಸರಕಾರ ಸುಪ್ರಿಂ ಕೋರ್ಟಿಗೆ ಹೇಳಿದೆ. ಇದನ್ನು ಮಾರ್ಪಡಿಸುವ ಅಗತ್ಯವಿಲ್ಲ, ಅದಕ್ಕೆ ಅವಕಾಶವೂ ಇಲ್ಲ. **ಈ ಅಧಿಸೂಚನೆಯನ್ನು ಸಾರಾಸಗಟು ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹಿಸಿದೆ.**

ಕರ್ಷಕ ಬಿಕ್ಕಟ್ಟು:

ಈ ಅವಧಿಯಲ್ಲಿ ಕರ್ಷಕ ಬಿಕ್ಕಟ್ಟು ಉಲ್ಬಣಗೊಂಡಿದೆ. ದೇಶದ ವಿವಿಧೆಡೆಗಳಲ್ಲಿ ರೈತರ ಸ್ವಯಂ ಸ್ಫೂರ್ತ ಮತ್ತು ಸಂಘಟಿತ ಪ್ರತಿಭಟನೆಗಳು ಭುಗಿಲೆದ್ದಿವೆ. ರೈತರು ಹತಾಶರಾಗಿ ಆತ್ಮಹತ್ಯೆಗಿಳಿಯುತ್ತಿರುವ ವಿದ್ಯಮಾನ ಬೆಳೆಯುತ್ತಿರುವುದು ಇಮತಹ ಪ್ರತಿಭಟನೆಗಳು ಎದ್ದು ಬರುವಂತೆ ಮಾಡಿದೆ. ಮಧ್ಯಪ್ರದೇಶದ ಮಂದಸೌರ್‌ನಲ್ಲಿ ಪ್ರತಿಭಟಿಸುತ್ತಿದ್ದ ರಐತರ ಮೇಲ ಗೋಲೀಬಾರ್ ಮತ್ತು ಸುಮಾರಾಗಿ ಅದೇ ವಏಳೆಗೆ ಮಹಾರಾಷ್ಟ್ರದಲ್ಲಿ ರೈತರು ಘೋಷಿಸಿದ ಸಾರ್ವತ್ರಿಕ ಮುಷ್ಕರ ಕರ್ಷಕ ಸಂಕಟದ ಪ್ರಶ್ನೆಯನ್ನು ರಾಷ್ಟ್ರೀಯ ಗಮನಕ್ಕೆ ತಂದಿದೆ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ, ಮೋದಿ ಸರಕಾರ ತಾನು ನೀಡಿದ ಚುನಾವಣಾ ವಚನವನ್ನು ಮುರಿದು ವಿಶ್ವಾಸಘಾತ ಮಾಡಿದೆ ಎಂದು ಆಪಾದಿಸಿದೆ. ಕೃಷಿ ಉತ್ಪನ್ನಗಳಿಗೆ ಕೃಷಿ ಖರ್ಚುಗಳು ಮತ್ತು ಬೆಲೆಗಳ ಆಯೋಗ ಅಂದಾಜುಪಡಿಸುವ ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟಿಗಿಂತ ಹೆಚ್ಚಿನ ಮಟ್ಟದಲ್ಲಿ ಕನಿಷ್ಟ ಬೆಂಬಲ ಬೆ;ಲೆಯನ್ನು ಲಭ್ಯಗೊಳಿಸಲಾಗುವುದು ಎಂದು ಬಿಜೆಪಿ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲಿ ಆಶ್ವಾಸನೆ ನೀಡಿತ್ತು.

ಈ ಮೂರು ವರ್ಷಗಳ ವಿಶ್ವಾಸಘಾತದ ಹಿನ್ನೆಲೆಯಲ್ಲಿ ರೈತರಿಗೆ ತಮ್ಮ ಬೆಳೆಗಳನ್ನು ಮೇಲೆ ಹೇಳಿದ ಕನಿಷ್ಟ ಬೆಂಬಲ ಬೆಲೆಗಳಿಗಿಮತ ಹೆಚ್ಚಿನ ದರಗಳಲ್ಲಿ ಮಾರುವ ಹಕ್ಕನ್ನು ಕೊಡುವ ಒಂದು ಶಾಸನವನ್ನು ಸಂಸತ್ತಿನಲ್ಲಿ ತರಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹಿಸಿದೆ. ಹೀಗೆ ಮಾಡುವುದರ ಅರ್ಥ ರೈತ ತನ್ನ ಉತ್ಪನ್ನವನ್ನು ತಂದಾಗ ಅದನ್ನು ಆತನಿಗೆ ಕಾನೂನುಪ್ರಕಾರ ಸಿಗಬೇಕಾದ ಬೆಲೆಗಳನ್ನು ತೆತ್ತು ಖರೀದಿಸುವದಲ್ಲದೆ ಸರಕಾರಕ್ಕೆ ಬೇರೆ ಆಯ್ಕೆ ಯಿರುವುದಿಲ್ಲ ಎಂದು ಸಿಪಿಐ(ಎಂ) ಹೇಳಿದೆ.

ಬೆಳೆಯುತ್ತಿರುವ ನಿರುದ್ಯೋಗ:

ನೋಟುರದ್ಧತಿ ಆರ್ಥಿಕ ವ್ಯವಸ್ಥೆಯು ಅನೌಪಚಾರಿಕ ವಲಯವನ್ನು ಸಂಪೂರ್ಣವಾಗಿ ಕುಂಠಿತಗೊಳಿಸಿದ್ದರಿಂದಾಗಿ ದಿನಗೂಲಿಯ ಅಥವ ವಾರದ ಕೂಲಿಯ ಉದ್ಯೋಗ ಮಾಡಿ ಬದುಕು ಸಾಗಿಸಬೇಕಾಗಿರುವ ಅಪಾರ ಜನಸಮೂಹವನ್ನು ಬೀದಿಗೆಸೆದಂತಾಗಿದೆ. ಸಂಘಟಿತ ವಲಯದಲ್ಲೂ ಉದ್ಯೋಗಾವಕಾಶಗಳಲ್ಲಿ ತೀವ್ರ ಇಳಿಕೆಯಾಗಿದೆ. ಕಳೆದ ಕೇಂದ್ರಸಮಿತಿ ಸಭೆಯ ನಂತರ ಪ್ರಕಟವಾಗಿರುವ ಸಿಎಂಐಇ(ಭಾರತೀಯ ಆರ್ಥಿಕದ ಮೇಲ್ವಿಚಾರಣಾ ಕೇಂದ್ರ) ಮಾಹಿತಿಯ ಪ್ರಕಾರ ಜನವರಿ–ಎಪ್ರಿಲ್ 2016 ರಿಂದ ಜನವರಿ–ಎಪ್ರಿಲ್ 2017ರ ನಡುವೆ ಔಪಚಾರಿಕ ಉದ್ಯೋಗ 9.3 ಕೋಟಿಯಿಂದ 8.6 ಕೋಟಿಗೆ ಇಳಿದಿದೆ, ಅಂದರೆ 70ಲಕ್ಷ ಮಂದಿ ತಮ್ಮ ಉದ್ಯೋಗ ಕಳಕೊಂಡಿದ್ದಾರೆ. ಮನರೇಗಕ್ಕೆ ನೀಡುವ ಹಣದಲ್ಲಿ ಕಡಿತವಾಗುತ್ತಲೇ ಇದೆ, ಅಂದರೆ ಗ್ರಾಮೀಣ ಉದ್ಯೋಗವೂ ಮತ್ತಷ್ಟು ಇಳಿಯುತ್ತಿದೆ. ಸೇವಾ ವಲಯದಿಂದ ಬಂದಿರುವ ವರದಿಗಳ ಪ್ರಕಾರ ಗ್ರಾಮೀಣ ಭಾರತದಲ್ಲಿ ಹೊಸ ಉದ್ಯೋಗಗಳು ಮೂಡಿ ಬರುವ ಲಕ್ಷಣಗಳಿಲ್ಲ.

ತಾವು ಸರಕಾರ ರಚಿಸಿದರೆ ಪ್ರತಿವರ್ಷ 2 ಕೋಟಿ ಉದ್ಯೋಗತಗಳನ್ನು ನಿರ್ಮಿಸುವುದಾಗಿ ಮೋದಿ ಸರಕಾರ ಆಶ್ವಾಸನೆ ನೀಡಿತ್ತು. ಅದರ ಬದಲು ನಾವಿಂದು ಕಾಣುತ್ತಿರುವುದು ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶಗಳ ಇಳಿಕೆ. ಪ್ರತಿವರ್ಷ 1.5 ಕೋಟಿಯಷ್ಟು ಯುವಜನ ಉದ್ಯೋಗ ಮಾರುಕಟ್ಟೆಯನ್ನು ಪ್ರವೇಶಿಸುತ್ತಿರುವಾಗ ಇಂತಹ ಪರಿಸ್ಥಿತಿ ಯುವಜನರಲ್ಲಿ ಅಸಂತೋಷವನ್ನು ಉಂಟು ಮಾಡುತ್ತಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಗಮನಿಸಿದೆ.

ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣ:

ನೀತಿ ಆಯೋಗದ ಶಿಫಾರಸಿನಂತೆ, ಈ ಬಿಜೆಪಿ ಸರಕಾರ ದೊಡ್ಡಪ್ರಮಾನದಲ್ಲಿ ಸಾರ್ವಜನಿಕ ವಲಯದ ಖಾಸಗೀಕರಣಕ್ಕೆ ಅಣಿಯಾಗುತ್ತಿದೆ. ನೀತಿ ಆಯೋಗವನ್ನು ಕಾರ್ಪೊರೇಟ್ ವಲಯ ಸಂಪೂರ್ಣವಾಗಿ ಹೈಜಾಕ್ ಮಾಡಿದೆ, ಅದರ ಎಲ್ಲ ಪ್ರಸ್ತಾವಗಳೂ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ದೊಡ್ಡ ದೇಶೀ ಕಾರ್ಪೊರೇಟ್ ಮನೆತನಗಳ ನವ–ಉದಾರವಾದಿ ಆರ್ಥಿಕ ಸುಧಾರಣೆಗಳ ದಿಕ್ಕಿನಲ್ಲಿ ಮಾಡುತ್ತಿರುವ ಆಗ್ರಹಗಳಿಗೆ ಅನುಗುಣವಾಗಿಯೇ ಇವೆ. **ಬೆಲೆಬಾಳುವ ಸಾರ್ವಜನಿಕ ಆಸ್ತಿಗಳನ್ನು ವಿದೇಶಿ ಮತ್ತು ದೇಶೀ ಖಾಸಗಿ ಬಂಡವಾಳಕ್ಕೆ ಅತ್ಯಂತ ಅಗ್ಗವಾಗಿ ವಹಿಸಿಕೊಡುವುದು ಈ ಸರಕಾರ ಅನುಸರಿಸುತ್ತಿರುವ ಉಗ್ರ ನವ–ಉದಾರವಾದಿ ಸುಧಾರಣೆಗಳ ಭಾಗವೇ ಆಗಿದೆ.**

ರಕ್ಷಣಾ ಉತ್ಪಾದನಾ ಕೇಂದ್ರಗಳ ಖಾಸಗೀಕರಣದ ದೊಡ್ಡ ಪ್ರಯತ್ನ ಆಗಲೇ ಆರಂಭವಾಗಿದೆ. ಇದು ವಿದೇಶಿ ರಕ್ಷಣಾ ಉಪಕರಣಗಳನ್ನು ಉತ್ಪಾದಿಸುವ ಕಾರ್ಪೊರೇಟ್‌ಗಳಿಗೆ ದೊಡ್ಡ ಬಕ್ಷೀಸು ಒದಗಿಸುವುದಲ್ಲದೆ, ಭಾರತದ ಭದ್ರತೆಗೂ ಒಂದು ಗಂಭೀರ ಬೆದರಿಕೆಯನ್ನು ಒಡ್ಡುತ್ತದೆ. ಏರ್ ಇಂಡಿಯಾದ ಖಾಸಗೀಕರಣದ ಪ್ರಕ್ರಿಯೆ ಆರಂಭವಾಗಿದೆ. ನಮ್ಮ ದೇಶವನ್ನು ಮತ್ತು ಜನತೆಯನ್ನು ಒಂದುಗೂಡಿಸುವ ಜೀವನಾಡಿಯಾದ ಭಾರತೀಯ ರೈಲ್ವೆಯನ್ನು ಈಗ ಖಾಸಗೀಕರಿಸುವ ಪ್ರಯತ್ನ ನಡೆದಿದೆ. ಕೋಟ್ಯಂತರ ಭಾರತೀಯರಿಗೆ ರೈಲ್ವೆಯು ಪ್ರಯಾಣ, ಜೀವನಾಧಾರ ಮತ್ತು ಸಂಪರ್ಕದ ಏಕಮಾತ್ರ ಜೀವನಾಡಿ. ಇದರ ಖಾಸಗೀಕರಣ ಅವರ ಮೇಲೆ ತೀವ್ರ ಹೊರೆಗಳನ್ನು ಹಾಕಲಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಹಣಕಾಸು ವಲಯುದಲ್ಲಿ ಸರಕಾರ ತರಬೇಕೆಂದಿರುವ ಹೊಸ ಎಫ್‌ಆರ್‌ಡಿಐ ಶಾಸನ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳನ್ನು ಯಾವುದೇ ರೀತಿಯ ಸಾರ್ವಜನಿಕ ಪರೀಕ್ಷಣೆ ಮತ್ತು ಸಾಮಾಜಿಕ ಹತೋಟಿಯಿಂದ ಸಂಪೂರ್ಣವಾಗಿ ಹೊರಗಿಡುತ್ತದೆ.

ಆಧಾರ್ ಮತ್ತು ಏಕಾಂತತೆಯ ಹಕ್ಕು:

ಏಕಾಂತತೆ ಒಬ್ಬ ವ್ಯಕ್ತಿಯ ಮೂಲಭೂತ ಹಕ್ಕು ಎಂಬ ಪ್ರಶ್ನೆಯ ಬಗ್ಗೆ ಸುಪ್ರಿಂ ಕೋರ್ಟಿನ ಒಮದು ಸಂವಿಧಾನ ಪೀಠ ಪರಿಶೀಲಿಸುತ್ತಿದೆ. ಈ ಹಕ್ಕಿನ ಮೇಲೆ ತರ್ಕಬದ್ಧ ನಿರ್ಬಂಧಗಳಿರಬೇಕು, ಆಧಾರ್‌ಗೆ ತಗೊಂಡಿರುವ ಜೈವಿಕ ಮಾಪನಗಳ ವೈಯಕ್ತಿಕ ಮಾಹಿತಿಗಳನ್ನು ನಿರ್ದಿಷ್ಟ ಪರಿಸ್ತಿತಿಗಳಲ್ಲಿ, ಸ್ಪಷ್ಟವಾಗಿ ನಿರೂಪಿತ ಕಾರಣಗಳಿಗಾಗಿ ಪಡೆಯುವಂತಾಗಬೇಕು ಎಂದು ಈ ಬಿಜೆಪಿ ಸರಕಾರ ಹೇಳುತ್ತಿದೆ.

ಇಲ್ಲಿರುವುದು ಭಯೋತ್ಪಾದನೆಯ ವಿರುದ್ಧ ಹೋರಾಡುವಲ್ಲಿಯೀಓ ಅಥವ ಆಂತರಿಕ ಭದ್ರತೆ–

⇨ ಪುಟ 3

ತಕ್ಷಣವೇ ಜಿಎಸ್‌ಟಿ ಮಂಡಳಿ ತೆರಿಗೆ ಸಂರಚನೆಯ ಪರಾಮರ್ಶೆ ಮತ್ತು ಪರಿಷ್ಕರಣೆ ಮಾಡಿ ತೆರಿಗೆ ಹೊರೆಯನ್ನು ಇಳಿಸಬೇಕು–ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹ

ಜುಲೈ 1, 2017ರಿಂದ ಜಾರಿಗೆ ತಂದಿರುವ ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ)ಯ ಪ್ರತಿಕೂಲ ಪರಿಣಾಮಗಳ ಬಗ್ಗೆ ಸಿಪಿಐ(ಎಂ) ಕೇಂದ್ರ ಸಮಿತಿ ಆಳವಾದ ಆತಂಕ ವ್ಯಕ್ತಪಡಿಸಿದೆ. ಜುಲೈ 24ರಿಂದ 26 ರವರೆಗೆ ದಿಲ್ಲಿಯಲ್ಲಿ ಸಭೆ ಸಏರಿದ ಕೇಂದ್ರ ಸಮಿತಿ ಈ ಕುರಿತಂತೆ ಒಂದು ಪ್ರತ್ಯೇಕ ಠರಾವನ್ನೇ ಅಂಗೀಕರಿಸಿದೆ.

ಜಿಎಸ್‌ಟಿ ಜನಸಾಮಾನ್ಯರು, ಸಣ್ಣ ಮತ್ತು ಪುಟ್ಟ ಉದ್ದಿಮೆಗಳು, ವ್ಯಾಪಾರಸ್ಥರು ಮತ್ತು ಅಸಂಘಟಿತ ವಲಯದ ವೃತ್ತಿಗಳ ಮೇಲೆ ಹೊಸ ಹೊರೆಗಳನ್ನು ಹಾಕಿದೆ. ಜವಳಿ, ಬೀಡಿ, ಔಷಧಿಗಳು, ಕಟ್ಟಡ ನಿರ್ಮಾಣ, ಸಾರಿಗೆ, ಹೊಲಿಗೆ, ಸಣ್ಣ ಪತ್ರಿಕೆಗಳು, ಬೆಂಕಿಪೊಟ್ಟಣಗಳು, ಮತ್ತು ಸುಡುಮದ್ದುಗಳ ಮೇಲೂ ಬಹಳ ಕೆಟ್ಟ ಪರಿಣಾಮ ಉಂಟಾಗಿದೆ; ಕೃಷಿ ಮತ್ತು ಸಂಬಂಧಿತ ವಲಯಗಳ ಮೇಲೂ ದುಷ್ಪರಿಣಾಮ ಉಂಟಾಗಿದೆ. ಜಿಎಸ್‌ಟಿ ಹಲವು ಸರಕುಗಳ ಬೆಲೆಗಳನ್ನು ಕೆಳಕ್ಕೆ ತಂದಿದೆ ಎಂದು ಸರಕಾರ ಹೇಳಿಕೊಂಡರೂ ನಿಜ ಸಂಗತಿಯೆಂದರೆ ಅಸಮ ತೆರಿಗೆ ರಚನೆಯಿಂದಾಗಿ ಹಲವು ಸರಕುಗಳು ಮತ್ತು ಸೇವೆಗಳ ಬೆಲೆಗಳು ಏರಿವೆ.

ಪರೋಕ್ಷ ತೆರಿಗೆಗಳ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಈಗ ಜಾರಿಗೆ ತಂದಿರುವ ರೀತಿಯಲ್ಲಿ ಜಿಎಸ್‌ಟಿ ಮೋದಿ ಸರಕಾರದ ನವ–ಉದಾರವಾದಿ ಧಾವಂತದ ಒಂದು ಭಾಗವಾಗಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಜಿಎಸ್‌ಟಿ ಸಂರಚನೆ ಕಾರ್ಪೊರೇಟ್‌ಗಳಿಗೆ ಅನುಕೂಲ ಕಲ್ಪಿಸುವತ್ತಲೇ ಒತ್ತು ನೀಡುವಂತಿದೆ. ಎಲ್ಲಿ ತೆರಿಗೆ ದರಗಳು ಇಳಿದಿವೆಯೋ ಅದರ ಪ್ರಯೋಜನವನ್ನು ಬಳಕೆದಾರರಿಗೆ ವರ್ಗಾಯಿಸುತ್ತಿಲ್ಲ, ಬದಲಿಗೆ ಅದರಿಂದ ಕಾರ್ಪೊರೇಟ್‌ಗಳಿಗೆ ಲಾಭದ ಸುರಿಮಳೆಯಾಗುತ್ತಿದೆ ಎಂದು ಗಮನಿಸಿರುವ ಕೇಂದ್ರ ಸಮಿತಿ, ನಿರ್ದಿಷ್ಟವಾಗಿ, ಅಂಗವಿಕಲರು ಬಳಸುವ ಸಾಧನಗಳ ಮೇಲೆ 5%, ಸ್ಯಾನಿಟರಿ ನ್ಯಾಪ್ಕಿನ್‌ಗಳ ಮೇಲೆ 12%, ಎಸಿ ಮತ್ತು ಎಸಿಯೇತರ ರೆಸ್ಟೋರೆಂಟ್‌ಗಳಲ್ಲಿ ಅನುಕ್ರಮವಾಗಿ 18% ಮತ್ತು 12%, ಮತ್ತು ಅಗತ್ಯ ಔಷಧಿಗಳ ಮೇಲೆ ಜಿಎಸ್‌ಟಿ ಇವೆಲ್ಲ ಸಮರ್ಥನೀಯವಲ್ಲ ಎಂದು ಅಭಿಪ್ರಾಯ ಪಟ್ಟಿದೆ.

ಕೃತ್ರಿಮ ನೂಲಿನ ಮೇಲೆ 18% ತೆರಿಗೆಯಿಂದಾಗಿ ಹೆಚ್ಚಾಗಿ ಬಡ ಹೆಂಗಸರೇ ಉಡುವ ಸಿಂಥೆಟಿಕ್ ಸೀರೆಗಳು ಹೆಚ್ಚು ವೆಚ್ಚದಾಯಕವಾಗಿವೆ. ಕಲ್ಲಿದ್ದಲೇತರ ಗಣಿಗಾರಿಕೆ, ಬೀಡಿ, ಸಿನೆಮಾ ಮುಂತಾದ ವಲಯಗಳಲ್ಲಿ ಕಲ್ಯಾಣಕಾರಿ ಸೆಸ್‌ಗಳು ಜಿಎಸ್‌ಟಿಯೊಳಗೆ ಸೇರಿ ಹೋಗಿರುವುದರಿಂದ ಈ ವಲಯಗಳಲ್ಲಿನ ಕಾರ್ಮಿಕರ ಕಲ್ಯಾಣ/ ಸಾಮಾಜಿಕ ಭದ್ರತೆಗೆ ಸಂಚಕಾರ ಬಂದಿದೆ. ಸ್ವಚ್ಛ ಇಂಧನ ಮತ್ತು ಕಾರ್ಬನ್ ತೆರಿಗೆಯ ಸೆಸ್‌ಗಳನ್ನು ರಾಜ್ಯ ಜಿಎಸ್‌ಟಿ ಪರಿಹಾರದತ್ತ ತಿರುಗಿಸುವುದರಿಂದ ಸ್ವಚ್ಛ ಇಂಧನ ಪ್ರೋತ್ಸಾಹಕ್ಕೆ ಭಾರೀ ಹೊಡೆತ ಬೀಳುತ್ತದೆ.

ವಾರ್ಷಿಕ 20 ಲಕ್ಷ ರೂ.ಗಳಿಗಿಂತ ಹೆಚ್ಚು ವಹಿವಾಟಿನ ಸಣ್ಣ ವ್ಯಾಪಾರಿಗಳು ತಮ್ಮ ರಿಟರ್ನ್‌ಗಳನ್ನು ಇಂಟರ್‌ನೆಟ್ ಮೂಲಕವೇ ಸಲ್ಲಿಸಬೇಕಾಗಿದೆ ಮತ್ತು ತಮ್ಮ ಲಾಗುವಾಡು ತೆರಿಗೆಗಳ ಪಾವತಿ ಪಡೆಯಬೇಕಾಗಿದೆ, ಇದರಿಂದ ಅವರಿಗೆ ತಮ್ಮ ವ್ಯವಹಾರಗಳನ್ನು ನಡೆಸಲು ಬಹಳ ಕಷ್ಟವಾಗುತ್ತಿದೆ.

ಬಳಕೆ ಸರಕುಗಳಲ್ಲಿ ಹಣದುಬ್ಬರದ ಮತ್ತು ಸರ್ವತೋಮುಖ ಹೆಚ್ಚಳದ ಬೆದರಿಕೆ ಇದೆ. ಜಿಎಸ್‌ಟಿ ವ್ಯವಸ್ಥೆ ಒಕ್ಕೂಟ ರಚನೆಯನ್ನು ಬುಡಮೇಲು ಮಾಡಿ ರಾಜ್ಯಗಳ ಹಕ್ಕುಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ.

ಜಿಎಸ್‌ಟಿ ಮಂಡಳಿಯು ಮೂಲಕ ಕೂಡಲೇ ಜಿಎಸ್‌ಟಿ ತೆರಿಗೆ ಸಂರಚನೆಯ ಪರಾಮರ್ಶೆ ಮತ್ತು ಪರಿಷ್ಕರಣೆಗೆ ಕ್ರಮಗಳನ್ನು ಕೈಗೊಂಡು ಅತಾರ್ಕಿಕ ಮತ್ತು ಅಸಮ ತೆರಿಗೆಗಳನ್ನು ತೆಗೆದು ಹಾಕಬೇಕು ಇಲ್ಲವೇ ಇಳಿಸಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಕೇಂದ್ರ ಸರಕಾರವನ್ನು ಆಗ್ರಹಿಸಿದೆ. ಉದಾಹರಣೆಗೆ, ಅಂಗವಿಕಲರು ಬಳಸುವ ಸಾಧನಗಳ ಮೇಲಿನ ತೆರಿಗೆಗಳನ್ನು ಸೊನ್ನೆಗೆ ಇಳಿಸಬೇಕು; ಔಷಧಿ ಬೆಲೆ ಹತೋಟಿ ಆದೇಶದ ಅಡಿಯಲ್ಲಿ ಅಗತ್ಯ ಔಷಧಿಗಳ ರಾಷ್ಟ್ರೀಯ ಪಟ್ಟಿಯ ಮೇಲೆ ಜಿಎಸ್‌ಟಿ ಇರಬಾರದು; ಸ್ಯಾನಿಟರಿ ನ್ಯಾಪ್ಕಿನ್‌ಗಳ ಮೇಲಿನ ತೆರಿಗೆಯನ್ನು ರದ್ದು ಮಾಡಬೇಕು; ಜಿಎಸ್‌ಟಿ ಅಡಿಗೆ ತರುವ ವ್ಯಾಪಾರಿಗಳ ವಾರ್ಷಿಕ ವಹಿವಾಟಿನ ಮಿತಿಯನ್ನು 20ಲಕ್ಷ ರೂ.ಗಳಿಂದ ಗಣನೀಯವಾಗಿ ಏರಿಸಬೇಕು ಇತ್ಯಾದಿ.

ಜಿಎಸ್‌ಟಿ ಮಂಡಳಿಯು ನಿರ್ಧಾರಗಳನ್ನು ಸಂಸದೀಯ ಪರೀಕ್ಷಣೆಗೆ ಒಳಪಡಿಸಬೇಕು ಹಾಗೂ ಜಿಎಸ್‌ಟಿಎನ್(ಜಿಎಸ್‌ಟಿ ನೆಟ್‌ವರ್ಕ್)ನ್ನು ಸಿಎಜಿ(ಮಹಾ ಲೆಕ್ಕ ಪರಿಶೋಧಕರು) ಮತ್ತು ಆರ್‌ಟಿಐ(ಮಾಹಿತಿ ಹಕ್ಕು) ಕಾಯ್ದೆಯ ವ್ಯಾಪ್ತಿಗೆ ಒಳಪಡಿಸಬೇಕು ಎಂದೂ ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹಿಸಿದೆ.

ಜಿಎಸ್‌ಟಿ ಯನ್ನು ಜಾರಿಗೆ ತಂದಂದಿನಿಂದ ವಿವಿಧ ಜನವಿಭಾಗಗಳು ಪ್ರತಿಭಟಿಸಿ ಬೀದಿಗಿಳಿದಿವೆ, ವಿವಿಧ ವಲಯಗಳಲ್ಲಿ ಮುಷ್ಕರಗಳು ನಡೆದಿವೆ. ಇದನ್ನು ಗಮನಿಸಿರುವ ಸಿಪಿಐ(ಎಂ) ಕೇಂದ್ರಸಮಿತಿ ಜಿಎಸ್‌ಟಿ ಮೂಲಕ ವಿವಿಧ ವಿಭಾಗಗಳು ಮತ್ತು ವಲಯಗಳ ಮೇಲೆ ಹೇರಿರುವ ಹೊರೆಗಳನ್ನು ತೆಗೆಯುವಂತೆ ಪ್ರತಿಭಟನಾ ಕಾರ್ಯಾಚರಣೆಗಳನ್ನು ಮತ್ತು ಹೋರಾಟಗಳನ್ನು ಸಂಘಟಿಸಬೇಕು, ಬೆಂಬಲಿಸಬೇಕು ಮತ್ತು ಅವುಗಳಲ್ಲಿ ಸಕ್ರಿಯವಾಗಿ ಬಾಗವಹಿಸಬೇಕು ಎಂದು ಪಕ್ಷದ ಎಲ್ಲ ಘಟಕಗಳಿಗೆ ಕರೆ ನೀಡಿದೆ.

ಆಗಸ್ಟ್ 15–31: ದೇಶವ್ಯಾಪಿ ಪ್ರತಿಭಟನಾ ಚಳುವಳಿಗಳು: ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

⇨ ಪುಟ 2 ರಿಂದ

ಗಾಗಿಯೋ ಒಬ್ಬ ವ್ಯಕ್ತಿಯ ಏಕಾಂತತೆಯನ್ನು ಉಲ್ಲಂಘಿಸುವ ಪ್ರಶ್ನೆ ಅಲ್ಲ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಇಂದಿನ ಜಗತ್ತಿನಲ್ಲಿ ಈ ವಯಯಕ್ತಿಕ ಮಾಹಿತಿಗಳನ್ನು ದೊಡ್ಡ ಜಾಗತಿಕ ಕಾರ್ಪೊರೇಟ್‌ಗಳು ಮತ್ತು ಭಾರತೀಯ ಕಾರ್ಪೊರೇಟ್‌ಗಳು ತಮ್ಮ ಲಾಭಗಳನ್ನು ಹಿಗ್ಗಿಸಿಕೊಳ್ಳಲು ಹಾಗೂ ವ್ಯಕ್ತಿಗಳಿಗೆ ಕಿರುಕುಳ ಕೊಡಲು ಪಡೆಯುತ್ತವೆ ಎಂಬ ಪ್ರಶ್ನೆ ಇಲ್ಲಿದೆ ಎಂದಿದೆ. ಪ್ರತಿಯೊಬ್ಬ ವ್ಯಕ್ತಿಗೆ ಇಂತಹ ದುಡ್ಡುಮಾಡುವ ಕಾರ್ಪೊರೇಟ್ ಚಟುವಟಿಕೆಗಳಿಂದ ರಕ್ಷಣ ಎಕೊಡುವ ಅಗತ್ಯವಿದೆ. ಆದ್ದರಿಂದ ಸರಕಾರ ವ್ಯಕ್ತಿಗಳ ಏಕಾಂತತೆಗೆ ರಕ್ಷಣೆ ಒದಗಿಸುವ ಮತ್ತು **ಇತ್ತೀಚೆಗೆ ಜಿಯೋ ವೆಬ್‌ತಾಣಗಳಿಂದ ಆಧಾರ್ ಮಾಹಿತಿಯನ್ನು ಉಲ್ಲಂಘಿಸಿದ ಉದಾರಣೆಯಲ್ಲಿ ಕಂಡಿರುವಂತೆ ಯಾವುದೇ ಉಲ್ಲಂಘನೆಗೆ ಶಿಕ್ಷೆಯನ್ನು ಸ್ಪಷ್ಟವಾಗಿ ವಿಧಿಸುವ ಒಂದು ಹೊಸ ಕಾನೂನನ್ನು ತರಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹಿಸಿದೆ.**

ಕೇರಳ: ಆರೆಸ್ಸೆಸ್ ಅಪಪ್ರಚಾರ

ಕೇರಳದಲ್ಲಿ ಎಲ್‌ಡಿಎಫ್ ಸರಕಾರ ಬಂದಂದಿನಿಂದ ಇದುವರೆಗೆ ಆರೆಸ್ಸೆಸ್ ಹಲ್ಲೆಗಳಲ್ಲಿ 13 ಸಂಗಾತಿಗಳ ಕೊಲೆಯಾಗಿದೆ, 200ಕ್ಕೂ ಹೆಚ್ಚು ಪಕ್ಷದ ಸದಸ್ಯರು ಮತ್ತು ಹಿತೈಷಿಗಳು ಗಾಯಗೊಂಡಿದ್ದಾರೆ, ಆಸ್ಪತ್ರೆ ಸೇರಿಸಬೇಕಾಗಿ ಬಂದಿದೆ, 150ಕ್ಕೂ ಹೆಚ್ಚು ಮನೆಗಳು ಮತ್ತು 50ಕ್ಕೂ ಹೆಚ್ಚು ಪಕ್ಷದ ಕಚೇರಿಗಳ ಮೇಲೆ ದಾಳಿನಡೆದಿದೆ, ಹಾಳುಗೆಡವಲಾಗಿದೆ ಅಥವ ಬೆಂಕಿ ಹಚ್ಚಲಾಗಿದೆ.

ಯುಡಿಎಫ್ ಸರಕಾರದ ಐದು ವರ್ಷಗಳಲ್ಲಿ ಆರೆಸ್ಸೆಸ್ ಗೂಂಡಾಗಳು ನಮ್ಮ 27 ಸಂಗಾತಿಗಳನ್ನು ಕೊಂದಿದ್ದರು. ಇಂತಹ ದಾಳಿಗಳು ಈಗಲೂ ಮುಂದುವರೆಯುತ್ತಿವೆ, ಆದರೆ ಸಿಪಿಐ(ಎಂ) ಅತ್ಯಾಚಾರ ನಡೆಸುತ್ತಿದೆ ಎಂದು ಆಧಾರರಹಿತವಾಗಿ ಆಪಾದಿಸಲಾಗುತ್ತಿದೆ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ, ಇದು ಅವರ ಕೊಲೆ ಮತ್ತು ಹಿಂಸಾಚಾರದ ಕೃತ್ಯಗಳನ್ನು ಮರೆಮಾಚಲಿಕ್ಕಾಗಿ ಎಂದು ಹೇಳಿದೆ.

ತ್ರಿಪುರಾದಲ್ಲಿ ಬಿಜೆಪಿ ಪಿತೂರಿಗಳು

ಈ ರಾಜ್ಯದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಳಿಗೆ ತಯಾರಿಯಾಗಿ ಆರೆಸ್ಸೆಸ್–ಬಿಜೆಪಿ ಎಡರಂಗ ಸರಕಾರವನ್ನು ಅಸ್ಥಿರಗೊಳಿಸಲು ಸರ್ವಪ್ರಯತ್ನ ನಡೆಸುತ್ತಿವೆ. ಬುಡಕಟ್ಟು ಜನಗಳು ಮತ್ತು ಇತರರ ನಡುವೆ ಧ್ರುವೀಕರಣ ಸೃಷ್ಟಿಸುವ ಪ್ರಯತ್ನಗಳನ್ನು ಅವರು ತೀವ್ರಗೊಳಿಸುತ್ತಿದ್ದಾರೆ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಇತ್ತೀಚೆಗೆ ಐಪಿಎಫ್‌ಟಿ ಹೆದ್ದಾರಿಯಲ್ಲಿ ಸಂಚಾರವನ್ನು ಸ್ತಬ್ಧಗೊಳಿಸಿದಾಗ ಅದನ್ನು ತ್ರಿಪುರಾ ಸಿಪಿಐ(ಎಂ) ಮತ್ತು ರಾಜ್ಯ ಸರಕಾರ ನಿಭಾಯಿಸಿದ ರೀತಿಯ ಬಗ್ಗೆ ತೃಪ್ತಿ ವ್ಯಕ್ತಪಡಿಸಿದೆ.

ಬಿಜೆಪಿಯ ನಿರಂತರ ದಾಳಿಗಳನ್ನು ಎದುರಿಸಲು ಮತ್ತು ಮುಂದಿನ ಚುನಾವಣೆಗಳಿಗೆ ಪಕ್ಷದ ತ್ರಿಪರಾ ರಾಜ್ಯಸಮಿತಿ ನಡೆಸುತ್ತಿರುವ ಸಿದ್ಧತೆಗಳ ಬಗ್ಗೆ ವರದಿಯನ್ನು ಆಲಿಸಿದ ಸಿಪಿಐ(ಎಂ) ಕೇಂದ್ರ ಸಮಿತಿ ತ್ರಿಪುರಾದ ಶಾಂತಿಪ್ರಿಯ ಜನತೆ ಬಿಜೆಪಿಯ ಹಿಂಸಾಚಾರದ ದಾಖಲೆಗಳ ಬಗ್ಗೆ ಜಾಗೃತಗೊಂಡು, ಅದು ನಡೆಸುತ್ತಿರುವ ಈ ಎಲ್ಲ ಪಿತೂರಿಗಳನ್ನು ವಿಫಲಗೊಳಿಸುತ್ತಾರೆ, ಮತ್ತು ಎಡರಂಗದಲ್ಲಿ ತಮ್ಮ ವಿಶ್ವಾಸವನ್ನು ಪುನರುಚ್ಚರಿಸುತ್ತಾರೆ, ಮುಂಬರುವ ಚುನಾವಣೆಗಳಲ್ಲಿ ಎಡರಂಗದ ಅಭ್ಯರ್ಥಿಗಳನ್ನು ಮತ್ತೊಮ್ಮೆ ಆಯ್ಕೆ ಮಾಡುತ್ತಾರೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದೆ.

ಕೇರಳ ಮತ್ತು ತ್ರಿಪುರ–ಅತ್ಯುತ್ತಮ ಶಿಕ್ಷಣ, ಆರೋಗ್ಯ ಸೂಚ್ಯಂಕಗಳು

ಭಾರತ ಸರಕಾರದ ಇತ್ತೀಚಿನ ಮಾಹಿತಿಗಳ ಪ್ರಕಾರ ಕೇರಳ ಮತ್ತು ತ್ರಿಪುರ ಅತ್ಯುತ್ತಮ ಶಿಕ್ಷಣ ಮತ್ತು ಆರೋಗ್ಯದ ಸೂಚ್ಯಂಕಗಳನ್ನು ಸಾಧಿಸಿರುವ ರಾಜ್ಯಗಳು. 96% ಸಾಕ್ಷರತೆ ಮತ್ತು ಸರಾಸರಿ ಆಯಸ್ಸು– ಪುರುಷರು 71 ವರ್ಷ, ಮಹಿಳೆಯರು 73ವರ್ಷದೊಂದಿಗೆ ತ್ರಿಪುರ ಇಡೀ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಸಿಪಿಐ(ಎಂ) ಎಡರಂಗ ಸರಕಾರಗಳು ಜಾರಿ ಮಾಡುತ್ತಿರುವ ಈ ಜನಪರ ಪ್ರಗತಿಶೀಲ ಧೋರಣೆಗಳೇ ಬಿಜೆಪಿಯ ದಾಳಿಯ ಗುರಿಗಳು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಟೀಕಿಸಿದೆ.

ಕಾಶ್ಮೀರ– ಆಶ್ವಾಸನೆಗಳನ್ನು ಈಡೇರಿಸಿಲ್ಲ

ಗೃಹಮಂತ್ರಿಗಳ ನೇತೃತ್ವದ ಸರ್ವಪಕ್ಷ ಸಂಸದೀಯ ನಿಯೋಗ ಕಾಶ್ಮೀರಕ್ಕೆ ಭೇಟಿ ನೀಡಿ ಬಂದ ನಂತರ ಕಾಶ್ಮೀರದ ಜನತೆಗೆ, ಭಾರತದ ಸಂಸತ್ತಿಗೆ ಮತ್ತು ದೇಶಕ್ಕೆ ನೀಡಿದ್ದ ಎರಡೂ ಆಶ್ವಾಸನೆಗಳನ್ನು ಈಡೇರಿಸಿಲ್ಲೆಂದು ಕೇಂದ್ರ ಸಮಿತಿ ಗಮನಿಸಿತು. ಪೆಲೆಟ್‌ಗನ್‌ಗಳನ್ನು ಬಳಸದಿರುವುದು, ಕಾಶ್ಮೀರಿ ಯುವಜನತೆಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು ಇತ್ಯಾದಿ ವಿಶ್ವಾಸ ಕುದುರಿಸುವ ಕ್ರಮಗಳನ್ನು ಕೈಗೊಳ್ಳುವುದಾಗಿ ಮತ್ತು ಅದರೊಂದಿಗೇ, ಸಂಬಂಧಪಟ್ಟ ಎಲ್ಲರೊಮದಿಗೆ ಒಂದು ರಾಜಕೀಯ ಸಂವಾದವನ್ನು ಆರಂಭಿಸುವುದಾಗಿ ಸರಕಾರ ಆಗ ಪ್ರಕಟಿಸಿತ್ತು. ಇಗ ಆರು ತಿಂಗಳಾದರೂ ಈ ಎರಡು ಆಶ್ವಾಸನೆಗಳಿಗೆ ಸಂಬಂಧಪಟ್ಟಂತೆ ಒಂದೇ ಒಂದು ಹೆಜ್ಜೆಯನ್ನೂ ಮುಂದಿಟ್ಟಿಲ್ಲ. ಇದು ಕಾಶ್ಮೀರಿ ಜನತೆಯಲ್ಲಿ ಪರಕೀಯ ಭಾವ ಮತ್ತಷ್ಟು ಹೆಚ್ಚುವಲ್ಲಿ ದೊಡ್ಡ ಪಾತ್ರ ವಹಿಸಿದೆ ಎಂದು ಕೇಂದ್ರ ಸಮಿತಿ ಖೇದ ವ್ಯಕ್ತಪಡಿಸಿದೆ.

ಕೇಂದ್ರ ಸರಕಾರ ಸಂಬಂಧಪಟ್ಟ ಎಲ್ಲರೊಂದಿಗೆ ಒಂದು ರಾಜಕೀಯ ಸಂವಾದವನ್ನು ಆರಂಭಿಸುವಂತೆ ಆಗ್ರಹಿಸಲು ಸಾಧ್ಯವಾದಷ್ಟು ವ್ಯಾಪಕವಾಗಿ ರಾಜಕೀಯ ಶಕ್ತಿಗಳನ್ನು ಮತ್ತು ಜನತಾ ಆಂದೋಲನಗಳನ್ನು ಒಟ್ಟಿಗೆ ತರುವ ತನ್ನ ಪ್ರಯತ್ನಗಳನ್ನು ಸಿಪಿಐ(ಎಂ) ಮುಂದುವರಿಸತ್ತದೆ ಎಂದು ಕೇಂದ್ರ ಸಮಿತಿ ಹೇಳಿದೆ.

22ನೇ ಸಿಪಿಐ(ಎಂ) ಮಹಾಧಿವೇಶನ ಹೈದರಾಬಾದಿನಲ್ಲಿ

ಪಕ್ಷದ 22ನೇ ಮಹಾಧಿವೇಶನವನ್ನು ತೆಲಂಗಾಣ ರಾಜ್ಯದ ಹೈದರಾಬಾದಿನಲ್ಲಿ ಎಪ್ರಿಲ್ 2018ರಲ್ಲಿ ನಡೆಸಲು ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧರಿಸಿದೆ.

ಪಶ್ಚಿಮ ಬಂಗಾಲ ರಾಜ್ಯಸಭಾ ಚುನಾವಣೆ

ಸಿಪಿಐ(ಎಂ) ಕೇಂದ್ರ ಸಮಿತಿಯು ಸಭೆ ಸೀತಾರಾಮ್ ಯೆಚುರಿಯವರನ್ನು ರಾಜ್ಯಸಭೆಯ ಮೂರನೇ ಅವಧಿಗೆ ಸೂಚಿಸಬೇಕೆನ್ನುವ ಪಶ್ಚಿಮ ಬಂಗಾಲ ರಾಜ್ಯ ಸಮಿತಿಯ ಪ್ರಸ್ತಾವವನ್ನು ತಿರಸ್ಕರಿಸಿದೆ. ಪಶ್ಚಿಮ ಬಂಗಾಲದ ಪ್ರತಿಪಕ್ಷಗಳಿಗೆ ಒಪ್ಪಿಗೆಯಾಗುವ ಒಬ್ಬ ಸ್ವತಂತ್ರ ಅಭ್ಯರ್ಥಿಯನ್ನು ಕಣಕ್ಕಿಳಿಸಬಹುದು ಎಂಬ ಅಭಿಪ್ರಾಯವನ್ನು ಕೇಂದ್ರ ಸಮಿತಿ ವ್ಯಕ್ತಪಡಿಸಿತು. ಇದು ಸಾಧ್ಯವಾಗದಿದ್ದರೆ ಪಶ್ಚಿಮ ಬಂಗಾಳ ಎಡರಂಗ ಸಮಿತಿ ಸ್ಪರ್ಧಿಸುವ ಬಗ್ಗೆ ಪರಿಶೀಲಿಸುತ್ತದೆ ಎಂದು ಅದು ಹೇಳಿದೆ.

ಪಕ್ಷದ ಪಶ್ಚಿಮ ಬಂಗಾಲ ರಾಜ್ಯ ಕಾರ್ಯದರ್ಶಿ ಮಂಡಳಿ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರ ಪ್ರಸಕ್ತ ರಾಜ್ಯಸಭೆಯ ಸದಸ್ಯತ್ವದ ಅವಧಿ ಪೂರ್ಣಗೊಂಡ ನಂತರ ಅವರನ್ನು ಪಶ್ಚಿಮ ಬಂಗಾಲದಿಂದ ಮತ್ತೆ ನಿಲ್ಲಿಸಬೇಕು ಎಂದು ಕೋರಿತ್ತು. ಜೂನ್ 6 ಮತ್ತು 7ರಂದು ನಡೆದ ಪೊಲಿಟ್‌ಬ್ಯುರೊ ಸಭೆ ಇದನ್ನು ಚರ್ಚಿಸಿ ಈ ಪ್ರಸ್ತಾವವನ್ನು ಸ್ವೀಕರಿಸದಿರಲು ನಿರ್ಧರಿಸಿತು. ಈ ನಿರ್ಧಾರಕ್ಕೆ ಕಾರಣಗಳು:

1. ಪಶ್ಚಿಮ ಬಂಗಾಲ ವಿಧಾನ ಸಭೆಯಲ್ಲಿ ಎಡರಂಗದ ಪ್ರಸಕ್ತ ಬಲ 31 ಮಾತ್ರವಾಗಿದ್ದು ಯೆಚುರಿಯವರು 37 ಶಾಸಕರನ್ನು ಹೊಂದಿರುವ ಕಾಂಗ್ರೆಸಿನ ಬೆಂಬಲದಿಂದ ಮಾತ್ರವೇ ಆಯ್ಕೆಯಾಗಲು ಸಾಧ್ಯ. ಅಂದರೆ ಪಕ್ಷದ ಪ್ರಧಾನ ಕಾರ್ಯದರ್ಶಿ ರಾಜ್ಯಸಭೆಗೆ ಕಾಂಗ್ರೆಸಿನ ಬೆಂಬಲದಿಂದ ಹೋಗಬೇಕಾಗುತ್ತದೆ. ಇದು ಪಕ್ಷ 21ನೇ ಮಹಾಧಿವೇಶನದಲ್ಲಿ ಅಂಗೀಕರಿಸಿದ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಗೆ ಅನುಗುಣವಾಗಿರುವಂತದ್ದಲ್ಲ.
2. 1964ರಲ್ಲಿ ಸಿಪಿಐ(ಎಂ) ಸ್ಥಾಪನೆಯಾದಂದಿನಿಂದಲೂ, ಪ್ರಧಾನ ಕಾರ್ಯದರ್ಶಿ ಸಂಸದೀಯ ವೇದಿಕೆಗಳಲ್ಲಿ ತೊಡಗಿಕೊಳ್ಳದಿರುವುದು ಒಂದು ಸಂಘಟನಾ ಆಚರಣೆಯಾಗಿದೆ. ಏಕೆಂದರೆ ರಾಜಕೀಯ–ಸಂಘಟನಾತ್ಮಕ ಕರ್ತವ್ಯಗಳನ್ನು ನಿಭಾಯಿಸುವತ್ತ ಪ್ರಧಾನ ಕಾರ್ಯದರ್ಶಿ ಮುಖ್ಯವಾಗಿ ಗಮನ ನೀಡಬೇಕಾಗುತ್ತದೆ. ಸೀತಾರಾಮ್ ಯೆಚುರಿ 2015ರಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾದಾಗ ಆಗಲೇ ರಾಜ್ಯಸಭೆಯ ಸದಸ್ಯರಾಗಿದ್ದುದರಿಂದ ಅವರು ತಮ್ಮ ಅವಧಿಯನ್ನು ಪೂರ್ಣಗೊಳಿಸಬೇಕು ಎಂದು ಪೊಲಿಟ್‌ಬ್ಯುರೊ ನಿರ್ಧರಿಸಿತ್ತು. ಏಕೆಂದರೆ ಆಗ ಮರುಚುನಾವಣೆ ನಡೆದಿದ್ದರೆ ಆ ಸ್ಥಾನವನ್ನು ತೃಣಮೂಲ ಕಾಂಗ್ರೆಸಿಗೆ ಉಡುಗೊರೆಯಾಗಿ ಕೊಟ್ಟಂತಾಗುತ್ತಿತ್ತು.
3. ಪಕ್ಷದಲ್ಲಿ ರಾಜ್ಯಸಭಾ ಸದಸ್ಯತ್ವಕ್ಕೆ ಎರಡು ಅವಧಿಗಳ ಮಿತಿ ರೂಪಿಸಿದ್ದು ಮೂರು ದಶಕಗಳ ಹಿಂದೆ. ಸಂಸದೀಯ ವೇದಿಕೆಯಲ್ಲಿ ಕೆಲಸ ಮಾಡಲು ಹೊಸ ಮುಖಂಡರು ಬರುವಂತಾಗಬೇಕೆಂದು ಇದನ್ನು ವಿಧಿಸಲಾಗಿತ್ತು. ಇದೊಂದು ಕಟ್ಟುನಿಟ್ಟಾದ ನಿಯಮವೇನಲ್ಲ. ಆದರೆ ಮೇಲಿನ ಎರಡು ಪರಿಗಣನೆಗಳ ಹಿನ್ನೆಲೆಯಲ್ಲಿ ಈ ನಿಯಮವನ್ನು ಸಡಿಲಿಸುವ ಅಗತ್ಯವಿದೆ ಎಂದು ಅನಿಸಲಿಲ್ಲ.

ಜುಲೈ 24–26ರಲ್ಲಿ ನಡೆದ ಕೇಂದ್ರ ಸಮಿತಿಯ ಸಭೆಯ ಮುಂದೆ ಈ ನಿರ್ಧಾರವನ್ನು ಮಂಜೂರಾತಿಗಾಗಿ ಮಂಡಿಸಲಾಯಿತು. ಈ ಬಗ್ಗೆ ಚರ್ಚಿಸಿದ ನಂತರ ಕೇಂದ್ರ ಸಮಿತಿ ಪೊಲಿಟ್‌ಬ್ಯುರೊದ ನಿರ್ಧಾರವನ್ನು ಅನುಮೋದಿಸಿತು.

ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಗೆ ಬೀಡಿ ಉದ್ಯಮದ ಕೊಡುಗೆ ಅಪಾರ : ವಸಂತ ಆಚಾರಿ

ದಕ್ಷಿಣ ಕನ್ನಡ ಜಿಲ್ಲೆಯನ್ನು ಆರ್ಥಿಕವಾಗಿ ಬಲಿಷ್ಟಗೊಳಿಸಿದ್ದು ಬೀಡಿ ಉದ್ದಿಮೆ. ಬಡ ಬೀಡಿ ಕಾರ್ಮಿಕ ಮಹಿಳೆಯರು ತಮ್ಮ ದುಡಿಮೆಯ ಅತ್ಯಲ್ಪ ಗಳಿಕೆಯನ್ನು ಮಕ್ಕಳ ವಿದ್ಯಾಭ್ಯಾಸಕ್ಕೆ ಹಾಕಿ ಅವರನ್ನು ವಿದ್ಯಾವಂತರನ್ನಾಗಿ ಮಾಡಿದ್ದಾರೆ. ಇವತ್ತು ಬೀಡಿ ಕಾರ್ಮಿಕರ ಮಕ್ಕಳು ಉನ್ನತ ವಿದ್ಯಾಭ್ಯಾಸ, ಉತ್ತಮ ಉದ್ಯೋಗ ಹೊಂದಿ ಜಿಲ್ಲೆಯನ್ನು ಆರ್ಥಿಕವಾಗಿ ಬಲಿಷ್ಟವಾಗಿ ಮಾಡುವುದರಲ್ಲಿ ಬೀಡಿ ಉದ್ದಿಮೆ ಮತ್ತು ಕಾರ್ಮಿಕರ ದುಡಿಮೆ ಕಾರಣವಾಗಿದೆ ಎಂಬುದಾಗಿ ದ.ಕ ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ ಅಧ್ಯಕ್ಷ ವಸಂತ ಆಚಾರಿ ಅಭಿಪ್ರಾಯ ವ್ಯಕ್ತಪಡಿಸಿದರು.

ಮೂಡಬಿದ್ರಿಯಲ್ಲಿ ಜುಲೈ 24ರಂದು ನಡೆದ 9ನೇ ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಸಮ್ಮೇಳನದ ಭಾಗವಾಗಿ ನಡೆಸಲಾಗಿದ್ದ "ಬೀಡಿ ಉದ್ದಿಮೆ ಮತ್ತು ಕಾರ್ಮಿಕರ ಸಮಸ್ಯೆಗಳು" ವಿಷಯದ ಕುರಿತು ನಡೆದ ವಿಚಾರ ಸಂಕಿರಣದಲ್ಲಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಇಡೀ ಜಿಲ್ಲೆಯ ಬದುಕನ್ನು ಕಾಪಾಡಿದ ಬೀಡಿ ಉದ್ದಿಮೆ ಇಂದು ಅವನತಿಯ ಕಡೆ ಸಾಗಿದೆ. ವಿಚಾರ ಮಂಡಿಸಿದ ಪರಿಣತರ ಮಾತಿನಿಂದಲೇ ತಿಳಿಯುವಂತೆ ಇದಕ್ಕೆ ಬೀಡಿ ಕಾರ್ಮಿಕರು ಕಾರಣವಲ್ಲ, ಬೀಡಿ ಗುತ್ತಿಗೆದಾರರು ಕಾರಣರಲ್ಲ. ಇದಕ್ಕೆ ಬೀಡಿ ಉದ್ದಿಮೆಯ ಇಂದಿನ ಮಾಲಕರು ಹಾಗೂ ಕೇಂದ್ರ ಮತ್ತು ರಾಜ್ಯ ಸರಕಾರದ ನೀತಿಗಳು ಕಾರಣ. ಧೂಮಪಾನ ನಿಷೇಧ ಕಾಯಿದೆ ಜಾರಿಗೊಳಿಸಲು ಕೇಂದ್ರ ಸರಕಾರ ಹೊಗೆಬತ್ತಿ ಸೇವನೆಯಿಂದ ಕ್ಯಾನ್ಸರ್ ಬರಲಿದೆ ಎಂಬ ವಿಶ್ವ ಆರೋಗ್ಯ ಸಂಸ್ಥೆಯ ಎಚ್ಚರಿಕೆ ಕಾರಣವನ್ನು ಮುಂದಕ್ಕೆ ಒಡ್ಡುತ್ತಿದೆ; ಆದರೆ ಕ್ಯಾನ್ಸರ್‌ನಿಂದ ಸತ್ತವರಲ್ಲಿ ಹೊಗೆಬತ್ತಿ ಸೇದುವವರು ಎಷ್ಟಿದ್ದಾರೆ ಎಂಬ ಬಗ್ಗೆ ಯಾವ ಸಮೀಕ್ಷೆ ನಡೆದಿದೆ ? ಕೋಟ್ಪಾ ಕಾಯಿದೆಯನ್ನು ಜಾರಿಗೊಳಿಸುವಾಗ, ಬೀಡಿ ಕಟ್ಟುವ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ ವ್ಯವಸ್ಥೆ ಮಾಡಬೇಕು ಎಂಬುದನ್ನು ಕಾಯಿದೆ ನಿರ್ದಿಷ್ಟಪಡಿಸಿತ್ತಾದರೂ, ಕೇಂದ್ರ ರಾಜ್ಯ ಸರಕಾರಗಳು ಈ ಬಗ್ಗೆ ಯಾವ ಕ್ರಮ ಕೈಗೊಳ್ಳದೆ ಬೀಡಿ ದಾಸ್ತಾನು ತಾಣಗಳ ಮೇಲೆ ದಾಳಿ ಮಾಡುತ್ತಿರುವುದು, ಈ ಸರಕಾರಗಳಿಗೆ ಈ ಉದ್ದಿಮೆಯಲ್ಲಿ ದುಡಿಯುವ ಕಾರ್ಮಿಕರ ಮೇಲೆ ಕಾಳಜಿಯಿಲ್ಲ ಎಂಬುದನ್ನು ತಿಳಿಸುತ್ತದೆ ಎಂದು ಅವರು ವಿವರಿಸಿದರು.

ಕೇಂದ್ರ ಸರಕಾರವು ಜಾರಿಗೆ ತರುತ್ತಿರುವ ಆರ್ಥಿಕ ಉದಾರೀಕರಣದ ನೀತಿಗಳು ಕಾರ್ಪೋರೇಟ್ ಹಿತವನ್ನು ರಕ್ಷಿಸುವುದಾಗಿದೆ. ಇದರ ಭಾಗವಾಗಿ ಕೇಂದ್ರ ಸರಕಾರ ಕೈಗೊಂಡ ನೋಟು ಅಮಾನ್ಯೀಕರಣ, ನಗದುರಹಿತ ವ್ಯವಹಾರ ಮತ್ತು ಇತ್ತೀಚೆಗೆ ಜಾರಿಗೆ ತಂದ ಜಿಎಸ್‌ಟಿ – ಎಲ್ಲವೂ ಬೀಡಿ ಉದ್ದಿಮೆಯ ಮೇಲೆ ದಾಳಿ ನಡೆಸಿದ್ದು, ಬ್ಯಾಂಕ್ ವ್ಯವಹಾರವನ್ನೇ ಅಷ್ಟಾಗಿ ತಿಳಿದಿರದ ಬಡ ಬೀಡಿ ಕಾರ್ಮಿಕರನ್ನು ನಗದುರಹಿತ ಬ್ಯಾಂಕಿಂಗ್‌ಗೆ ಒಳಪಡಿಸಿ ಇಡೀ ಉದ್ದಿಮೆಯ ಗುತ್ತಿಗೆದಾರರನ್ನು, ಕಾರ್ಮಿಕರನ್ನು ಸಂಕಷ್ಟಕ್ಕೆ ಒಳಪಡಿಸಿದೆ. ಬೀಡಿ ಕಾರ್ಮಿಕರು ದೀರ್ಘ ಕಾಲದಿಂದ ನಡೆಸಿದ ಹೋರಾಟಗಳಿಂದ ಪಡೆದಿರುವ ಸವಲತ್ತುಗಳನ್ನು ಎಂದಿಗೂ ಬಿಟ್ಟು ಬಿಡಲಾರರು. ಪ್ರಾವಿಡೆಂಟ್ ಫಂಡ್, ತುಟ್ಟಿಭತ್ತೆ, ಕಲ್ಯಾಣ ನಿಧಿ, ಪಿಂಚಣಿ, ಸಾಮಾಜಿಕ ಭದ್ರತೆ ಇವುಗಳನ್ನು ಉಳಿಸಿಕೊಳ್ಳಲು ಬೀಡಿ ಕಾರ್ಮಿಕರು ಸಮಾನ ಬೇಡಿಕೆಯ ಆಧಾರದಲ್ಲಿ ಗುತ್ತಿಗೆದಾರರನ್ನೂ ಸೇರಿಸಿಕೊಂಡು ಬಲವಾದ ಹೋರಾಟಗಳನ್ನು ಮುಂದೆ ನಡೆಸಲಿರುವರು ಎಂಬುದಾಗಿ ವಸಂತ ಆಚಾರಿ ಎಚ್ಚರಿಕೆ ನೀಡಿದರು.

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನಿನ ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್ ವಿಚಾರ ಮಂಡನೆ ಮಾಡಿ, ಕರ್ನಾಟಕದಲ್ಲಿ ಸುಮಾರು 9 – 10ಲಕ್ಷ ಬೀಡಿ ಕಾರ್ಮಿಕರಿದ್ದಾರೆ; ತಂಬಾಕು ಕೃಷಿ ಸೇರಿದಂತೆ ಬೀಡಿ ಉದ್ದಿಮೆಯ ವಿವಿಧ ಹಂತಗಳಲ್ಲಿ ಒಳಗೊಂಡ ದುಡಿಮೆಗಾರರನ್ನು ಸೇರಿಸಿಕೊಂಡರೆ ಸರಿಸುಮಾರು 12 – 13ಲಕ್ಷ ಜನ ತಂಬಾಕು ಹಾಗೂ ಅದರ ಉತ್ಪನ್ನಗಳ ಉದ್ದಿಮೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅನೇಕ ಉದ್ದಿಮೆಗಳಂತೆಯೇ ಬೀಡಿ ಉದ್ದಿಮೆಯು ಒಂದು ಶಿಸ್ತು ಬದ್ಧ ಉದ್ದಿಮೆಯಲ್ಲ. ಇದರಲ್ಲಿ ಯಾವ ಕಾನೂನಿನ ಅಡಿಯಲ್ಲೂ ಬಾರದ ಗುತ್ತಿಗೆದಾರರಿದ್ದಾರೆ. ಯಾವ



ಕಾನೂನಿನಡಿಯಲ್ಲೂ ಬಾರದ ಮಾಲಿಕರೂ ಇದ್ದಾರೆ. ಈ ಎಲ್ಲಾ ಕೊರತೆಗಳ ಮಧ್ಯೆಯೂ ದ.ಕ ಜಿಲ್ಲೆಯ ಆರ್ಥಿಕ ಸಂಚಲನಕ್ಕೆ ಬೀಡಿ ಉದ್ದಿಮೆ ಕಾರಣವಾಗಿದೆ. ಮಾಲಕರು ಹೇರಳ ಲಾಭ ಪಡೆದಿದ್ದರೂ, ಲಾಭಾಂಶದ ಪಾಲನ್ನು ಕಾರ್ಮಿಕರಿಗೆ ನೀಡುತ್ತಿಲ್ಲ. ಅತ್ಯಂತ ಕನಿಷ್ಟ ಕೂಲಿ ಇರುವುದೂ ಬೀಡಿ ಉದ್ದಿಮೆಯಲ್ಲೇ ಎಂದು ಸೈಯದ್ ಮುಜೀಬ್ ತಿಳಿಸಿದರು.

ಎಐಟಿಯುಸಿ ಸಂಯೋಜಿತ ದ.ಕ ಜಿಲ್ಲಾ ಬೀಡಿ ಪೆಡರೇಶನ್ ಮುಖಂಡರಾದ ಸೀತಾರಾಮ್ ಬೇರಿಂಜ ಮಾತನಾಡಿ, ಮಾಲಿಕರು ಬೀಡಿ ಉದ್ದಿಮೆಯಲ್ಲಿ ಗಳಿಸಿದ ಹೇರಳ ಲಾಭದಿಂದ ತಮ್ಮ ಬಂಡವಾಳವನ್ನು ಬೇರೆ ಉದ್ದಿಮೆಗಳಲ್ಲಿ ತೊಡಗಿಸಿದ್ದಾರೆ. ಬೀಡಿ ಸೇವನೆಯಿಂದಲೇ ಕ್ಯಾನ್ಸರ್ ಎಂಬ ಸಂಶೋಧಿಸಿ ದೃಢಪಡಿಸದ ವಿಚಾರಗಳನ್ನು ಪ್ರಚಾರ ಮಾಡಿ ಬೀಡಿ ಕೈಗಾರಿಕೆ ಹಾಗೂ ಅದನ್ನು ನಂಬಿದ ಕಾರ್ಮಿಕರಿಗೆ ಕೇಂದ್ರ ಸರಕಾರ ಅನ್ಯಾಯ ಮಾಡುತ್ತಿದೆ. ಬೀಡಿ ಕಾರ್ಮಿಕರಲ್ಲದೆ ಇಡೀ ಉದ್ದಿಮೆಗೆ ಸಂಬಂಧಿಸಿದ ಎಲ್ಲಾ ದುಡಿಮೆಗಾರರನ್ನೂ ಸರಕಾರದ ನೀತಿಗಳು ಅತಂತ್ರವಾಗಿಸಿದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಎಲ್ಲರೂ ಒಗ್ಗೂಡಿ ಹೋರಾಟ ಮಾಡಬೇಕಾಗಿದೆ ಎಂದು ಸೀತಾರಾಮ ಬೇರಿಂಜ ತಿಳಿಸಿದರು.

ಬೀಡಿ ಗುತ್ತಿಗೆದಾರರ ಪ್ರಶ್ನೆಗಳನ್ನು ಗುತ್ತಿಗೆದಾರರ ಸಂಘದ ಮುಖಂಡರಾದ ಖಾದರ್ ಕಿನ್ನಿಗೋಳಿ ಮತ್ತು ಅಬ್ಬು ಮೂಡಬಿದ್ರಿ ವಿವರಿಸಿದರು. ಅನಧಿಕೃತ ಖಾಸಗಿ ಬೀಡಿ ಮಾಲಕರು ಕಟ್ಟಿಸುತ್ತಿರುವ ಬೀಡಿ ಚಲಾವಣೆಯಲ್ಲಿ ಇದ್ದು, ಕೆಲವೇ ಗುತ್ತಿಗೆದಾರರನ್ನು ಅವರು ಕೈವಶ ಮಾಡಿ ತಮ್ಮ ಉತ್ಪನ್ನಗಳನ್ನು ಕಡಿಮೆ ದರಕ್ಕೆ ಮಾರುತ್ತಿರುವುದರಿಂದ, ಅಧಿಕೃತ ಬೀಡಿ ಉದ್ದಿಮೆಗಳ ಗುತ್ತಿಗೆದಾರರು ಸೋಲುವಂತಾಗಿದೆ. ಗುತ್ತಿಗೆದಾರರಿಗೆ ಪೂರೈಕೆಯಾಗುವ ಎಲೆಗಳು ಗುಣಮಟ್ಟದ್ದಾಗಿಲ್ಲ. ನೋಟು ಅಮಾನ್ಯೀಕರಣ ಹಾಗೂ ನಗದುರಹಿತ ವ್ಯವಹಾರವನ್ನು ಕೇಂದ್ರ ಸರಕಾರ ಜಾರಿಗೊಳಿಸಿದ ನಂತರದಲ್ಲಿ ಕಾರ್ಮಿಕರಿಗೆ ಕೂಲಿಕೊಡಲು ಕೂಡ ಪರದಾಡಬೇಕಾಗಿದೆ. ದಾರ, ಲೇಬಲ್, ಬೀಡಿ ಎಲೆ, ತಂಬಾಕು, ಬೀಡಿ ಎಲ್ಲದಕ್ಕೂ ವಿವಿಧ ದರಗಳಲ್ಲಿ ಜಿಎಸ್‌ಟಿಯನ್ನು ಕೇಂದ್ರ ಸರಕಾರ ಇತ್ತೀಚೆಗೆ ಜಾರಿ ಮಾಡಿದ್ದರಿಂದ ಬೀಡಿಗೆ ಮುಂದೆ ಯಾವ ಮಾರಾಟ ದರ ನಿಗದಿಯಾಗುವುದೋ ತಿಳಿಯದಾಗಿದೆ – ಎಂದು ಉದ್ದಿಮೆಯ ಸಮಸ್ಯೆಗಳನ್ನು ವಿವರಿಸಿದರು. ಮಾಲಕರು ಉದ್ದಿಮೆ ತೊರೆಯಲೂ ಸಿದ್ಧರಿದ್ದಾರೆ; ಕಾರ್ಮಿಕರು ಮತ್ತು ಗುತ್ತಿಗೆದಾರರು ಬದುಕುವ ದಾರಿ ಹೇಗೆ ಎಂಬ ಪ್ರಶ್ನೆ ಮುಂದಿಟ್ಟರು.

ದ.ಕ ಜಿಲ್ಲಾ ಬೀಡಿ ಫೆಡರೇಶನ್‌ನ ಪ್ರಧಾನ ಕಾರ್ಯದರ್ಶಿ ಜೆ. ಬಾಲಕೃಷ್ಣ ಶೆಟ್ಟಿ ಸ್ವಾಗತಿಸಿದರು. ಸಮ್ಮೇಳನದ ಸ್ವಾಗತ ಸಮಿತಿ ಗೌರವಾಧ್ಯಕ್ಷ ಯಾದವ ಶೆಟ್ಟಿ, ಅಧ್ಯಕ್ಷೆ ರಮಣಿ ಮೂಡಬಿದ್ರಿ, ದ.ಕ ಮತ್ತು ಉಡುಪಿ ಜಿಲ್ಲಾ ಬೀಡಿ ಕಂಟ್ರಾಕ್ಟರ್‌ದಾರರ ಸಂಘದ ಅಧ್ಯಕ್ಷ ಕೃಷ್ಣಪ್ಪ ಬೋಳಾರ ಹಾಗೂ ಗುತ್ತಿಗೆದಾರರ ಸಂಘದ ಮುಖಂಡರು ವೇದಿಕೆಯ ಮೇಲಿದ್ದರು. ಯಾದವ ಶೆಟ್ಟಿ ವಂದಿಸಿದರು.

ಜೆ. ಬಾಲಕೃಷ್ಣ ಶೆಟ್ಟಿ

ನಾಳಿನ ಕಾರ್ಯಕ್ರಮಗಳು

ಜಿಲ್ಲಾ ಮಟ್ಟದ ಜನಶಕ್ತಿ ಪ್ರಸಾರಾಂದೋಲನ, ಸಮಾವೇಶಗಳು ಜುಲೈ 23 ರಿಂದ ಅಗಸ್ಟ್ 6

ಜಿಲ್ಲಾ ಜನಶಕ್ತಿ ಉತ್ಸವಗಳು: ಕಲಬುರಗಿ, ತುಮಕೂರು – ಆ. 6, ಕೋಲಾರ – ಆ. 11, ಬಳ್ಳಾರಿ ಅ. 17.

ಕಾರ್ಮಿಕರ ರಾಜ್ಯ ಜಾಥಾ ಜುಲೈ 29– ಅಗಸ್ಟ್ 13, ಸಿಐಟಿಯು, ರಾಜ್ಯಾದ್ಯಂತ

ಕ್ವಿಟ್ ಇಂಡಿಯಾ 75 ಅಗಸ್ಟ್ 9 ರಾಜ್ಯಾದ್ಯಂತ

ಕಾರ್ಮಿಕರ ಅಹೋರಾತ್ರಿ ಧರಣಿ ಅಗಸ್ಟ್ 14 ಸಿಐಟಿಯು, ರಾಜ್ಯಾದ್ಯಂತ

ಜನಶಕ್ತಿ ರಾಜ್ಯ ಮಟ್ಟದ ಉತ್ಸವ 2017 ಅಗಸ್ಟ್ 19 ಬೆಂಗಳೂರು

ಸಮಾಜವಾದಿ ಕ್ರಾಂತಿ ಮತ್ತು ಸಂಸ್ಕೃತಿ ಅಗಸ್ಟ್ 20 ಬೆಂಗಳೂರು

ಜಿಲ್ಲಾ ಮಟ್ಟದಲ್ಲಿ ರೈತರ ಪ್ರತಿಭಟನೆ ಆಗಸ್ಟ್ 21 ರಾಜ್ಯಾದ್ಯಂತ

ಸೌಹಾರ್ದ ಕರ್ನಾಟಕ ಸಮಾವೇಶ, ಸೆಪ್ಟೆಂಬರ್ 5 ಬೆಂಗಳೂರು

ಸಾರ್ವತ್ರಿಕ ಮಹಾಮುಷ್ಕರ ಸೆಪ್ಟೆಂಬರ್ 14

ಜನಪರ ಮರಳು ನೀತಿಗೆ ಜಿಲ್ಲಾಧಿಕಾರಿಗೆ ಮನವಿ

ಕರಾವಳಿ ಜಿಲ್ಲೆಗಳಲ್ಲಿ ಹೇರಳವಾಗಿ ದೊರೆಯುತ್ತಿದ್ದ ಮರಳಿನ ಮೇಲಿನ ನಿಷೇಧದ ಹೆಸರಿನಲ್ಲಿ ಜಿಲ್ಲೆಯ ಕಾಮಗಾರಿಗಳಿಗೆ ಮರಳು ಸರಿಯಾಗಿ ಪೂರೈಕೆ-ಯಾಗದೆ ಅಭಿವೃದ್ಧಿ ಕೆಲಸಗಳು ಕುಂಠಿತವಾಗಿದೆ. ಮರಳಿನ ಮೇಲಿನ ನಿಷೇಧದ ನೆಪವನ್ನಿಟ್ಟುಕೊಂಡು ಮರಳು ದಂಧೆ ಕರಾವಳಿ ಜಿಲ್ಲೆಯಲ್ಲಿ ವ್ಯಾಪಕವಾಗಿ ನಡೆಯುತ್ತಿದೆ. ರೂ. 3,500/–ಕ್ಕೆ ಸಿಗುತ್ತಿದ್ದ 2 ಯೂನಿಟ್ ಮರಳು ರೂ. 12,000/–ಕ್ಕೆ ಏರಿಕೆ-ಯಾಗಿದೆ. ಜಿಲ್ಲೆಯ ನಾನಾ ಕಡೆಗಳಲ್ಲಿ ಮರಳು ವ್ಯಾಪಕವಾಗಿ ಶೇಖರಣೆಯಾಗಿದ್ದರೂ, ಜಿಲ್ಲೆಯ ಕಾಮಗಾರಿಗಳಿಗೆ ಇದು ಉಪಯೋಗವಾಗುತ್ತಿಲ್ಲ. ರಾಜ್ಯದ ಇತರ ಜಿಲ್ಲೆಗಳಿಗೆ ಹಾಗೂ ಇತರೆ ರಾಜ್ಯಗಳಿಗೆ ಕಾಲಸಂತೆಯಲ್ಲಿ ಮಾರಾಟವಾಗುತ್ತಿದೆ. ಮರಳು ತೆಗೆಯುವಲ್ಲಿ ಡೋಸರ್ ಹಾಗೂ ಜೆಸಿಬಿ ಬಳಕೆ ನಿಷೇಧಿಸಲಾಗಿದ್ದರೂ ಎಲ್ಲಾ ಕಡೆಗಳಲ್ಲಿ ಜೆಸಿಬಿ ಹಾಗೂ ಡೋಸರ್ ಬಳಕೆ ಮಾಡಲಾಗುತ್ತಿದೆ. ಸ್ಥಳೀಯ ಆಡಳಿತಕ್ಕೆ ಎಲ್ಲವೂ ಗೊತ್ತಿದ್ದರೂ ಜಾಣ ಕುರುಡು ಪ್ರದರ್ಶಿಸುತ್ತಿದೆ. ಇದೆಲ್ಲವನ್ನು ಗಮನಿಸಿದಾಗ ಜಿಲ್ಲೆಯ ಜನತೆ ಜಿಲ್ಲಾಡಳಿತದ ಮೇಲೆ ಸಂಶಯದ ದೃಷ್ಟಿಯಿಂದ ನೋಡುವಂತಾಗಿದೆ.

ಆದುದರಿಂದ ಜಿಲ್ಲೆಯ ಕಟ್ಟಡ ಮತ್ತು ನಿರ್ಮಾಣ ಕಾಮಗಾರಿಗೆಗಳಿಗೆ ಹಾಗೂ ಅಭಿವೃದ್ಧಿ ಕೆಲಸಗಳಿಗೆ ಪೂರಕವಾಗುವಂತೆ ಸಾಂಪ್ರದಾಯಿಕ ಮರಳುಗಾರಿಕೆಗೆ ಅನುಮತಿ ನೀಡಬೇಕು. ಜಿಲ್ಲೆಯಲ್ಲಿ ವ್ಯಾಪಕವಾಗಿ ನಡೆಯುತ್ತಿರುವ ಮರಳು ದಂಧೆಯ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು. ಏಕರೂಪದ ಮರಳು ದರ ರೂಪಣೆಯಾಗಬೇಕು. ಇದೆಲ್ಲವನ್ನು ಒಳಗೊಂಡಂತೆ ಜಿಲ್ಲೆಗೆ ಜನಪರ ಮರಳು ನೀತಿ ಜಾರಿಗೊಳಿಸಬೇಕೆಂದು ಜಿಲ್ಲಾಧಿಕಾರಿಗಳ ಒತ್ತಾಯಿಸಿ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿ, ಕಟ್ಟಡ ಕಾರ್ಮಿಕರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು, ಜಿಲ್ಲಾ ನಾಯಕರಾದ ಜಯಂತ್ ನಾಯ್ಕ್, ಜನಾರ್ಧನ ಕುತ್ತಾರ್, ಜಯಶೀಲ, ಮನೋಜ್ ವಾಮಂಜೂರು, ಪ್ರೇಮನಾಥ್ ಜಲ್ಲಿಗುಡ್ಡೆ ಉಪಸ್ಥಿತರಿದ್ದರು.

ಯೋಗೀಶ್ ಜಪ್ಪಿನಮೊಗರು

ಅಂಗವಿಕಲರ ಶೆ. 3 ಅನುದಾನ ವಿತರಣೆಯಲ್ಲಿ ತಾರತಮ್ಯ ನಾಡ ಗ್ರಾಮ ಪಂಚಾಯತ್ ವಿರುದ್ಧ ದೂರು ದಾಖಲು

ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆ ನವದೆಹಲಿಗೆ (ಓಕಖಆ) ಗೆ ಸಂಯೋಜಿಸಲ್ಪಟ್ಟು, ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ ಉಡುಪಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಾಡ ಗ್ರಾಮ ಪಂಚಾಯತ್ ವ್ಯಾಪ್ತಿಯ ಅಂಗವಿಕಲರ ಹಾಗೂ ಪಾಲಕರ ಬೃಹತ್ ಸಮಾವೇಶವು ನಾಡ ಗ್ರಾಮದ ಹಾಡಿಗರಡಿ ದೈವಸ್ಥಾನದ ಸಭಾಂಗಣದಲ್ಲಿ ಜರಗಿತು. ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ನಿರಂಜನ್ ಭಟ್‌ರವರು ಅಂಗವಿಕಲರಿಗಾಗಿ ಸರಕಾರದ ವಿವಿಧ ಸೌಲಭ್ಯದ ಕುರಿತು ವಿವರವಾದ ಮಾಹಿತಿ ನೀಡಿದರು.

ಈ ಹಿನ್ನಲೆಯಲ್ಲಿ ನಾಡ ಗ್ರಾಮ ಪಂಚಾಯತ್ ಕಛೇರಿಯಿಂದ ಅಂಗವಿಕಲರಿಗೆ ಕಾದಿರಿಸಿದ ಶೇಕಡಾ 3% ರ ಅನುದಾನದಡಿಯಲ್ಲಿ ವಿವಿಧ ಸೌಲಭ್ಯ ಪಡೆಯಲು ಆರ್ಥಿಕ ಧನ ಸಹಾಯ ಕೋರಿ 54 ಅಂಗವಿಕಲ ಫಲಾನುಭವಿಗಳು ಅರ್ಜಿ ಸಲ್ಲಿಸಿದ್ದರು. ಆದರೆ ನಾಡ ಗ್ರಾಮ ಪಂಚಾಯತ್‌ರವರು ಬಡ ಅಂಗವಿಕಲ 54 ಫಲಾನುಭವಿ ಅರ್ಜಿದಾರರನ್ನು ಗಣನೆಗೆ ತೆಗೆದುಕೊಳ್ಳದೇ ಏಕಾಏಕೀ ಶೇಕಡಾ 3% ರ ಅನುದಾನದ ಹಣವನ್ನು ರ್‍ಯಾಂಪ್ ಕಾಮಗಾರಿ ಮಾಡುವುದಕ್ಕೆ ತೀರ್ಮಾನಿಸಿರುವುದು ಬಡ ಅಂಗವಿಕಲ 54 ಅರ್ಜಿದಾರರಿಗೆ ಮಾಡಿದ ಘೋರ ಅನ್ಯಾಯವಾಗಿದೆ. ಆದ್ದರಿಂದ ನಾಡ ಗ್ರಾಮ ಪಂಚಾಯತ್ ಸಿದ್ಧಪಡಿಸಿದ ರ್‍ಯಾಂಪ್ ಕಾಮಗಾರಿಯ ಕ್ರೀಯಾ ಯೋಜನೆಗೆ ಅನುಮೋದನೆ ಕೊಡಬಾರದು ಮತ್ತು ಶೇಕಡಾ 3% ರ ಅನುದಾನದ ಹಣದಲ್ಲಿ ಎಲ್ಲಾ ಬಡ ಅಂಗವಿಕಲ ಅರ್ಜಿದಾರ ಫಲಾನುಭವಿಗಳಿಗೆ ವಿವಿಧ ಸೌಲಭ್ಯ ಕೊಡಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಉಡುಪಿ ಜಿಲ್ಲಾ ಗೌರವ ಅಧ್ಯಕ್ಷ ವೆಂಕಟೇಶ ಕೋಣಿ ಉಡುಪಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಲಿಖಿತ ದೂರು ಸಲ್ಲಿಸಿದ್ದಾರೆ. ನ್ಯಾಯ ಸಿಗದಿದ್ದರೆ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ನೇತೃತ್ವದಲ್ಲಿ ತಾಲೂಕಿನ ಎಲ್ಲಾ ಅಂಗವಿಕಲರು ಹಾಗೂ ಪಾಲಕರನ್ನೊಳಗೊಂಡು ಬೀದಿಗಿಳಿದು ಸಂಘಟಿತ ಹೋರಾಟ ಮಾಡಲಾಗುವುದು ಎಂದು ವೆಂಕಟೇಶ ಕೋಣಿ ಸರಕಾರವನ್ನು ಎಚ್ಚರಿಸಿದ್ದಾರೆ.

ವೆಂಕಟೇಶ ಕೋಣಿ

ರಾಜ್ಯಾದ್ಯಂತ ಕಟ್ಟಡ ಕಾರ್ಮಿಕರ ಪ್ರತಿಭಟನೆ : ಜುಲೈ 26

ಕಲ್ಯಾಣ ಮಂಡಳಿಯ ರಚನೆಯಲ್ಲಿ ಪ್ರಜಾಪ್ರಭುತ್ವ ಎತ್ತಿ ಹಿಡಿಯಲು, ಕಲ್ಯಾಣ ಮಂಡಳಿಯಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ತಡೆಗಟ್ಟಲು, ನೋಂದಾಯಿತ ಸದಸ್ಯ ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲು, 3–4 ವರ್ಷ ಬಾರದೇ ಇರುವ ಪಿಂಚಣಿ, ಮದುವೆ ಸಹಾಯ, ಮೃತ ಕುಟುಂಬಕ್ಕೆ ಹಣಕಾಸು ನೆರವು, ಸ್ಕಾಲರ್‌ಶಿಪ್ ಮೊತ್ತ ಬಿಡುಗಡೆ ಮಾಡಲು ಆಗ್ರಹಿಸಿ, ಬಜೆಟನಲ್ಲಿ ಮುಖ್ಯಮಂತ್ರಿಗಳು ಘೋಷಿಸಿರುವ ಭವಿಷ್ಯನಿಧಿ ಯೋಜನೆ ಜಾರಿಗೆ, ಇತ್ಯಾದಿ ವಿವಿಧ ಬೇಡಿಕೆ ಈಡೇರಿಸುವಂತೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ರಾಜ್ಯಾದ್ಯಂತ ಜುಲೈ 26ರಂದು ಪ್ರತಿಭಟನೆ ನಡೆಸಿರುವ ವರದಿಗಳು ಹಲವು ಜಿಲ್ಲಾ, ತಾಲೂಕು ಕೇಂದ್ರಗಳಿಂದ ಬಂದಿದೆ. ಉತ್ತರ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿಗೆ ಮೆರವಣಿಗೆಯಲ್ಲಿ ಹೋಗಿ ಪ್ರತಿಭಟನೆ ಮಾಡಲಾಯಿತು. ದೇವದುರ್ಗದಲ್ಲಿ ಕ್ಷೇತ್ರದ ಶಾಸಕ ಶಿವನಗೌಡ ನಾಯಕ ಅವರ ಮನೆಯ ಮುಂದೆ ಧರಣಿ ಮಾಡಲಾಯಿತು. ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳಿಂದ ಬೆಂಗಳೂರಿನ ಕಾರ್ಮಿಕ ಭವನ ಬಳಿಯಿರುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಮುಂದೆ ಪ್ರತಿಭಟನೆ ನಡೆಸಲಾಯಿತು. ತುಮಕೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ಮಾಡಲಾಯಿತು. ಇವಲ್ಲದೆ ಗದಗ, ಹಾಸನ, ಕೋಲಾರ, ಬೆಳ್ತಂಗಡಿಗಳಲ್ಲಿ ಪ್ರತಿಭಟನೆ ನಡೆಸಿದ ವರದಿಗಳು ಬಂದಿವೆ.





ಸ್ಮಾರ್ಟ ಕಾರ್ಡ, ಭವಿಷ್ಯನಿಧಿ ಜಾರಿಮಾಡಲು ಹಮಾಲಿ ಒತ್ತಾಯ

ಹಮಾಲಿ ಕಾರ್ಮಿಕರ ಫೆಡರೇಷನ್ (ಸಿಐಟಿಯು) ಹಾವೇರಿ ಜಿಲ್ಲಾ ತಹಶೀಲ್ದಾರರ ಕಛೇರಿ ಮುಂದೆ ಪ್ರತಿಭಟನೆ ನಡೆಸಿ ಹಾವೇರಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ತಹಶೀಲ್ದಾರರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿತು.

ಎಪಿಎಂಸಿ, ಮಿಲ್, ಗೋಡೌನ್, ವೇರ್‌ಹೌಸ್, ನಗರ ಮತ್ತು ಗ್ರಾಮೀಣ ಬಜಾರ ಮುಂತಾದಡೆ ಶ್ರಮದಾಯಕ ಕೆಲಸ ನಿರ್ವಹಿಸುತ್ತಿರುವ, ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿರುವ ಹಮಾಲಿ ಕಾರ್ಮಿಕರ ಕೊನೆಗಾಲದ ಬದುಕಂತು ನರಕಸದೃಶವಾಗಿರುತ್ತದೆ. ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್(ಸಿಐಟಿಯು) ಹಮಾಲಿ ಕಾರ್ಮಿಕರ ಬದುಕಿನ ಪ್ರಶ್ನೆಗಳಿಗಾಗಿ ಸರಕಾರದ ಗಮನ ಸೆಳೆಯಲು ಹತ್ತು ಹಲವಾರು ಹೋರಾಟಗಳನ್ನು ನಡೆಸುತ್ತಾ ಬಂದಿದೆ. ಕಳೆದ ಜನವರಿ–30 ರಿಂದ ಬೆಂಗಳೂರಿನಲ್ಲಿ ಸಿಐಟಿಯು ನೇತೃತ್ವದಲ್ಲಿ ನಡೆದ ಹಗಲು ರಾತ್ರಿ ಹೋರಾಟದ ಸಂದರ್ಭದಲ್ಲಿ ಸರಕಾರ ಭರವಸೆ ನೀಡಿದಂತೆ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತುತ ಬಜೆಟ್‌ನಲ್ಲಿ ಹಮಾಲಿ ಕಾರ್ಮಿಕರು ಸೇರಿದಂತೆ 6 ವಿಭಾಗದ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ ಕಾರ್ಡ, ಅಪಘಾತ ವಿಮೆ ಮತ್ತು ಭವಿಷ್ಯನಿಧಿ ಯೋಜನೆಯನ್ನು ಘೋಷಿಸಿದೆ. ಆದರೇ ಹಮಾಲಿ ಕಾರ್ಮಿಕರ ಬದುಕಿನಲ್ಲಿ ಆಸರೆಯಾಗಬಲ್ಲ ಈ ಭವಿಷ್ಯನಿಧಿ ಯೋಜನೆ ಸರಕಾರ ಘೋಷಿಸಿದ್ದರು ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಅನ್ನುವಂತಾಗಿದೆ. ಈ ಮಹತ್ವದ ಯೋಜನೆ ಜಾರಿ ಮಾಡಲು ಕೇವಲ 10 ಕೋಟಿ ರೂ. ತೆಗೆದಿರಿಸಿದ್ದು ಆನೆ ಹೊಟ್ಟೆಗೆ ಅರೇ ಕಾಸಿನ ಗಂಜಿ ನೀಡಿದಂತಿದೆ. ಅಗತ್ಯ ಹಣಕಾಸು ಸಂಪನ್ಮೂಲವನ್ನು ಒದಗಿಸಬೇಕೆಂದು ಸಿಐಟಿಯು ಜಿಲ್ಲಾ ಸಂಚಾಲಕರಾದ ವಿನಾಯಕ ಕುರುಬರ ಮಾತನಾಡಿ, ಒತ್ತಾಯಿಸಿದರು.

ಎಪಿಎಂಸಿ ಹಮಾಲಿ ಕಾರ್ಮಿಕರಿಗೆ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯಿಂದ ಜಾರಿಯಾಗಿರುವ "ಕಾಯಕ ನಿಧಿ" ಯೋಜನೆಯಡಿಯಲ್ಲಿ ವೈದ್ಯಕೀಯ ವೆಚ್ಚದ ಮರುಪಾವತಿ ಮತ್ತು ಶವಸಂಸ್ಕಾರ ಪರಿಹಾರ ಯೋಜನೆಗಳು ಜಾರಿಯಾಗುತ್ತಿವೆ. ಆದರೇ ಕಾಯಕ ನಿಧಿ ಮಾರ್ಗಸೂಚಿಗಳಲ್ಲಿಯ ತಾಂತ್ರಿಕ ತೊಂದರೆಗಳಿಂದಾಗಿ ವೈದ್ಯಕೀಯ ವೆಚ್ಚದ ಮರುಪಾವತಿ ಸೌಲಭ್ಯವನ್ನು ಸದುಪಯೋಗ ಮಾಡಿಕೊಳ್ಳಲು ಹಮಾಲಿ ಕಾರ್ಮಿಕರಿಗೆ ಸಾಧ್ಯವಾಗುತ್ತಿಲ್ಲ. ಕಾರಣ ಕಾಯಕ ನಿಧಿ ಯೋಜನೆಯ ಮಾರ್ಗಸೂಚಿಗಳಿಗೆ ಹಮಾಲಿ ಫೆಡರೇಶನ್ ಸೂಚಿಸಿದ ಕೆಲ ತಿದ್ದುಪಡಿಗಳನ್ನು ಮಾಡುವ ಮುಖಾಂತರ ಕಾರ್ಮಿಕರು ಈ ಸೌಲಭ್ಯದ ಸದುಪಯೋಗ ಪಡೆದುಕೊಳ್ಳಲು ಅವಕಾಶ ಮಾಡಿಕೊಡಬೇಕು.

ಹಮಾಲಿ ಕಾರ್ಮಿಕರಿಗೆ 60 ವರ್ಷ ಆದ ನಂತರ ಒಂದು ಬಾರಿ ರೂ. 50 ಸಾವಿರ ನಿವೃತ್ತಿ ಪರಿಹಾರ ನೀಡಬೇಕು. ಹಮಾಲಿ ಕಾರ್ಮಿಕರಿಗೆ ಪ್ರತಿ ವರ್ಷ ಎರಡು ಜೊತೆ ಸಮವಸ್ತ್ರ ನೀಡಬೇಕು. ಹಮಾಲಿ ಕಾರ್ಮಿಕರ ಪಿಯುಸಿ ನಂತರ ಓದುವ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಬೇಕು ಮತ್ತು ಹಮಾಲಿ ಕಾರ್ಮಿಕರಿಗೆ ಪಿಂಚಣಿ ಯೋಜನೆ ಜಾರಿಮಾಡಬೇಕು. ಅಟಲ್ ಪೆನ್ಷನ್ ಯೋಜನೆ ಒಳಪಡಿಸಬಹುದು. ಎಪಿಎಂಸಿಯಲ್ಲಿ ಕೆಲಸ ನಿರ್ವಹಿಸುವ ಎಲ್ಲಾ ಕಾರ್ಮಿಕರಿಗೆ ಲೈಸೆನ್ಸ್ ನೀಡಬೇಕು. ಮಹಿಳೆಯರಿಗೆ ಪ್ರತ್ಯೇಕ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದರು.

ಪ್ರತಿಭಟನೆಯಲ್ಲಿ ಹಮಾಲಿ ಕಾರ್ಮಿಕರ ಫೆಡರೇಷನ್ ಜಿಲ್ಲಾ ಮುಖಂಡರಾದ ಹನುಮಂತಪ್ಪ ಗೊರವರ, ಮುನಾಪಸಾಬ್ ಗಣ–ಜೂರು, ಹಸನಸಾಬ ಮುಲ್ಲಾನವರ, ಅಲ್ಲಾಭಕ್ಷ ಬಳ್ಳಾರಿ, ಹುಸೇನಸಾಬ ಹಳೇಮನಿ, ಮಹ್ಮದಲಿ ಬಿಜಾಪುರ, ಕಲ್ಲಪ್ಪ ಕೂರಗುಂದ, ನೀಲಪ್ಪ ಹಿತ್ತಲಮನಿ, ಬಸವರಾಜ ಕರ್ಜಗಿ, ಚಮ್ಮನಸಾಬ ನದಾಫ ಹಾಗೂ ಮುಂತಾದವರು ಇದ್ದರು.

ವಿನಾಯಕ ಕುರುಬರ

ಕ್ಯೂಬಾ ಸೌಹಾರ್ದ ದಿನಾಚರಣೆ

"ವೈಜ್ಞಾನಿಕ ಸಮಾಜವಾದವನ್ನು ತನ್ನ ರಾಜಕೀಯ ನೀತಿಯಾಗಿಸಿಕೊಂಡು, ಸಾಮ್ರಾಜ್ಯಶಾಹಿಗೆ ಸೆಡ್ಡು ಹೊಡೆದು 59 ವರ್ಷಗಳಿಂದ ಕ್ಯೂಬಾ ಸ್ವಾಭಿಮಾನದಿಂದ ತಲೆ ಎತ್ತಿ ನಿಂತಿದೆ. ಇಡೀ ಜಗತ್ತು ಇಷ್ಟು ಚಿಕ್ಕ ದೇಶದ ಸಾಧನೆಗಳನ್ನು ಬೆರಗುಗಣ್ಣುಗಳಿಂದ ನೋಡುವಂತೆ ಮಾಡಿದೆ. ತನ್ನ ದೇಶದ ಎಲ್ಲ ಜನತೆಗೆ ಶಿಕ್ಷಣ, ಉತ್ತಮ ಆರೋಗ್ಯ, ದುಡಿದುಣ್ಣುವವರಿಗೆ ಎಲ್ಲಾ ಸೌಲಭ್ಯಗಳನ್ನು ನೀಡುವ ಕ್ಯೂಬಾ ದೇಶದಲ್ಲಿ ಹಸಿವಿನ ಸಾವುಗಳಿಲ್ಲ. ಈ ದೇಶದಲ್ಲಿ ಆಹಾರೋತ್ಪನ್ನ ಹೆಚ್ಚಾಗಿ ಬೆಳೆಯದಿದ್ದರೂ ಸಕ್ಕರೆ ಮತ್ತು ತಂಬಾಕು ಮುಖ್ಯ ಆರ್ಥಿಕ ಆದಾಯಗಳು. ಆದರೂ ತನ್ನ ಜನತೆಗೆ ಯಾವ ಕೊರತೆಯನ್ನು ಮಾಡದ ಕ್ಯೂಬಾ ಕಮ್ಯುನಿಸ್ಟ್ ಸರ್ಕಾರ ಸಾವಯವ ಕೃಷಿಗೂ ಪ್ರಸಿದ್ಧ. ಪ್ರಪಂಚದ ಯಾವುದೇ ಮೂಲೆಯಲ್ಲೂ ಎಲ್ಲಾ ಸ್ವರೂಪದ ಯುದ್ಧವನ್ನು ವಿರೋಧಿಸುತ್ತದೆ. ಪ್ರತಿನಿತ್ಯ ಅಮೇರಿಕಾದ ಗುಪ್ತಚರ ಇಲಾಖೆಯ ಸಂಚು ಮತ್ತು ಮೋಸಕ್ಕೆ ಪ್ರತಿರೋಧ ವ್ಯಕ್ತಮಾಡುತ್ತಾ ಸಮಾಜವಾದದ ಕೆಂಬಾವುಟವನ್ನು ಎತ್ತಿಹಿಡಿದಿದೆ. ಈ ದೇಶದ ಕ್ರಾಂತಿಗೆ 59 ವರ್ಷಗಳು ಸಂದಿವೆ. ಕ್ರೀಡಾ ನೀತಿ, ಸಮಗ್ರ ಯುವಜನ ನೀತಿ, ವ್ಯವಸ್ಥಿತ ಯೋಜನಾಬದ್ಧ ಆರ್ಥಿಕ ನೀತಿ ಹಾಗೂ ಯುದ್ಧ ವಿರೋಧಿ ವಿದೇಶಾಂಗ ನೀತಿಗೆ ಕ್ಯೂಬಾ ಪ್ರಸಿದ್ಧ. ಟ್ರಂಪ್ ಅಮೇರಿಕಾದ ಅಧ್ಯಕ್ಷ ಗಾದಿ ಏರಿದ ನಂತರವಂತೂ ಕ್ಯೂಬಾದ ಮೇಲೆ ವಿವಿಧ ರೀತಿಯ ಸಂಚಿಗೆ ಬುಡಮೇಲು ಕೃತ್ಯ ನಡೆಸಲು ಮುಂದಾಗಿದ್ದಾರೆ. ಇದನ್ನು ದುಡಿಯುವ ಜನತೆ ಸಹಿಸಲು ಸಾಧ್ಯವಿಲ್ಲ. ನಾವು ಇದನ್ನು ಖಂಡಿಸುತ್ತಾ ಕ್ಯೂಬಾ ಸಮಾಜವಾದಿ ವ್ಯವಸ್ಥೆಗೆ ಸೌಹಾರ್ದ ಬೆಂಬಲ ನೀಡುತ್ತೇವೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೇಂದ್ರ ಸಮಿತಿ ಸದಸ್ಯರಾದ ಯಮುನಾ ಗಾಂವ್ಕರ್ ಹೇಳಿದರು.

ಅವರು ಸಿಐಟಿಯು ಕೇಂದ್ರ ಸಮಿತಿ ಕರೆಯ ಮೇರೆಗೆ ಕಾರವಾರದಲ್ಲಿ ಸಿಐಟಿಯು, ಪ್ರಾಂತ ರೈತ ಸಂಘ, ಭಾರತ ವಿದ್ಯಾರ್ಥಿ ಫೆಡರೇಶನ್ ಎಸ್.ಎಫ್.ಐ ನೇತೃತ್ವದಲ್ಲಿ ಸಂಘಟಿಸಿದ ಕ್ಯೂಬಾ ಸೌಹಾರ್ದ ಬೆಂಬಲ ದಿನವನ್ನು ಉದ್ದೇಶಿಸಿ ಮಾತನಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಶಾಂತಾರಾಮ ನಾಯಕ ಮಾತನಾಡಿ "ಸಮಾಜವಾದಿ ಕ್ರಾಂತಿಯ ಶತಮಾನೋತ್ಸವದ ಸಂತಸದಲ್ಲಿ ಕ್ಯೂಬಾ ತನ್ನ ಮಿತಿಗಳ ಮಧ್ಯೆಯೂ ದುಡಿಯುವ ಜನತೆಯ ವರ್ಗ ಹೋರಾಟದ ಹೊಸ ಮಾದರಿಯ ಪರ್ಯಾಯವನ್ನು ಜಗತ್ತಿಗೆ ನೀಡಿದೆ. ಅದರ ರಕ್ಷಣೆ ಜಗತ್ತಿನ ಎಲ್ಲಾ ದುಡಿಯುವ ವರ್ಗದ ಕರ್ತವ್ಯ ಕೂಡ. ನಮ್ಮ ಸೌಹಾರ್ದ ಎಂದಿಗೂ ಉಳಿಯುತ್ತದೆ. ಸಂಸದೀಯ ಪ್ರಜಾಪ್ರಭುತ್ವದ ನಮ್ಮ ದೇಶದಲ್ಲಿ ಕೂಡ ಅಂಥ ಪರ್ಯಾಯ ರಾಜಕೀಯ ನಮ್ಮ ರೈತ ಕಾರ್ಮಿಕರ ಸಖ್ಯತೆಯ ಆಂದೋಲನಗಳಿಂದಲೇ ಸಾಧ್ಯವಾಗಿಸಬೇಕಿದೆ." ಎಂದರು. ಎಸ್.ಎಫ್ ಐ ನ ಜಿಲ್ಲಾ ಸಂಚಾಲಕರಾದ ಗಣೇಶ ರಾಠೋಡ ಮಾತನಾಡಿ ಸಮಾನತೆಯ ಸಮಾಜ ವಿದ್ಯಾರ್ಥಿ ಯುವಜನರ ಕನಸು. ಅದು ನನಸಾಗಬೇಕೆಂದರೆ ಅತಿ ಚಿಕ್ಕ ದೇಶ ಕ್ಯೂಬಾ ಶಿಕ್ಷಣ ಮತ್ತು ಉದ್ಯೋಗ ದಲ್ಲಿ ಸಾಧಿಸಿದ ಸಾಧನೆ ಭಾರತಕ್ಕೆ ಮಾದರಿಯಾಗಬೇಕು ಎಂದರು. ಕಟ್ಟಡ ಕಾರ್ಮಿಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ತಿಲಕ ಗೌಡ, ಕೆಪಿಆರ್.ಎಸ್ ಜಿಲ್ಲಾ ಕಾರ್ಯದರ್ಶಿ ಶ್ಯಾಮನಾಥ ನಾಯ್ಕ, ಸಿಐಟಿಯು ಮುಂದಾಳು ಎಚ್. ಬಿ. ನಾಯಕ, ಸುಭಾಸ ಕೊಪ್ಪಿಕರ್ ಉಪಸ್ಥಿತರಿದ್ದರು.

– ಯಮುನಾ ಗಾಂವ್ಕರ್

ಎರಡು ಧ್ರುವಗಳತ್ತ ಎರಡು ತಾರೆಗಳು

ಕೇಳಿಸಿದ್ದು

ವಿಕ್ರಮ್ ಸಾರಾಭಾಯಿಯವರ ಕನಸನ್ನು ನನಸು ಮಾಡಹೊರಟ ಇಬ್ಬರು ವಿಜ್ಞಾನಿಗಳು– ಇಬ್ಬರೂ ಭೌತವಿಜ್ಞಾನಿಗಳು, ಇಬ್ಬರೂ ಪದ್ಮವಿಭೂಷಣ ಸಮ್ಮಾನಿತರು– 36 ಗಂಟೆಗಳ ಅಂತರದಲ್ಲಿ ಗತಿಸಿದರು. ಪ್ರೊ. ಯು.ಆರ್. ರಾವ್ ಮತ್ತು ಪ್ರೊ. ಯಶ್ಪಾಲ್ ಇಬ್ಬರೂ ಅಮೆರಿಕದಲ್ಲಿ ಉನ್ನತ ಅಧ್ಯಯನ ಮಾಡಿ ಬಂದವರು. ಇಬ್ಬರೂ ಅಹ್ಮದಾಬಾದ್ಯ ಭೌತವಿಜ್ಞಾನ ಕೇಂದ್ರದಲ್ಲಿ ಹೊಸ ಸಂಶೋಧನ ಕ್ಷೇತ್ರಕ್ಕೆ ಕಾಲಿಟ್ಟವರು. ನಂತರದ ಅವರಿಬ್ಬರ ಕಾರ್ಯಕ್ಷೇತ್ರಗಳು ಬಾಹ್ಯಾಕಾಶಕ್ಕೆ ಸಂಬಂಧಿಸಿದ್ದೇ ಆದರೂ ಪರಸ್ಪರ ವಿರುದ್ಧ ದಿಕ್ಕಿಗೆ ವಿಸ್ತರಿಸಿಕೊಂಡವು. ಯು.ಆರ್. ರಾವ್ ರಾಕೆಟ್ಟಗಳತ್ತ ಮುಖ ಮಾಡಿದರೆ, ಯಶ್ಪಾಲ್ ವಿಜ್ಞಾನ ಶಿಕ್ಷಣವನ್ನು ಸುಧಾರಿಸುವತ್ತ ಗಮನ ಹರಿಸಿದರು.

ಯಶ್ಪಾಲ್ ಬಾಹ್ಯಾಕಾಶ ಕ್ಷೇತ್ರಕ್ಕೆ ಐದು ವರ್ಷ ಮೊದಲು ಕಾಲಿಟ್ಟರು. 1970ರ ಆರಂಭದಲ್ಲಿ ಅಮೆರಿಕ ಮತ್ತು ಸೋವಿಯತ್ ಸಂಘ ಎರಡೂ ಬಾಹ್ಯಾಕಾಶ ಸ್ಪರ್ಧಾರ್ಥಿ ಹೊತೊಂಟಿಯಲ್ಲಿ ತೊಡಗಿದ್ದವು. ಉಪಗ್ರಹಗಳನ್ನು ಸಂಪರ್ಕದ ಸಾಧನವಾಗಿ ಬಳಸುವ ಕೆಲಸ ಬೇರೆ ಯಾವ ದೇಶಗಳಲ್ಲೂ ಆರಂಭವಾಗಿರಲಿಲ್ಲ. ಭಾರತಕ್ಕೆ ಉಪಗ್ರಹ ಸೇವೆಯನ್ನು ಎರವಲು ನೀಡಲು ಅಮೆರಿಕ ಮುಂದೆ ಬಂತು. ಅದನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಿರ್ಧರಿಸಲೆಂದು ಅಹ್ಮದಾಬಾದ್ನಲ್ಲಿ 'ಸ್ಪೇಸ್ ಅಪ್ಲಿಕೇಶನ್ ಸೆಂಟರ್' ಆರಂಭವಾಯಿತು.

ದೂರದರ್ಶನ ಪ್ರಸಾರಕ್ಕೆ ಬಳಸಲು ಸಾಧ್ಯವಾಗುವುದಾದರೆ ಭಾರತದ ಹಳ್ಳಿಹಳ್ಳಿಗಳಿಗೂ ಜ್ಞಾನ ಪ್ರಸಾರಕ್ಕೆ ಅದು ಬಹುಮುಖ್ಯ ಸಾಧನ ಆದೀತೆಂದು ಯಶ್ಪಾಲ್ ಸೂಚಿಸಿದರು. ಈ ವಿಚಾರ ಅಂದಿನ ಮಟ್ಟಿಗೆ ಜಗತ್ತಿಗೇ ಹೊಸದಾಗಿತ್ತು.

ಮಕ್ಕಳಿಗಾಗಿ ವಿಜ್ಞಾನ ಪಾಠಗಳನ್ನು ನಿರೂಪಿಸುವ ಸವಾಲು ಇವರಿಗೆ ಎದುರಾಯಿತು. ಯಾವುದೇ ಪರಿಕರಗಳಿಲ್ಲದೆಯೂ ಮಕ್ಕಳು ಬೆಳೆಯುತ್ತಿರುವ ಪರಿಸರದ ಉದಾಹರಣೆಗಳಲ್ಲೇ ವಿಜ್ಞಾನ ಮತ್ತು ವೈಜ್ಞಾನಿಕ ತತ್ವಗಳನ್ನು ತೋರಿಸಿ ವೈಜ್ಞಾನಿಕ ಮನೋಭಾವವನ್ನು ಬಿತ್ತುವ ಹೊಸ ಪಠ್ಯಕ್ರಮಗಳನ್ನು ರೂಪಿಸುವ ಹೊಣೆಯನ್ನು ಯಶ್ಪಾಲ್ ಹೊತ್ತರು. ಅವನ್ನೆಲ್ಲ ಪ್ರಸಾರ ಮಾಡಲು ಅಮೆರಿಕದ ಉಪಗ್ರಹಗಳನ್ನು ಅವಲಂಬಿಸುವ ಬದಲು ಭಾರತದ್ದೇ ಉಪಗ್ರಹವನ್ನು ರೂಪಿಸುವ ಹೊಣೆ ಯು. ಆರ್. ರಾವ್ ಪಾಲಿಗೆ ಬಂತು. ಒಂದೇ ಸಂಸ್ಥೆಯ ಒಂದು ಕಡೆ 'ಆರ್ಯಭಟ' ಉಪಗ್ರಹದ ನೀಲನಕ್ಷೆ ಸಿದ್ಧವಾಗುತ್ತಿದ್ದಾಗ ಇನ್ನೊಂದು ಕಡೆ ಅದರ ಪ್ರಯೋಜನವನ್ನು ಜನಸಾಮಾನ್ಯರಿಗೆ ತಲುಪಿಸುವ ವಿಧಿ ವಿಧಾನಗಳ ನಕ್ಷೆ ಸಿದ್ಧವಾಗತೊಡಗಿತ್ತು.

ಮುಂದಿನ ಕತೆಯನ್ನು ಮತ್ತೆ ಹೇಳಬೇಕಾಗಿಲ್ಲ. ಇಬ್ಬರೂ ಮೇಲೇರುತ್ತ, ಭಾರತದ ಪ್ರತಿಭೆಗಳನ್ನು ಹುಡುಕಿ ಮೇಲೆತ್ತುತ್ತ ಹೋದರು. ಉಪಗ್ರಹ ತಯಾರಾದರೆ ಸಾಲದು, ಅದನ್ನು ಮೇಲಕ್ಕೆ ಎತ್ತಿ ಕೂರಿಸಲು ನಮ್ಮದೇ ರಾಕೆಟ್ಟನ್ನು ರೂಪಿಸುವತ್ತ ಯು.ಆರ್. ರಾವ್ ನೇತೃತ್ವದ ತಂಡ ಸಜ್ಜಾಗುತ್ತಿತ್ತು. ಮಕ್ಕಳ ಪಾಠಕ್ರಮ ಬದಲಾದರೆ ಸಾಲದು, ಬೋಧನಾ ಕ್ರಮ ಕೂಡ ಬದಲಾಗಬೇಕು, ಅಜ್ಞಾನ ನೀಗಿದರೆ ಸಾಲದು, ಸಮಾಜದಲ್ಲಿ ಹಾಸು ಹೊಕ್ಕಾಗಿರುವ ಮೌಢ್ಯಗಳ ನಿವಾರಣೆಗೂ ಕ್ರಮ ಕೈಗೊಳ್ಳಬೇಕು ಎಂದು ಯಶ್ಪಾಲ್ ತಮ್ಮನ್ನು ತೊಡಗಿಸಿಕೊಂಡರು. ವಿಜ್ಞಾನ ಶಿಕ್ಷಣಕ್ಕೆಂದೇ ಸಂಶೋಧನ ಸಂಸ್ಥೆಗಳನ್ನು ಕಟ್ಟಿದರು. ಮಕ್ಕಳಿಗೆ ವಿಜ್ಞಾನ ಬೋಧಿಸುವ ಸರ್ಕಾರೇತರ ಸಂಘಟನೆಗಳನ್ನು ಪ್ರೋತ್ಸಾಹಿಸಿದರು.

ಬಾಹ್ಯಾಕಾಶ ಯಾತ್ರಿಗಳ ಹಾಗೆ ಮಕ್ಕಳೂ ತೂಕರಹಿತ ಸ್ಥಿತಿಯಲ್ಲಿ ಶಿಕ್ಷಣ ಪಡೆಯುವುದು ಹೇಗೆಂಬ ಬಗ್ಗೆ 'ಲರ್ನಿಂಗ್ ವಿದೌಟ್ ಬರ್ಡನ್' ವರದಿ ತಯಾರಿಸಿದರು. ದೂರದರ್ಶನಕ್ಕೆಂದು ಗಿರೀಶ ಕಾರ್ನಾಡ್ ರೂಪಿಸಿದ ಜನಪ್ರಿಯ 'ಟರ್ನಿಂಗ್ ಪಾಯಿಂಟ್' ಕಾರ್ಯಕ್ರಮದಲ್ಲಿ ಮಕ್ಕಳಿಗೆ ವಿಜ್ಞಾನದ ಪ್ರಶ್ನೋತ್ತರ ಕಾರ್ಯಕ್ರಮಗಳನ್ನು ಸರಳ, ರಂಜನೀಯ ಶೈಲಿಯಲ್ಲಿ ನಡೆಸಿಕೊಟ್ಟರು.

ಯಶ್ಪಾಲ್ ನಿವೃತ್ತಿಯ ನಂತರ ಇನ್ನೂ ಹೆಚ್ಚಿನ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. 'ಜನ ವಿಜ್ಞಾನ ಜಾಥಾ' ಮೂಲಕ ದೇಶದ ಮೂಲೆ ಮೂಲೆಗೆ ವಿಜ್ಞಾನ ಸಂದೇಶವನ್ನು ತಲುಪಿಸಬಲ್ಲ ಐದು ಕೋಟಿ ಸಂವಹನಕಾರರ ಗುಂಪುಗಳನ್ನು ಸಂಘಟಿಸಿದರು. ಎಲ್ಲೇ ಸೂರ್ಯಗ್ರಹಣ ನಡೆಯಲಿ, ಅದೊಂದು ವಿಜ್ಞಾನದ ಹಬ್ಬವೆಂಬಂತೆ, ಮೂಢ ನಂಬಿಕೆಗಳ ನಿವಾರಣೆಗೆ ಒದಗಿದ ಸುಸಂದರ್ಭವೆಂಬಂತೆ ಮೇಳ ನಡೆಸುತ್ತಿದ್ದರು.

(ಡಾ। ಯು.ಆರ್.ರಾವ್ ಮತ್ತು ಪ್ರೊ। ರಾಮಪಾಲ್ ಅವರ ನಿಧನದ ಬಗ್ಗೆ)

– ನಾಗೇಶ್ ಹೆಗಡೆ

ಅತಿಥಿ ಅಂಕಣ



ಪ್ರೊ. ಟಿ.ಆರ್.ಚಂದ್ರಶೇಖರ್

ಬಸವಣ್ಣನ ಹಾದಿಯಲ್ಲಿ ಜನನಾಯಕರು: ಯಾರವರು?!

ಬಸವ ಸಂವಿಧಾನದ ಮೌಲ್ಯಗಳಾದ ಸಮಾನತೆ, ಸಾಮಾಜಿಕ ನ್ಯಾಯ, ಕಾಯಕನಿಷ್ಠೆ, ಲಿಂಗ ಸಮಾನತೆ, ಅಕ್ಷರ ಸಂಸ್ಕೃತಿ, ಆಹಾರ ಹಕ್ಕು ಬಗ್ಗೆ ಇಂದು ಹೋರಾಟ ಮಾಡುತ್ತಿರುವವರು ಎಡಪಂಥೀಯ ಚಿಂತಕರು. ಅಪ್ಪಟ ಬಸವ ಹಾದಿಯ ಜನನಾಯಕರು ಅಂದರೆ ಎಡಪಂಥಿಯ ಚಿಂತಕರು ಎಂಬುದನ್ನು ನಾವು ಅರಿತುಕೊಳ್ಳಬೇಕು. ನಮ್ಮ ರಾಜ್ಯದಲ್ಲಿನ ಅಂಗನವಾಡಿ ಕಾರ್ಯಕರ್ತೆಯರ ಯಶಸ್ವಿ ಹೋರಾಟ ಸಂಘಟಿಸಿದವರು ಯಾರು? ಇಂದು ಕರ್ನಾಟಕದಲ್ಲಿ ರೈತರು ಮತ್ತು ಕೃಷಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಚಳುವಳಿಯನ್ನು ನಡೆಸುತ್ತಿರುವವರು ಬಸವ ಹಾದಿ ಜನನಾಯಕರು. ಹಸಿವು ಮುಕ್ತ ಕರ್ನಾಟಕಕ್ಕಾಗಿ, ದಲಿತರ ಭೂಮಿ ಹಕ್ಕಿಗಾಗಿ ಹೋರಾಟ ಮಾಡುತ್ತಿರುವ ಜನನಾಯಕರೇನಿದ್ದಾರೆ ಅವರು ಬಸವ ಹಾದಿಯ ಪ್ರಥಮರು. ಜಾತಿಯ ಹೆಸರಿನಲ್ಲಿ, ಜಾನುವಾರು ರಕ್ಷಣೆಯ ರಾಜಕಾರಣದ ಮೂಲಕ, ಮಠಗಳನ್ನು ಗುತ್ತಿಗೆ ಹಿಡಿಯುವ ನೆಪದಲ್ಲಿ ತಾರತಮ್ಯ ಮಾಡುವ, ಅಸಮಾನತೆಯನ್ನು ಊರ್ಜಿತಗೊಳಿಸುವ ಕೆಲಸದಲ್ಲಿ ನಿರತರಾದವರು ಬಸವ ಹಾದಿಯ ಜನನಾಯಕರಾಗುವುದು ಸಾಧ್ಯವಿಲ್ಲ.

'ಬಸವನ ಹಾದಿಯಲ್ಲಿ ಜನನಾಯಕರು' ಎಂಬ ವಿಷಯ ಕುರಿತಂತೆ ಒಂದು ಕಾರ್ಯಕ್ರಮ ಬೆಂಗಳೂರಿನಲ್ಲಿ ನಡೆದಿದ್ದರ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಶೀರ್ಷಿಕೆಯೇನೋ ಆಕರ್ಷಣೀಯವಾಗಿದೆ. ಇಲ್ಲಿ ನಮಗೆ ಎದುರಾಗುವ ಪ್ರಶ್ನೆಯೆಂದರೆ ಬಸವಣ್ಣನ ಹಾದಿಯಲ್ಲಿ ನಡೆಯುತ್ತಿರುವ ಜನನಾಯಕರು ಯಾರು? ಯಾರವರು? ಇದಕ್ಕೆ ಉತ್ತರ ಸುಲಭವಾಗಿ ದೊರೆಯುವುದಿಲ್ಲ. ಬಸವಣ್ಣನನ್ನು ಅನುಸರಿಸುವುದು ಸುಲಭದ ಸಂಗತಿಯಲ್ಲ. ಬಸವಣ್ಣನೇ ಹೇಳಿರುವಂತೆ ಅವನದು ಲೋಕ ವಿರೋಧವನ್ನು ಕಟ್ಟಿಕೊಂಡು ನಡೆದ ನಡೆ. ಅದು ದಾಕ್ಷಿಣ್ಯಕ್ಕೆ ಒಳಗಾಗದ ನಡೆ. ಅದು ಕಾಯಕನಿಷ್ಠೆಯ ನಡೆ. ಅವನದು ಮೌಢ್ಯ ವಿರೋಧಿ ನಡೆ. ಅದಕ್ಕೆ ಅವನು ಹೇಳುತ್ತಾನೆ–'ನೀರ ಕಂಡಲ್ಲಿ ಮುಳುಗುವರಯ್ಯಾ, ಮರನ ಕಂಡಲ್ಲಿ ಸುತ್ತುವರಯ್ಯಾ, ಬತ್ತುವ ಜಲವ, ಒಣಗುವ ಮರನ ನಂಬಿದವರು ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ'. ಈ ವಚನವನ್ನು ಹೇಳಿಕೊಂಡೇ ಮಳೆಗಾಗಿ ಪರ್ಜನ್ಯ ಹೋಮ ಮಾಡಿಸುವ ಜನನಾಯಕರನ್ನು ಬಸವಣ್ಣ ಹಾದಿಯಲ್ಲಿ ನಡೆಯುವವರು ಎಂದು ಹೇಳಬಹುದೇ? ರೇಷ್ಮೆಯ ಶಾಲನ್ನು ಹೊದ್ದುಕೊಂಡು, ಹಣೆಯ ಮೇಲೆ ಕುಂಕುಮ ಬಳಿದುಕೊಂಡು ಇಡೀ ದೇಶದ ಗುಡಿ ಗುಡಾರಗಳನ್ನು ಸುತ್ತುವವರನ್ನು ಬಸವಣ್ಣನ ಹಾದಿಯಲ್ಲಿ ನಡೆಯುವ ಜನನಾಯಕರು ಎಂದರೆ ಕೂಡಲಸಂಗಮದೇವ ನಗುವನಯ್ಯ. ಹಡಪದ ಅಪ್ಪಣ್ಣಗಳು ಹೇಳುವ ವಚನ ನೋಡಿ:

ತೀರ್ಥ ಯಾತ್ರೆ ಲಿಂಗ ದರುಶನಕ್ಕೆ ಹೋಗಿ
ಕರ್ಮವ ಹಿಂಗಿಸಿಕೊಂಬೆನೆಂಬ ಭಂಗಿತರ ಮಾತ
ಕೇಳಲಾಗದು.
ಅದೇನು ಕಾರಣವೆಂದರೆ,

ಇದನರಿಯದೆ ಇನ್ನು ತೀರ್ಥ ಯಾತ್ರೆ ಲಿಂಗ
ದರುಶನ ಉಂಟೆಂಬ
ಅಂಗ ಹೀನರ ಮುಖವ ನೋಡಲಾಗದು
ಬಸವಪ್ರಿಯ ಕೂಡಲ ಚೆನ್ನಬಸವಣ್ಣ

ತೀರ್ಥಯಾತ್ರೆ ಮತ್ತು ಲಿಂಗ ದರುಶನ ಇಂದು ವ್ಯಾಪಾರದ ಸಂಗತಿಗಳಾಗಿವೆ. ಅವುಗಳಿಗೆ ಅರ್ಥವಿಲ್ಲವೆಂದು ಬಸವ ಪ್ರಣಾಳಿಕೆ ಹೇಳುತ್ತದೆ. ಇಂದು ತೀರ್ಥಯಾತ್ರೆ ಅನ್ನುವುದು ವ್ಯಾಪಾರವಾಗಿದೆ.

ನಮ್ಮ ಹಿಂದಿನ ಮುಖ್ಯಮಂತ್ರಿಯೊಬ್ಬರು ಅಧಿಕಾರ ಸ್ವೀಕಾರ ಮಾಡಿದ ಮೇಲೆ ತಮ್ಮ ಕಚೇರಿಯ ಪೀಠೋಪಕರಣಗಳನ್ನು ಪುರೋಹಿತರ ನೇತೃತ್ವದಲ್ಲಿ ಪರಿಶುದ್ಧಗೊಳಿಸಿ ಅದರಲ್ಲಿ ಆಸೀನರಾದರು. ಆದರೂ ಅವರಿಗೆ ತಮ್ಮ ಅಧಿಕಾರವಧಿಯನ್ನು ಪೂರೈಸಲಾಗಲಿಲ್ಲ ಎಂಬುದು ಬೇರೆ ಮಾತು!. ಪವಿತ್ರ–ಅಪವಿತ್ರ, ಶುದ್ಧ–ಅಶುದ್ಧಗಳ ನಡುವಿನ ಭಿನ್ನತೆಯನ್ನೇ ಬಸವ ಪ್ರಶ್ನೆ ಮಾಡಿದ. ಅವನ ಈ ಪ್ರಣಾಳಿಕೆ ಹೀಗಿದೆ:

ನೆಲವೊಂದೆ ಹೊಲಗೇರಿ ಶಿವಾಲಯಕ್ಕೆ,
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನತಾನರಿದವಂಗೆ, ಫಲವೊಂದೆ
ಷಡುದರುಶನ ಮುಕ್ತಿಗೆ,
ನಿಲವೊಂದೆ ಕೂಡಲಸಂಗಮದೇವಾ
ನಿನ್ನನರಿದವಂಗೆ.

ಬಸವಣ್ಣನ ಹಾದಿ ರತ್ನಗಂಬಳಿಯ ಹಾದಿಯಲ್ಲ. ಅದು ಹೂವು–ಹಾಸಿಗೆ, ಚಂದ್ರ–ಚಂದನದ ಹಾದಿಯಲ್ಲ. ಅದು ಕಲ್ಲುಮುಳ್ಳಿನ ಹಾದಿ. ಇಂದಿನ ಜನನಾಯಕರಿಗೆ ಬಸವಣ್ಣನ ಕಾಯಕನಿಷ್ಠೆಗಿಂತ ಮರ ಸುತ್ತುವುದು ಬೇಕು. ಗುಡಿಯನ್ನು ಸುತ್ತುವುದಕ್ಕಾಗಿ ನಮ್ಮ ಜನನಾಯಕರು ಹಿಮಾಲಯಕ್ಕೂ ಹೋಗಿ ಬರುತ್ತಾರೆ. ಕೇರಳಕ್ಕೂ ಎಡತಾಕುತ್ತಾರೆ.

ಬಸವಣ್ಣನ ಹಾದಿ ಅಂದರೆ ಅದು ಯಜ್ಞ ಯಾಗಗಳಿಂದ ಮುಕ್ತವಾದ ನಡೆ. ಹೋಮಹವನಗಳ ಹಂಗಿಲ್ಲದ ನಡೆ. ಬಸವಣ್ಣ ಇದರ ಬಗ್ಗೆ ಹೀಗೆ ನುಡಿದಿದ್ದಾನೆ.

ಆಹ್ವಾನವಿಲ್ಲ ಪ್ರಾಣ ಲಿಂಗವಾದ ಕಾರಣ,
ವಿಸರ್ಜನವಿಲ್ಲ ಲಿಂಗ ನೆಲೆಗೊಂಡಿಪ್ಪುದಾಗಿ
ಇದು ಕಾರಣ ಆಹ್ವಾನವಿಲ್ಲ, ವಿಸರ್ಜನವಿಲ್ಲ,
ಶರಣರ ಪರಿ ಬೇರೆ
ಅಂಗಸಂಗವೇ ಲಿಂಗ, ಲಿಂಗಸಂಗವೇ ಮನ,
ನಮ್ಮ ಕೂಡಲಸಂಗನ ಶರಣ ಸುಯಿದಾನಿ.

ಆಹ್ವಾನ ಮತ್ತು ವಿಸರ್ಜನ–ಇವು ಯಜ್ಞದ ಪರಿಭಾಷೆ. ಅವುಗಳನ್ನು ಬಸವ ಸಂವಿಧಾನ ತಿರಸ್ಕರಿಸಿದೆ. ಅದನ್ನು ಕಾಯಾ ವಾಚ ಮನಸಾ ಅನುಸರಿಸುವವರು ಬಸವನ ಹಾದಿಯ ಜನನಾಯಕರಾಗ ಬಲ್ಲರೆ! ಇಂದಿನ ನಮ್ಮ ಜನನಾಯಕರಿಗೆ ಯಜ್ಞ–ಯಾಗಗಳಿಲ್ಲದೆ ನಡೆಯುವುದಿಲ್ಲ. ಹಾಗಾದರೆ ಬಸವಣ್ಣನ ಹಾದಿಯಲ್ಲಿ ನಡೆಯುವ ಜನನಾಯಕರು ಅಂದರೆ ಯಾರವರು! ಬಸವ ಮೌಲ್ಯಗಳನ್ನು ಬದುಕುತ್ತಿರುವವರು ಯಾರವರು?

ಅಕ್ರಮಗಳ ಆಪಾದನೆಯ ಮೇಲೆ ಸೆರೆಮನೆ ಸೇರಿ ಬಂದ ರಾಜಕಾರಣಿಗಳು ಬಸವಣ್ಣನ ಹಾದಿಯ ಜನನಾಯಕರಾಗಬಲ್ಲರೆ? ಡಾ. ಎಂ. ಎಂ. ಕಲಬುರ್ಗಿ ಅವರ ಹತ್ಯೆಯಾದಾಗ ಮತ್ತು ತದನಂತರ ಅದನ್ನು ಖಂಡಿಸಿ ಪ್ರತಿಭಟನೆ ಮಾಡುವುದಕ್ಕೆ ಸಿದ್ದರಿಲ್ಲದ ಜನರು ಇಂದು ಆಯ್ದ ಕೊಲೆಗಳ ಬಗ್ಗೆ ಹೋರಾಟದ ಕರೆ ನೀಡುತ್ತಿದ್ದಾರೆ. ಬಸವಣ್ಣನ ಹಾದಿಯ ಜನನಾಯಕರು ಅಂದರೆ ಡಾ. ಎಂ. ಎಂ. ಕಲಬುರ್ಗಿ. ಕೊನೆಯುಸಿರು ಇರುವವರೆವಿಗೂ ಕಾಯಕದಲ್ಲಿ ನಿಷ್ಠರಾಗಿದ್ದ ಡಾ. ಕಲಬುರ್ಗಿ ಅವರು ಬಸವಣ್ಣನ ಹಾದಿಯಲ್ಲಿ ನಡೆದ ಜನನಾಯಕರು. ಬಸವಣ್ಣನ ಹಾದಿಯಲ್ಲಿ ನಡಯುತ್ತಿರುವ ಜನನಾಯಕರು ಎಂದು ಹೇಳಿಕೊಂಡು ಸಂಸ್ಕೃತಕ್ಕೆ ಮಣೆ ಹಾಕುತ್ತಿರುವವರು ಜನನಾಯಕರಾಗುವುದು ಸಾಧ್ಯವಿಲ್ಲ. ವೇದಕ್ಕೆ ಒರೆಯ ಕಟ್ಟುವೆ ಎಂದೂ, ವೇದ ನಡುನಡುಗಿತ್ತು ಎಂದು ವೇದಾಗಮಶಾಸ್ತಗಳನ್ನು ತಿರಸ್ಕರಿಸಿದ್ದು ಬಸವಣ್ಣನ ಹಾದಿ. ಅವುಗಳು ನಮ್ಮ ಸಮಾಜದ ಅದರ್ಶದ ಸಂಗತಿಗಳೆಂದು ಪೊಳ್ಳು ಪೊಳ್ಳು ಮಾತನಾಡುವವರು ಜನನಾಯಕರಾಗ ಬಲ್ಲರೆ? ಬಸವ ಪ್ರಣಾಳಿಕೆಗೆ ವೇದಾಗಮ ಉಡುಪು ತೊಡಿಸುತ್ತಿರುವ ವಿದ್ವಾಂಸರು ಬಸವನ ಹಾದಿಯ ಜನನಾಯಕರೆಂದರೆ ಅದನ್ನು ನಂಬಲಾಗುವುದಿಲ್ಲ.

ಬಸವಣ್ಣನ ಹಾದಿ ಅಂದರೆ ಅದು ಕೇವಲ ಬಸವಣ್ಣ ಒಬ್ಬ ವ್ಯಕ್ತಿಯಾಗಿ ನಡೆದ–ಕಟ್ಟಿದ ಹಾದಿಯಲ್ಲ. ಅದು ಬಸವ ಸಂಘಟನೆಯ ನಡೆ. ಅದು ವಚನ ಸಂಸ್ಕೃತಿಯ ನಡೆ. ಸಮಾನತೆಯ ಕಡೆಗಿನ ನಡೆ. ಮತ್ತೆ ಮತ್ತೆ ಮಾದಾರ ಚೆನ್ನಯ್ಯನನ್ನು ಸ್ಮರಿಸುವ ಬಸವಣ್ಣನದು ಸಾಮಾಜಿಕ ನ್ಯಾಯದ ನಡೆ. ಅದನ್ನು ತಿರಸ್ಕರಿಸುತ್ತಿರುವ ಸಂಘಟನೆಯ ಪ್ರತಿನಿಧಿಯಾಗಿರುವವರು ಬಸವನ ಹಾದಿಯ ಜನನಾಯಕರಾಗುವುದು ಸಾಧ್ಯವಿಲ್ಲ. ಅಂಬಿಗರ ಚೌಡಯ್ಯ ಹೇಳುತ್ತಾರೆ:

ದೇಹಾರ ಮಾಡುವ ಅಣ್ಣಗಳಿರಾ ಒಂದು ತುತ್ತು
ಆಹಾರವನ್ನಿಕ್ಕಿರಯ್ಯಾ
ದೇಹಾರಕ್ಕೆ ಆಹಾರವೇ ನಿಚ್ಚಳಿಕೆ ದೇಹಾರವ
ಮಾಡುತ್ತೆ ಆಹಾರವನ್ನಿಕ್ಕದಿದ್ದರೆ
ಆ ಹರನಿಲ್ಲೆಂದ ಅಂಬಿಗರ ಚೌಡಯ್ಯ.

ಆದರೆ ಇಂದಿಗೂ ಸಾವಿರಾರು ಕೋಟಿ ರೂಪಾಯಿ ಹಣವನ್ನು ಹೂಡಿ ದೇಹಾರ/ದೇವಾಲಯಗಳನ್ನು ಕಟ್ಟಿಸುವವರಿದ್ದಾರೆ. ಅದಕ್ಕೆ ಒತ್ತಾಸೆಯಾಗಿ ನಿಲ್ಲುವವರು ಬಸವಣ್ಣನ ಹಾದಿಯ ಜನನಾಯಕರಾಬಲ್ಲುರೆ?

ಬಸವಣ್ಣನದು ಅಕ್ಷರ ದಾಸೋಹದ ನಡೆ. ಆದರೆ ಅಕ್ಷಯ ಪಾತ್ರದ ನಡೆಯವರು ಬಸವನ ಹಾದಿಯ ಜನನಾಯಕರಾಗುವುದು ಅಸಾಧ್ಯ. ಬಸವಣ್ಣ ಸಂವಿಧಾನದಲ್ಲಿ ಅಕ್ಷರ ಮತ್ತು ಆಹಾರ ಜನರ ಹಕ್ಕುಗಳು. ಅವು ದತ್ತಿದಾನ ಉಂಬಳಿಯಲ್ಲ. ದತ್ತಿ–ದಾನದಲ್ಲಿ ಮತ್ತು ಬೇಡುವ–ನೀಡುವ ಪ್ರಕ್ರಿಯೆಯಲ್ಲಿ ನಂಬಿಕೆಯಿರುವವರು ಬಸವ ಸಂವಿಧಾನದಲ್ಲಿ ಸ್ಥಾನ ಪಡೆಯುವುದು ಹೇಗೆ ಸಾಧ್ಯ?

ಜಾನುವಾರುಗಳ ಹೆಸರಿನಲ್ಲಿ ಮುಗ್ಧ ಜನರನ್ನು ಕೊಲೆ ಮಾಡುತ್ತಿರುವ, ಅದನ್ನು ತಮ್ಮ ಪವಿತ್ರ ಪ್ರಣಾಳಿಕೆಯನ್ನಾಗಿ ಮಾಡಿಕೊಂಡಿರುವ ಪಕ್ಷ–ಕ್ಕೆ ಸೇರಿದವರು ಬಸವನ ಹಾದಿಯ ಜನನಾಯಕರಾಗುವುದು ಎಂದರೆ ಅದು ಬಸವಣ್ಣನಿಗೆ, ವಚನ ಸಿದ್ಧಾಂತಕ್ಕೆ ಸಲ್ಲದ ಸಂಗತಿ. ಮತ್ತೊಬ್ಬರ ಆಹಾರದ ಹಕ್ಕನ್ನು ಕಿತ್ತುಕೊಳ್ಳುವವರು ದಾಸೋಹ ಪ್ರೇಮಿ ಬಸವನ ಹಾದಿ ಜನನಾಯಕರಾಗುವುದು ಸಾಧ್ಯವಿಲ್ಲ. ಒಂದು ಸಮಾಜದಲ್ಲಿ ಏಕರೂಪತೆ ಅನ್ನುವುದು ಇರಲು ಸಾಧ್ಯವಿಲ್ಲ. ಬಹರೂಪತೆಯನ್ನು, ಬಹುವಚನವನ್ನು ಪೋಷಿಸಿದವನು ಬಸವಣ್ಣ. ಆದರೆ ಇಂದು ಎಲ್ಲರಿಗೂ ಒಂದೆ ಆಹಾರ, ಒಂದೆ ಧರ್ಮಗ್ರಂಥ, ಒಂದೆ ಮಾರುಕಟ್ಟೆ–ಮುಂತಾದವುಗಳನ್ನು ಮಾಡಹೊರಟಿರುವವರು ಜನನಾಯಕರು ಅಂ–ದರೆ ಬಸವಣ್ಣ ನಗುತ್ತಾನೆ. ಬಹುರೂಪಿ ಅನ್ನುವುದು ಬಸವನ ಹಾದಿಯಲ್ಲಿ ಒಂದು ಮೌಲ್ಯ. ಅದು ತಿರಸ್ಕಾರದ ಸಂಗತಿಯಲ್ಲ. ಕುಲಹದಿನೆಂಟು ಜಾತಿಗೂ ಮನ್ನಣೆ ನೀಡಿದ್ದ ಬಸವಣ್ಣ ಕೆಳವರ್ಗದವರಿಗೆ, ಕೆಳಜಾತಿಯವರಿಗೆ ಆದ್ಯತೆಯನ್ನು ಕಲ್ಪಿಸಿದ್ದ. ಅದಕ್ಕಾಗಿಯೇ ಮಾತು ಮಾತಿಗೆ ಅವನು ಮಾದಾರ ಚೆನ್ನಯ್ಯನನ್ನು ತನ್ನ ನಡೆಯ ಮಾನದಂಡವನ್ನಾಗಿ ಮಾಡಿಕೊಳ್ಳುತ್ತಾನೆ. ಆದರೆ ಇಂದು ಸಮಾಜದಲ್ಲಿ ಕೇವಲ ಶೇಕಡ ನಾಲ್ಕೂವರೆಯಷ್ಟಿರುವ ಜನರು ಅಧಿಕಾಧಿಕ ಪ್ರಮಾಣದಲ್ಲಿ ಅಧಿಕಾರಗಳಲ್ಲಿದ್ದಾರೆ. ಮನುಷ್ಯರಿಗಿಂತ ಇಲ್ಲಿ ಪ್ರತಿಭೆಯು ಮುಖ್ಯವಾಗಿ ಬಿಟ್ಟಿದೆ. ಪ್ರತಿಭೆಗೆ ಮಣೆ ಹಾಕುವುದು ಬಸವನ ಹಾದಿಯಲ್ಲ. ವಂಚಿತರಿಗೆ, ಅಂಚಿನಲ್ಲಿರುವವರಿಗೆ ಮಣೆ ಹಾಕುವುದು ವಚನ ಸಂಸ್ಕೃತಿ ಮೌಲ್ಯ.



ಇಂದು ಧರ್ಮ ಮತ್ತು ವ್ಯಾಪಾರಗಳ ನಡುವೆ ಬಿಡಿಸಲಾಗದಷ್ಟು ಸಂಬಂಧ ಬೆಳೆದು ಬಿಟ್ಟಿದೆ. ಧರ್ಮವನ್ನು ವ್ಯಾಪಾರದ ಸಾಧನವನ್ನಾಗಿ ಮಾಡಿಕೊಂಡಿರುವ ಸಾಧು–ಸಂತರು ಹಾದಿ ಬೀದಿಯಲ್ಲಿ ದೊರೆಯುತ್ತಾರೆ. ತರತರದ ಎಣ್ಣೆ ಮಾರುವ ಸಾಧುಗಳಿದ್ದಾರೆ. ಹಿಟ್ಟು ಮಾರಾಟ ಮಾಡುವ ಸಂತರಿದ್ದಾರೆ. ಧರ್ಮ ಅನ್ನುವುದು ಇಂದು ಕಾರ್ಪೊರೇಟ್ ಸಂಸ್ಥೆಯಾಗುತ್ತಿದೆ. ಆನ್‌ಲೈನಿನಲ್ಲಿ ಪೂಜೆ, ಹರಕೆ, ಯಜ್ಞ–ಯಾಗಗಳನ್ನು ನಡೆಸುವ ಮಹರ್ಷಿಗಳಿದ್ದಾರೆ. ಇವರುಗಳನ್ನು ಬಸವ ಹಾದಿಯ ಜನನಾಯಕರನ್ನಾಗಿ ಮಾಡಿಕೊಳ್ಳುವುದು ಬಸವ ದ್ರೋಹ. ವ್ಯಾಪಾರ ಮಜಭೂತವಾಗಿ ನಡೆಯುವುದಾದರೆ ಬಸವನ ಹೆಸರು, ಮಾರಾಟ ನಡೆಯುವುದಾದರೆ ರಾಘವೇಂದ್ರನ ಭಜನೆ, ಜನ ಸೇರುವುದಾದರೆ ಗಣೇಶನ ಉತ್ಸವ, ಮಾಲೆಯ ಹೆಸರಿನಲ್ಲಿ ಮತಾಂಧತೆಯ ಪೋಷಣೆ ಮುಂತಾದ ಅಟ್ಟಹಾಸದಲ್ಲಿ ನಿರತರಾದವರು ಬಸವ ಹಾದಿ ಜನನಾಯಕರು ಅನ್ನಿಸಿಕೊಳ್ಳಲು ಅನರ್ಹರು. ಕುಟುಂಬ ರಾಜಕಾರಣ ನಡೆಸುವವರು ಬಸವ ಹಾದಿಯ ಜನನಾಯಕರಲ್ಲ.

ಬಸವನ ಹಾದಿಯಲ್ಲಿ ಜನನಾಯಕರು ಅನ್ನುವ ಕಾರ್ಯಕ್ರಮದಲ್ಲಿ ಬಸವ ಮೌಲ್ಯಗಳ ಚರ್ಚೆಗೆ ಪ್ರತಿಯಾಗಿ ಜನನಾಯಕನನ್ನು ಹೊಗಳುವ ಕೆಲಸ ನಡೆಯಿತು. 'ಕಾಯದ ಕಳವಳಕ್ಕಾಗಿ ಕಾಯಯ್ಯಾ ಎನ್ನೆನು, ಜೀವನೋಪಾಯಕ್ಕಾಗಿ ಈಯಯ್ಯಾ ಎನ್ನೆನು, ಆ ನಿಮ್ಮ ಹಾರೆನು, ಮಾನವರ ಬೇಡೆನು' ಎಂದು ಬಸವಣ್ಣ ಹೇಳಿದರೆ ನಾನು ತಮ್ಮ ಅಡಿಯಾಳಾಗುತ್ತೇನೆ ಅನ್ನುವ ನಾಯಕರ ಭಕ್ತರಾಗುವ ಜನರು ನಮ್ಮ ನಡುವಿದ್ದಾರೆ. ಈ ಬಗೆಯ ಜನನಾಯಕರುಗಳ ಕಾಲಿಗೆ ಬಿದ್ದು ತಮ್ಮ ಸ್ವಾಮಿನಿಷ್ಠೆಯನ್ನು ತೋರಿಸುವ ಕುಲಪತಿಗಳು ನಮ್ಮ ಮಧ್ಯದಲ್ಲಿದ್ದಾರೆ. ಇವರುಗಳನ್ನು ಜನನಾಯಕರು ಎಂದು ಒಪ್ಪಿಕೊಳ್ಳುವುದು ಹೇಗೆ? ಮಹಿಳೆಯರ ದೇವಾಲಯ ಪ್ರವೇಶದ ಬಗ್ಗೆ ಇನ್ನೂ ಅನುಮಾನ ವ್ಯಕ್ತ ಪಡಿಸುವ ಬಹುಶ್ರುತರೂ ನಮ್ಮಲ್ಲಿದ್ದಾರೆ. ಇವರು ಪ್ರಸಿದ್ಧ ಅಂಕಣಗಾರರು ಹೌದು. ಇವರನ್ನು ಜನನಾಯಕರೆನ್ನಬಹುದೆ?

ಬಸವ ಸಂವಿಧಾನದ ಮೌಲ್ಯಗಳಾದ ಸಮಾನತೆ, ಸಾಮಾಜಿಕ ನ್ಯಾಯ, ಕಾಯಕನಿಷ್ಠೆ, ಲಿಂಗ ಸಮಾನತೆ, ಅಕ್ಷರ ಸಂಸ್ಕೃತಿ, ಆಹಾರ ಹಕ್ಕು ಬಗ್ಗೆ ಇಂದು ಹೋರಾಟ ಮಾಡುತ್ತಿರುವವರು ಎಡಪಂಥೀಯ ಚಿಂತಕರು. ಅಪ್ಪಟ ಬಸವ ಹಾದಿಯ ಜನನಾಯಕರು ಅಂದರೆ ಎಡಪಂಥಿಯ ಚಿಂತಕರು ಎಂಬುದನ್ನು ನಾವು ಅರಿತುಕೊಳ್ಳಬೇಕು. ನಮ್ಮ ರಾಜ್ಯದಲ್ಲಿನ ಅಂಗನವಾಡಿ ಕಾರ್ಯಕರ್ತೆಯರ ಯಶಸ್ವಿ ಹೋರಾಟ ಸಂಘಟಿಸಿದವರು ಯಾರು? ಬೆಂಗಳೂರಿನಲ್ಲಿ ಪಿ ಎಫ್ ಹಣ ಪಡೆಯುವುದಕ್ಕೆ ಸಂಬಂಧಿಸಿದಂತೆ ಪ್ರತಿಭಟನೆ ಮಾಡಿದವರು ಮಹಿಳಾ ಕಾಯಕಜೀವಿಗಳು. ಇವರು ಬಸವ ಹಾದಿಯ ಜನನಾಯಕರು. ಇಂದು ಕರ್ನಾಟಕದಲ್ಲಿ ರೈತರು ಮತ್ತು ಕೃಷಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಚಳುವಳಿಯನ್ನು ನಡೆಸುತ್ತಿರುವವರು ಬಸವ ಹಾದಿ ಜನನಾಯಕರು. ಹಸಿವು ಮುಕ್ತ ಕರ್ನಾಟಕಕ್ಕಾಗಿ, ದಲಿತರ ಭೂಮಿ ಹಕ್ಕಿಗಾಗಿ ಹೋರಾಟ ಮಾಡುತ್ತಿರುವ ಜನನಾಯಕರೇನಿದ್ದಾರೆ ಅವರು ಬಸವ ಹಾದಿಯ ಪ್ರಥಮರು. ಜಾತಿಯ ಹೆಸರಿನಲ್ಲಿ, ಜಾನುವಾರು ರಕ್ಷಣೆಯ ರಾಜಕಾರಣದ ಮೂಲಕ, ಮಠಗಳನ್ನು ಗುತ್ತಿಗೆ ಹಿಡಿಯುವ ನೆಪದಲ್ಲಿ ತಾರತಮ್ಯ ಮಾಡುವ, ಅಸಮಾನತೆಯನ್ನು ಊರ್ಜಿತಗೊಳಿಸುವ ಕೆಲಸದಲ್ಲಿ ನಿರತರಾದವರು ಬಸವ ಹಾದಿಯ ಜನನಾಯಕರಾಗುವುದು ಸಾಧ್ಯವಿಲ್ಲ. ಬಸವ ಹಾದಿ ಸಂಸ್ಕೃತಿಯನ್ನು ದೆಹಲಿಗೆ ಒಯ್ಯುವವರು ಜನನಾಯಕರಾಗಬಲ್ಲರು. ತಾರತಮ್ಯವಾದಿ ದೆಹಲಿ ಸಂಸ್ಕೃತಿಯನ್ನು ಕರ್ನಾಟಕದ ಮೇಲೆ ಹೇರುವವರು ಜನನಾಯಕರಾಗುವುದು ಸಲ್ಲ. ಬಸವ ಮೌಲ್ಯಗಳನ್ನು ಬದುಕುವುದಕ್ಕೆ ಪ್ರತಿಯಾಗಿ ಅವನನ್ನು ಸಾಧನವನ್ನಾಗಿ ಮಾಡಿಕೊಂಡು ರಾಜಕಾರಣ ಮಾಡುವವರು ಬಸವ ಸಂಸ್ಕೃತಿಗೆ ಸಲ್ಲುವುದಿಲ್ಲ.

ಬಸವ ಹಾದಿಯ ಜನನಾಯಕರು ಯಾರು ಎಂಬುದನ್ನು ನಿರ್ಧರಿಸುವ ಕಾಲ ಕರ್ನಾಟಕಕ್ಕೆ ಈಗ ಬಂದಿದೆ. ನಾವು ಸರಿಯಾದ ಆಯ್ಕೆ ಮಾಡಬೇಕಾಗಿದೆ. ಅಟ್ಟೆಯ ಚುಚ್ಚುವ ಉಳಿಯ ಮೊನೆಯಲ್ಲಿ ಪರಮೇಶ್ವರನನ್ನು ಕಂಡವರು ಮಾದಾರ ಧೂಳಯ್ಯ ಅವರು. ಅಂಬಲಿಯನ್ನು ಕೂಡಲಸಂಗಮನಿಗೆ ಉಣಿಸಿದವರು ಮಾದಾರ ಚೆನ್ನಯ್ಯನವರು. ಇವರೆಲ್ಲ ಬಸವ ಮೌಲ್ಯಗಳನ್ನು ಬದುಕಿದವರು. ಈ ಮೌಲ್ಯಗಳನ್ನು ಬದುಕುತ್ತಿರುವವರು ಮಾತ್ರ ಬಸವ ಹಾದಿಯ ಜನನಾಯಕರು. ●

ಕೇರಳದಲ್ಲಿ ಬಯಲಾದ 'ಪರಿಶುದ್ಧ' ಬಿಜೆಪಿಯ ಭ್ರಷ್ಟಾಚಾರ

ಬಿಜೆಪಿ ಕೇರಳ ಘಟಕದಲ್ಲಿನ ಭ್ರಷ್ಟಾಚಾರ ಪ್ರಕರಣಗಳು ಕೇವಲ ಒಂದು ರಾಜ್ಯದ ವಿದ್ಯಮಾನ ಎಂದು ಪರಿಗಣಿಸುವುದು ತಪ್ಪಾಗುತ್ತದೆ. ಕೇಂದ್ರ ಸರಕಾರದ ವಿವಿಧ ಇಲಾಖೆಗಳ ಯೋಜನೆಗಳ ಅನುದಾನದ ಬಿಡುಗಡೆಗೆ ಮತ್ತು ಅನುಮತಿಗೆ 'ಮಧ್ಯವರ್ತಿಗಳು' ಬೇಕಾಗುತ್ತಾರೆ. ಅದಕ್ಕಿಂತ ಹೆಚ್ಚಾಗಿ, ಅಧಿಕಾರದಲ್ಲಿ ಇಲ್ಲದಿದ್ದರೂ ಪ್ರತಿಪಕ್ಷದಲ್ಲಿ ಇದ್ದಾಗಲೇ ಈ ಪರಿಯ ಲಂಚಾವತಾರದಲ್ಲಿ ಮೆರೆದಾಡುತ್ತಾರೆಂದರೆ ಬಿಜೆಪಿ ಆಡಳತ ನಡೆಸುತ್ತಿರುವ ರಾಜ್ಯಗಳು ಮತ್ತು ಕೇಂದ್ರದಲ್ಲಿ ಇನ್ನು ಯಾವ ರೀತಿಯ ಪರಿಸ್ಥಿತಿ ಇದ್ದೀತು ಎನ್ನುವುದನ್ನು ಯಾರಾದರೂ ಊಹಿಸಿಕೊಳ್ಳಬಹುದು. ಮೋದಿ ಸರಕಾರದ ಕಪಾಟಿನಲ್ಲಿನ ಅಸ್ಥಿಪಂಜರಗಳು ಯಾವಾಗ ಹೊರಗೆ ಬರುವುದೋ ಕಾದು ನೋಡಬೇಕು.



* ಪ್ರಕಾಶ್ ಕಾರಟ್

ನರೇಂದ್ರ ಮೋದಿ ಆಡಳಿತದಲ್ಲಿ ಸರಕಾರ ಮತ್ತು ಆಡಳಿತ ಪಕ್ಷ ಕಳಂಕರಹಿತ ದಾಖಲೆ ಹೊಂದಿದೆ ಎಂದು ಬಿಜೆಪಿ ಬೊಗಳೆ ಕೊಚ್ಚಿಕೊಳ್ಳುತ್ತಿದೆ. ಭ್ರಷ್ಟಾಚಾರಪೀಡಿತ ಯುಪಿಎ ಆಡಳಿತಕ್ಕೆ ಹೋಲಿಸಿದರೆ ತಾನು 'ಪರಿಶುದ್ಧ'ವಾಗಿರುವುದಾಗಿ ಬಿಜೆಪಿ ಬಿಂಬಿಸಿಕೊಳ್ಳುತ್ತಿತ್ತು.

ಮಧ್ಯ ಪ್ರದೇಶದಲ್ಲಿ ಬೃಹತ್ ವ್ಯಾಪಮ್ ಹಗರಣದ ಹೊರತಾಗಿಯೂ ಬಿಜೆಪಿ ಈ ರೀತಿ ಬಡಾಯಿ ಕೊಚ್ಚಿಕೊಳ್ಳುತ್ತಿತ್ತು. ವ್ಯಾಪಕ ಭ್ರಷ್ಟಾಚಾರ ಜಾಲದ ವ್ಯಾಪಮ್ ಹಗರಣವು ಯಾವುದೇ ರಾಜ್ಯದಲ್ಲಿನ ಅತ್ಯಂತ ದೊಡ್ಡ ಹಗರಣವಾಗಿ ಸ್ಥಾನ ಪಡೆದುಕೊಳ್ಳುತ್ತದೆ. ಅದೇ ರೀತಿ, ಬಿಜೆಪಿ ಆಡಳಿತವಿರುವ ರಾಜಸ್ಥಾನ ಮತ್ತು ಛತ್ತೀಸ್‌ಗಢದಲ್ಲಿ ಕೂಡ ಅನೇಕ ರೀತಿಯ ಭ್ರಷ್ಟಾಚಾರ ಪ್ರಕರಣಗಳು ನಡೆಯುತ್ತಿವೆ.

ಇದು ಆಡಳಿತಾರೂಢ' ರಾಜ್ಯಗಳಲ್ಲಿನ ಕತೆಯಾಯಿತು. ಇದೀಗ ಆ ಪಕ್ಷ ಆಡಳಿತವಿಲ್ಲದ ರಾಜ್ಯಗಳಲ್ಲಿನ ಭ್ರಷ್ಟಾಚಾರ ಹಗರಣಗಳು ಬಯಲಿಗೆ ಬರುತ್ತಿವೆ. ಕೇರಳದ ಕೆಲವು ಬಿಜೆಪಿ ಮುಖಂಡರು ವ್ಯಾಪಕ ಮತ್ತು ವ್ಯವಸ್ಥಿತ ಭ್ರಷ್ಟಾಚಾರದಲ್ಲಿ ತೊಡಗಿದ ಪ್ರಕರಣಗಳು ಬೆಳಕಿಗೆ ಬಂದಿವೆ. ಇತರ ಅನೇಕ ರಾಜ್ಯಗಳಂತಲ್ಲದೆ ಬಿಜೆಪಿ ಕೇರಳದಲ್ಲಿ ಪ್ರತಿಪಕ್ಷದಲ್ಲಿದೆ ಹಾಗೂ ಒಂದು ಸಣ್ಣ ಶಕ್ತಿಯಾಗಿದೆ. ಆದರೆ, ಕೇಂದ್ರದಲ್ಲಿ ಬಿಜೆಪಿ ಆಡಳಿತ ನಡೆಸುತ್ತಿರುವುದರ ಪ್ರಯೋಜನ ಪಡೆದುಕೊಂಡು ಈ ರಾಜ್ಯದ ಬಿಜೆಪಿ ನಾಯಕರು ಕೇಂದ್ರದ ವ್ಯಾಪ್ತಿಗೆ ಬರುವ ಸಂಸ್ಥೆಗಳ ಅಡಿಯಲ್ಲಿ ನಡೆಯಬೇಕಾದ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ ಲಂಚ ಸಂಗ್ರಹ ಮಾಡುತ್ತಿದ್ದಾರೆ.

ಬಿಜೆಪಿ ರಾಜ್ಯ ಘಟಕ-ಕ್ಕೆ ಅಂಟಿಕೊಂಡಿರುವ ಲಂಚ ಮತ್ತು ಭ್ರಷಾಚಾರ ಪೀಡೆಯು ಆ ಪಕ್ಷದ ನಾಯಕರೊಬ್ಬರ ವಿರುದ್ಧದ ಆರೋಪಗಳ ವಿಚಾರಣೆಗಾಗಿ ಬಿಜೆಪಿ ರಚಿಸಿದ ಸಮಿತಿ ಯೊಂದು ನಡೆಸಿದ ತನಿಖೆಯ ವರದಿ ಸೋರಿಕೆ ಯಾಗಿರುವದರಿಂದ ಬಯಲಿಗೆ ಬಂದಿದೆ. ಬಿಜೆಪಿ ರಾಜ್ಯ ಸಹಕಾರಿ ಘಟಕದ ಸಂಚಾಲಕ ಆರ್.ಎಸ್. ವಿನೋದ್ ಭಾರತೀಯ ವೈದ್ಯಕೀಯ ಮಂಡಳಿಯಿಂದ ಮಾನ್ಯತೆ ದೊರಕಿಸಿಕೊಡಲು ಒಂದು ಖಾಸಗಿ ವೈದ್ಯಕೀಯ ಕಾಲೇಜ್‌ನ ಮಾಲಿಕನಿಂದ 5.6 ಕೋಟಿ ರೂಪಾಯಿ ಲಂಚ ಪಡೆದಿರುವುದನ್ನು ತನಿಖೆ ವರದಿ ದೃಢಪಡಿಸಿದೆ. ಹವಾಲಾ ವ್ಯವಹಾರದ ಮೂಲಕ ಈ ಹಣವನ್ನು ದೆಹಲಿಗೆ ವರ್ಗಾಯಿಸಲಾಗಿದೆ ಎಂದು ವರದಿಯಾಗಿದೆ. ಇನ್ನೊಬ್ಬ ಮುಖಂಡ ಎಂ.ಟಿ. ರಮೇಶ್ ಇನ್ನೊಂದು ವೈದ್ಯ ಕಾಲೇಜಿನ ಮಾಲಿಕರಿಂದ ಅಷ್ಟೇ ಮೊತ್ತದ ಲಂಚ ಪಡೆದಿದ್ದಾರೆಂಬ ಆರೋಪವನ್ನೂ ಬಿಜೆಪಿಯ ತನಿಖಾ ವರದಿ ಉಲ್ಲೇಖಿಸಿದೆ.



ಕೃಪೆ: ಜಾಸೂಸ್ ಕುಟ್ಟಿ ರಿಟ್ವೀಟ್ ಮೂಲಟ್ವೀಟ್::ದಿ ಲಾಸ್ಟ್ ಕೇವ್‌ಮನ್,ಜುಲೈ 24 ಕೇರಳ ವಿಧಾನಸಭೆಯಲ್ಲಿ ಕೇವಲ ಒಬ್ಬ ಶಾಸಕ ಇರುವ ಬಿಜೆಪಿ ಇಂದಿನ 'ಮಲಯಾಳ ಮನೋರಮ'ದಲ್ಲಿ ಒಂದಿಡೀ ಪುಟವನ್ನು ತನ್ನ ಹಗರಣಗಳಿಂದ ತುಂಬಿದೆ.
ಬ್ರೈಬ್ ಜನತಾ ಪಾರ್ಟಿ

ತನಿಖಾ ವರದಿ ಮಾಧ್ಯಮಕ್ಕೆ ಸೋರಿಕೆಯಾಗುತ್ತಲೇ ಬಿಜೆಪಿಯೊಳಗೆ ಅಲ್ಲೋಲಕಲ್ಲೋಲ ಉಂಟಾಗಿದ್ದು ವಿವಿಧ ಬಣಗಳು ಪರಸ್ಪರರ ವಿರುದ್ಧ ಭ್ರಷಾಚಾರದ ಆರೋಪ-ಪ್ರತ್ಯಾರೋಪ ಮಾಡುತ್ತಿವೆ. ವಿನೋದ್‌ರನ್ನು ಪಕ್ಷದಿಂದ ಉಚ್ಚಾಟಿಸುವ ಬಲವಂತಕ್ಕೆ ಬಿಜೆಪಿ ಒಳಗಾಗಿದೆ. ಆದರೆ ಲಂಚಾವತಾರ ಕುರಿತ ಆರೋಪಗಳು ಇನ್ನೂ ನಿಂತಿಲ್ಲ. ಕೇರಳದ ವಿಚಕ್ಷಣ ದಳ (ವಿಜಿಲೆನ್ಸ್) ವೈದ್ಯಕೀಯ ಕಾಲೇಜ್ ಲಂಚ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿದೆ.

ತ್ರಿಶೂರು ಜಿಲ್ಲೆಯ ಕೆಲವು ಬಿಜೆಪಿ ಮುಖಂಡರು ಖೋಟಾ ನೋಟು ಮುದ್ರಣ ಪ್ರಕರಣದಲ್ಲಿ ಬಂಧಿತರಾಗಿದ್ದಾರೆ ಎಂಬ ಸುದ್ದಿಯ ಹಿಂದೆಯೇ ಮೆಡಿಕಲ್ ಕಾಲೇಜ್ ಲಂಚ ವಿಚಾರ ಹೊರಬಂದಿದೆ. ಬಹುಶಃ ಮೋದಿ ಸರಕಾರದ ನೋಟು ಅಮಾನ್ಯೀಕರಣ ಕ್ರಮ ಇಂಥ ಸಾಹಸಕ್ಕೆ ಕೈಹಾಕುವಂತೆ ಬಿಜೆಪಿ ನಾಯಕರನ್ನು ಪ್ರೇರೇಪಿಸಿರಬಹುದು. ಬಿಜೆಪಿಯ ಗಾಯದ ಮೇಲೆ ಬರೆ ಎಳೆದಂತೆ, ಬ್ಯಾಂಕ್‌ನಲ್ಲಿ ಕೆಲಸ ಕೊಡಿಸುವುದಾಗಿ ಅಭ್ಯರ್ಥಿಯೊಬ್ಬರಿಂದ 10 ಲಕ್ಷ ರೂಪಾಯಿ ಲಂಚ ಪಡೆದ ದೂರಿನ ಮೇಲೆ ಮಲಪ್ಪುರಂ ಜಿಲ್ಲೆಯ ಒಬ್ಬ ಬಿಜೆಪಿ ನಾಯಕನನ್ನು ಬಂಧಿಸಲಾಗಿದೆ.

ಬಿಜೆಪಿ ನಾಯಕರಿಂದ ಪಕ್ಷ ನಿಧಿಗಳ ದುರ್ಬಳಕೆ ಮತ್ತು ಸುಲಿಗೆಯ ಪ್ರಕರಣಗಳು ಹೆಚ್ಚೆಚ್ಚಾಗಿ ವರದಿಯಾಗುತ್ತಿವೆ. ಹಿಂದೂತ್ವವಾದಿ ಪಕ್ಷದಲ್ಲಿನ ನೈತಿಕ ಅವನತಿ ಆಳವಾಗುತ್ತಿರುವುದನ್ನು ಈ ಪ್ರಕರಣಗಳು ಸೂಚಿಸುತ್ತವೆ. ಕೇಸರಿ ಬಣ್ಣದ ಮರೆಯಲ್ಲಿ, ಲಂಚಗುಳಿತನ ಮತ್ತು ಹಣ ಮಾಡಿಕೊಳ್ಳುವ ಪ್ರತಿಯೊಂದು ಅವಕಾಶವನ್ನು ಬಳಸಿಕೊಳ್ಳುವ ನಾಯಕರ ಪಡೆಯೇ ಬಿಜೆಪಿಯಲ್ಲಿದೆ ಎನ್ನುವುದು ಕೇರಳದ ಜನರಿಗೆ ಸ್ಪಷ್ಟವಾಗಿ ಅರ್ಥವಾಗತೊಡಗಿದೆ.

ಕೇಂದ್ರದಲ್ಲಿ ಬಿಜೆಪಿ ಸರಕಾರ ಆಡಳಿತಕ್ಕೆ ಬಂದಾಗಲೆಲ್ಲಾ ಆ ಸಂದರ್ಭವನ್ನು ಬಳಸಿಕೊಂಡು ದುಡ್ಡು ಮಾಡಿಕೊಳ್ಳುವ ಪರಿಪಾಠಕ್ಕೆ ಕೇರಳದ ಬಿಜೆಪಿ ಮುಖಂಡರು ಕುಖ್ಯಾತರು. ವಾಜಪೇಯಿ ಸರಕಾರದ ಅವಧಿಯಲ್ಲಿ, ಪೆಟ್ರೋಲ್ ಪಂಪ್‌ಗಳ ಮಂಜೂರಾತಿಗಾಗಿ ಕೇರಳ ಘಟಕ 18 ಕೋಟಿ ರೂಪಾಯಿ ಲಂಚ ಸಂಗ್ರಹಿಸಿತ್ತು ಎನ್ನುವುದನ್ನು ಪಕ್ಷದ ಆಂತರಿಕ ವಿಚಾರಣೆಯಿಂದ ಸಾಬೀತಾಗಿತ್ತು.

ಬಿಜೆಪಿ ಕೇರಳ ಘಟಕದಲ್ಲಿನ ಭ್ರಷ್ಟಾಚಾರ ಪ್ರಕರಣಗಳು ಕೇವಲ ಒಂದು ರಾಜ್ಯದ ವಿದ್ಯಮಾನ ಎಂದು ಪರಿಗಣಿಸುವುದು ತಪ್ಪಾಗುತ್ತದೆ. ಕೇಂದ್ರ ಸರಕಾರದ ವಿವಿಧ ಇಲಾಖೆಗಳ ಯೋಜನೆಗಳ ಅನುದಾನದ ಬಿಡುಗಡೆಗೆ ಮತ್ತು ಅನುಮತಿಗೆ 'ಮಧ್ಯವರ್ತಿಗಳು' ಬೇಕಾಗುತ್ತಾರೆ. ಅದಕ್ಕಿಂತ ಹೆಚ್ಚಾಗಿ, ಅಧಿಕಾರದಲಿ ಇಲ್ಲದಿದ್ದರೂ ಪ್ರತಿಪಕ್ಷದಲ್ಲಿ ಇದ್ದಾಗಲೇ ಈ ಪರಿಯ ಲಂಚಾವತಾರದಲ್ಲಿ ಮೆರೆದಾಡುತ್ತಾರೆಂದರೆ ಬಿಜೆಪಿ ಆಡಳಿತ ನಡೆಸುತ್ತಿರುವ ರಾಜ್ಯಗಳು ಮತ್ತು ಕೇಂದ್ರದಲ್ಲಿ ಇನ್ನು ಯಾವ ರೀತಿಯ ಪರಿಸ್ಥಿತಿ ಇದ್ದೀತು ಎನ್ನುವುದನ್ನು ಯಾರಾದರೂ ಊಹಿಸಿಕೊಳ್ಳಬಹುದು. ಮೋದಿ ಸರಕಾರದ ಕಪಾಟಿನಲ್ಲಿನ ಅಸ್ಥಿಪಂಜರಗಳು ಯಾವಾಗ ಹೊರಗೆ ಬರುವುದೋ ಕಾದು ನೋಡಬೇಕು.

ಅನು: ವಿಶ್ವ

ಮಾಜಿಯಾಗಿ ಹಾಲಿಯಾದ ಬಿಹಾರ ಮುಖ್ಯಮಂತ್ರಿ-ಎತ್ತಣ ಆತ್ಮಸಾಕ್ಷಿ, ಎತ್ತಣ ನೈತಿಕತೆ?

ಕೇರಳದಲ್ಲಿ ಕೇವಲ ಒಬ್ಬ ಶಾಸಕನನ್ನು ಹೊಂದಿರುವ ಬಿಜೆಪಿಯ ಹಲವು ಭ್ರಷ್ಟಾಚಾರ ಹಗರಣಗಳು ಬಯಲಿಗೆ ಬಂದಿರುವಾಗಲೇ ಆ ಪಕ್ಷದ ಸರ್ವೋಚ್ಚ ಮುಖಂಡರು "ಭ್ರಷ್ಟಾಚಾರದ ವಿರುದ್ಧದ ಹೆಸರಿನಲ್ಲಿ ಹುದ್ದೆ ತ್ಯಜಿಸಿರುವ ನಿತೀಶ್ ಕುಮಾರ್‌ಗೆ ಭಾರೀ ಅಭಿನಂದನೆಗಳು" ಎಂದು ಟ್ವೀಟ್ ಮಾಡಿರುವುದು ಅವರು ತರುತ್ತಿರುವ 'ಅಚ್ಛೇ ದಿನ್'ಗಳ ವಿಲಕ್ಷಣತೆಗಳಲ್ಲಿ ಒಂದು. ಇದಾದ ಕೆಲವೇ ಗಂಟೆಗಳಲ್ಲಿ ಮುಖ್ಯಮಂತ್ರಿ ಹುದ್ದೆ 'ತ್ಯಜಿಸಿದ' ಬಿಹಾರದ ಮುಖ್ಯಮಂತ್ರಿಗಳು ಕೇರಳದಲ್ಲಿ ತನ್ನ 'ಪರಿಶುದ್ಧತೆ'ಯನ್ನು ಬಯಲು ಮಾಡಿಕೊಂಡ ಪಕ್ಷದ ಬೆಂಬಲದಿಂದಲೇ, ಆ ಪಕ್ಷದ ಮುಖಂಡನಿಗೆ ಉಪಮುಖ್ಯಮಂತ್ರಿ ಪೀಠ ಒದಗಿಸಿ ತಾನು ಮತ್ತೆ ಮುಖ್ಯಮಂತ್ರಿ ಪೀಠವನ್ನು ಅಲಂಕರಿಸಿದ್ದಾರೆ.

ಈ ಸಮಯಸಾಧಕತೆ 20 ತಿಂಗಳ ಹಿಂದೆ ಬಿಹಾರದ ಜನತೆ ಕೇಂದ್ರದ ಬಿಜೆಪಿ ನೇತೃತ್ವದ ಸರಕಾರದ ಜನ-ವಿರೋಧಿ ಆರ್ಥಿಕ ನೀತಿಗಳು ಮತ್ತು ಕೋಮುವಾದದ ವಿರುದ್ಧ ಒಂದು ಪರ್ಯಾಯಕ್ಕಾಗಿ ನೀಡಿದ ಜನಾದೇಶಕ್ಕೆ ಬಗೆದಿರುವ ವಿಶ್ವಾಸಘಾತ ಎಂದು ಸಿಪಿಐ(ಎಂ) ಬಿಹಾರ ರಾಜ್ಯ ಕಾರ್ಯದರ್ಶಿ ಅವಧೇಶ್ ಕುಮಾರ್ ಹೇಳಿದ್ದಾರೆ.

ಜನತೆ ಒಂದು ಜನಪರ ಪರ್ಯಾಯಕ್ಕಾಗಿ ಮತ ನೀಡಿದ್ದರೂ, ನಿತಿಶ್ ಕುಮಾರ್‌ರವರ ನೇತೃತ್ವದ ಸರಕಾರ ಒಂದೆಡೆಯಲ್ಲಿ ಜನ-ವಿರೋಧಿ ಆರ್ಥಿಕ ಧೋರಣೆಗಳನ್ನೇ ಅನುಸರಿಸುತ್ತಿದ್ದರೆ, ಇನ್ನೊಂದೆಡೆಯಲ್ಲಿ ನೋಟು ರದ್ಧತಿ, ಜಿಎಸ್‌ಟಿ ವಿಷಯದಲ್ಲಿ ಅವರು ಕೇಂದ್ರ ಸರಕಾರದ ಬೆಂಬಲಕ್ಕೆ ನಿಂತವರು. ರಾಷ್ಟ್ರಪತಿ ಸ್ಥಾನಕ್ಕೆ ಪ್ರತಿಪಕ್ಷಗಳು ಒಟ್ಟಾಗಿ ಅಭ್ಯರ್ಥಿಯನ್ನು ನಿಲ್ಲಿಸಬೇಕೆಂದು ಸೂಚಿಸಿದ್ದರೂ, ಪ್ರತಿಪಕ್ಷಗಳು ಒಂದಾಗಿ ನಿಲ್ಲಿಸಿದ ಅಭ್ಯರ್ಥಿಯನ್ನು ಬೆಂಬಲಿಸದೆ ಬಿಜೆಪಿ ಅಭ್ಯರ್ಥಿಯನ್ನು ಬೆಂಬಲಿಸಿದರು. ಒಂದೊಮ್ಮೆ 'ಆರೆಸ್ಸೆಸ್-ಮುಕ್ತ ಭಾರತ'ದ ಘೋಷಣೆ ಕೊಟ್ಟ ಈತನೇ ಈಗ ಆರೆಸ್ಸೆಸ್ ಪರಿವಾರದ ಮಡಿಲಲ್ಲಿ ಹೋಗಿ ಕುಳಿತಿದ್ದಾರೆ, ಬಿಹಾರದ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಜನತೆ ಎಂದೂ ಅವರ ಈ ವಿಶ್ವಾಸಘಾತವನ್ನು ಕ್ಷಮಿಸುವುದಿಲ್ಲ ಎಂದು ಸಿಪಿಐ(ಎಂ)ನ ಬಿಹಾರ ರಾಜ್ಯ ಕಾರ್ಯದರ್ಶಿಮಂಡಳಿ ಹೇಳಿದೆ. ಮಹಾ ಸಂಯುಕ್ತ ರಂಗದ ಇತರ ಪಕ್ಷಗಳಾದ ಆರ್‌ಜೆಡಿ ಮತ್ತು ಕಾಂಗ್ರೆಸ್ ಕೂಡ ರಾಜಕೀಯ ಅಸ್ಥಿರತೆಯನ್ನು ನಿವಾರಿಸಿ ಜನಾದೇಶದ ಪಾಲನೆಗೆ ಮುಂದಾಗಲಿಲ್ಲ ಎಂದೂ ಅವರು ಟೀಕಿಸಿದ್ದಾರೆ.



@ ಸೀತಾರಾಮ್ ಯೆಚುರಿ

ಯೋಚಿಸಬೇಕಾದ ಸಂಗತಿ. ಭಾರತದ ಎಲ್ಲೆಡೆಗಳಲ್ಲಿ ದಲಿತರು ಮತ್ತು ಅಲ್ಪಸಂಖ್ಯಾತರ ಮೇಲೆ ಅತ್ಯಾಚಾರಗಳು ನಡೆಯುತ್ತಿರುವಾಗ ಬಿಹಾರದ ಮುಖ್ಯಮಂತ್ರಿಗಳ ರಾಜೀನಾಮೆ ಯಾರಿಗೆ ನೆರವಾಗುತ್ತದೆ?

* ನರೇಂದ್ರ ಮೋದಿ@ ನರೇಂದ್ರ ಮೋದಿ
"ದೇಶದ, ಅದರಲ್ಲೂ ಬಿಹಾರದ ಉಜ್ವಲ ಭವಿಷ್ಯಕ್ಕಾಗಿ ರಾಜಕೀಯ ಮತಬೇಧಗಳಿಂದ ಮೇಲಕ್ಕೆದ್ದು ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕೆ ಒಂದಾಗುವುದು ಈಗ ದೇಶದ ಮತ್ತು ಸಮಯದ ಕೂಗು

ಓ, ನಿಜವಾಗಿಯೂ? ವ್ಯಾಪಮ್, ಸಹಾರ-ಬಿರ್ಲಾ ಡೈರಿ, ಜಿಎಸ್‌ಪಿಸಿ, ಲಲಿತ್ ಮೋದಿ, ಅಕ್ಕಿ ಹಗರಣ, ಎನ್‌ಪಿಎ ಮನ್ನಾ, ಲೋಕಪಾಲಕ್ಕೆ ನಕಾರ, ಇವೆಲ್ಲ ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕೆ ತಮ್ಮ ಬದ್ಧತೆ ತಾನೇ?

*

ಬಿಜೆಪಿಯ ಅದ್ದೂರಿಯ ಚುನಾವಣಾ ರ್‍ಯಾಲಿಗಳಿಗೆ ಹಣ ಎಲ್ಲಿಂದ ಬಂದಿದೆ? ಅದಕ್ಕಾಗಿಯೇ ಏನು ರಾಜಕೀಯ ಪಕ್ಷಗಳಿಗೆ ಅಪಾರದರ್ಶಕ ಮತ್ತು ವಿದೇಶಿ ಕಾರ್ಪೊರೇಟ್ ನಿಧಿ ನೀಡಿಕೆಗೆ ಒಂದು ಕಾನೂನು ತಂದದ್ದು?

*

ಈಗ ಬಿಜೆಪಿಯನ್ನು ಬೆಂಬಲಿಸುವವರು ಅಲ್ಪಸಂಖ್ಯಾತರನ್ನು ಹೊಡೆದು ಸಾಯಿಸುವುದನ್ನು, ದಲಿತರ ಮೇಲೆ ಅತ್ಯಾಚಾರಗಳನ್ನು, ರೈತರನ್ನು ಆತ್ಮಹತ್ಯೆಗಳತ್ತ ತಳ್ಳುವುದನ್ನು, ಮತ್ತು ಯುವಜನರನ್ನು ಉದ್ಯೋಗಹೀನರನ್ನಾಗಿ ಮಾಡುವುದನ್ನು ಬೆಂಬಲಿಸುವವರು.

* ಸಮರ್@ ಸಮರ್_ಅನಾರ್ಯ
ಯೋಗಿ ಆದಿತ್ಯನಾಥರ ಮೇಲೆ ಈಗ ಐಪಿಸಿ ಸೆಕ್ಷನ್ 302, 307, 153ಎ, 295,506,147, 148, 297,336,149,504 ಮತ್ತು 427 ರ ಅಡಿಯಲ್ಲಿ ಎಫ್‌ಐಆರ್‌ಗಳಿವೆ. ಥ್ಯಾಂಕ್ಸ್.


ಮೋದಿ ಮತ್ತು ಅವರ ಅಡಿಯಲ್ಲಿ ಕೆಲಸ ಮಾಡ ಬಯಸುವವರಿಗೆ ಎಫ್‌ಐಆರ್ ಮತ್ತು ಅಪರಾಧಗಳ ಬಗ್ಗೆ ನಿಜವಾಗಿಯೂ ಆತಂಕವಿದ್ದರೆ...

*ರಾನಾ ಅಯ್ಯೂಬ್@ ರಾನಾ ಅಯ್ಯೂಬ್
ನಿತಿಶ್ ಬಾಬು, ನಿಮ್ಮ ಆತ್ಮಸಾಕ್ಷಿಯ ಮಾಹಿತಿಗೆ, ಸುಪ್ರಿಂ ಕೋರ್ಟ್ ಅಮಿತ್ ಭಾಯಿಯನ್ನು ಬಲಾತ್ಕಾರದ ವಸೂಲಿ, ಕೊಲೆಗಾಗಿ ಮತ್ತು ಒಂದು ಬ್ಯಾಂಕ್ ಹಗರಣಕ್ಕಾಗಿ ಸರಳುಗಳ ಹಿಂದೆ ಕಳಿಸಿತ್ತು.

ಎತ್ತಣ ಆತ್ಮಸಾಕ್ಷಿ, ಎತ್ತಣ ನೈತಿಕತೆ?

*2015ರ ಬಿಹಾರ ಬಿಹಾರ ವಿಧಾನಸಭಾ ಚುನಾವಣೆಯ ಜನಾದೇಶಕ್ಕೆ ವಿಶ್ವಾಸಘಾತ-ಸಿಪಿಐ(ಎಂ) ಬಿಹಾರ ರಾಜ್ಯ ಸಮಿತಿ

ಪತ್ರಿ ಕೆಲವು ವರ್ಷಕ್ಕೊಮ್ಮೆ ಶ್ರೀ ನಿತಿಶ್ ಕುಮಾರ್ ಒಂದು ಭಿನ್ನ ಮೈತ್ರಿಕೂಟದಿಂದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಾರೆ. ನಿಜವಗಿಯೂ ಒಂದು ದಾಖಲೆ. ನೇರವಾಗಿ ರಾಜಕೀಯ ಸಮಯ ಸಾಧಕತನ.



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್



ಮೂಡಬಿದರೆಯಲ್ಲಿ ಕರ್ನಾಟಕ ಬೀಡಿ ಕಾರ್ಮಿಕರ 9ನೇ ರಾಜ್ಯ ಸಮ್ಮೇಳನ

ಏಕರೂಪದ ಬೀಡಿ ಮಜೂರಿ ಜಾರಿ ಮಾಡಿ : ದೇಬಾಶಿಸ್ ರಾಯ್

ವಾಸುದೇವ ಉಚ್ಚಿಲ

ದೇಶದ ಹಲವು ರಾಜ್ಯಗಳಲ್ಲಿ ಬೀಡಿ ಕಟ್ಟುವ ಉದ್ದಿಮೆಯನ್ನು ಮನೆ ಮನೆಯಲ್ಲಿ ಕಾರ್ಮಿಕರು ಬೀಡಿ ಕಟ್ಟುವ ಮೂಲಕ ಮಾಡುತ್ತಿದ್ದರೂ, ಬೇರೆ ಬೇರೆ ರಾಜ್ಯಗಳಲ್ಲಿ ಕಾರ್ಮಿಕರಿಗೆ ಬೇರೆ ಬೇರೆ ಪ್ರಮಾಣದ ಕೂಲಿ ಇದೆ. ಬೀಡಿ ಕಾರ್ಮಿಕ ಸಂಘಟನೆಗಳು ಇದ್ದಲ್ಲಿ ಕೂಲಿ ಸ್ವಲ್ಪ ಹೆಚ್ಚಿರುತ್ತದೆ. ಎಲ್ಲಿ ಕಾರ್ಮಿಕರ ಸಂಘಟನೆಗಳು ಇಲ್ಲದೆ ಕೂಲಿ ಕಡಿಮೆ ಆಗಿರುತ್ತದೋ ಅಲ್ಲಿಗೆ ಮಾಲಕರು ವಲಸೆ ಹೋಗುತ್ತಾರೆ. ಕೇರಳದಿಂದ ಕರ್ನಾಟಕಕ್ಕೆ ಒಂದು ಕಾಲದಲ್ಲಿ ಬೀಡಿ ಮಾಲಿಕರು ವಲಸೆ ಬಂದಿದ್ದರು. ಬೇರೆ ರಾಜ್ಯ ಜಿಲ್ಲೆಗಳಲ್ಲೂ ಇದು ನಡೆಯುತ್ತಿದೆ. ಕಾರ್ಮಿಕರಿಗೆ ಆಗುವ ಅನ್ಯಾಯವನ್ನು ತಪ್ಪಿಸಲು, ಏಕರೂಪದ ಬೀಡಿ ಮಜೂರಿ ಎಲ್ಲಾ ರಾಜ್ಯಗಳಲ್ಲೂ ದೊರೆಯುಬೇಕು ಎಂಬುದಾಗಿ ಸಿಐಟಿಯು ಸಂಯೋಜಿತ ಅಖಿಲ ಭಾರತ ಬೀಡಿ ಕಾರ್ಮಿಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕಾ|ದೇಬಾಶಿಸ್ ರಾಯ್ ಆಗ್ರಹಿಸಿದರು.

ಅವರು ಜುಲಾಯಿ 24 ರಂದು ಮೂಡಬಿದರೆ ಸಮಾಜ ಮಂದಿರದ ಕಾ|ಪ್ರಸನ್ನ ಕುಮಾರ್ ವೇದಿಕೆಯಲ್ಲಿ ಆರಂಭವಾದ ಎರಡು ದಿನಗಳ ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ 9ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.


ದೇಶದ ಎರಡನೇ ಅತೀ ದೊಡ್ಡ ಕಾರ್ಮಿಕ ಸಂಘಟನೆ ಬೀಡಿ ಕಾರ್ಮಿಕರ ಸಂಘಟನೆಯಾಗಿದೆ. ಬೀಡಿ ನಿರ್ಮಾಣದಂಥಹ ಉದ್ದಿಮೆಯುಲ್ಲಿರುವ ಕಾರ್ಮಿಕರು ಅಸಂಘಟಿತರಾಗಿದ್ದಾರೆ ಮತ್ತು ಅತ್ಯಂತ ಅತಂತ್ರ ಸ್ಥಿತಿಯಲ್ಲಿದ್ದಾರೆ. ಸರಕಾರದ ಕೈಗಾರಿಕಾ ಹಾಗೂ ಕಾರ್ಮಿಕ ನೀತಿಗಳು ಬಂಡವಳಿಗರ ಪರವಾಗಿದೆ. ಇದರಿಂದ ಅಸಂಘಟಿತ ಕಾರ್ಮಿಕರ ಮೇಲಿನ ಹೊರೆ ಹೆಚ್ಚಾಗಿದೆ.

ಕೇಂದ್ರದಲ್ಲಿ ಸದ್ಯ ಆರೆಸ್ಸೆಸ್ ಬಿಜೆಪಿ ಪಾಲ್ಗೊಳ್ಳುತ್ತಿರುವ ಸರಕಾರವಿದ್ದು ಕಾರ್ಮಿಕರ ಪ್ರಶ್ನೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಿಲ್ಲ. ಜನತೆಯ ಪ್ರಶ್ನೆಗಳನ್ನು ಬಿಟ್ಟು ಗೋವು, ಆಹಾರ, ರಾಷ್ಟ್ರೀಯತೆ ಇತ್ಯಾದಿ ವಿಷಯುಗಳನ್ನೇ ಮುಂದಿಟ್ಟು ಒಂದು ಮತೀಯರನ್ನು ಇನ್ನೊಂದು ಮತೀಯರ ವಿರುದ್ಧ ಪ್ರಚೋದಿಸುತ್ತಿದ್ದಾರೆ.

ಬಿಜೆಪಿ ಕೇಂದ್ರ ಸರಕಾರದ ಆರ್ಥಿಕ ಚಟುವಟಿಕೆಗಳಲ್ಲಿ ಸ್ವಲ್ಪ ಹಿಂದೆ ನೋಟು ಅಮಾನ್ಯೀಕರಣ ಮಾಡಿದರು. ಇದರಿಂದ ತೊಂದರೆಯಾದುದು ಬಡವರಿಗೆ. ಭರವಸೆ ನೀಡಿದಂತೆ ಕಪ್ಪು ಹಣವು ಹೊರಬರಲಿಲ್ಲ, ಭ್ರಷ್ಟಚಾರವೂ ನಿಲ್ಲಲಿಲ್ಲ, ಭಯೋತ್ಪಾದನೆಯನ್ನೂ ನಿಲ್ಲಿಸಲಾಗಲಿಲ್ಲ. ಅವರು ಹೇಳಿದ ಅಚ್ಛೇ ದಿನಗಳು ಬಡವರಿಗೆ ಬರಲೇ ಇಲ್ಲ. ಹಣಕಾಸು ವ್ಯವಹಾರವನ್ನು ನಗದು ರಹಿತ ಬ್ಯಾಂಕಿಂಗ್‌ಗೆ ಪರಿವರ್ತಿಸಲು ಮುಂದಾದರು. ಇದರಿಂದ ಬಡ ಬೀಡಿ ಕಾರ್ಮಿಕರಿಗೆ ತಮ್ಮ ಅತ್ಯಲ್ಪ ಮಜೂರಿಯನ್ನು ನಗದಾಗಿ ಪಡೆಯುವುದೂ ಕಷ್ಟವಾಗಿದೆ. ಈಗಾಗಲೇ ಬೀಡಿ ಉದ್ದಿಮೆಯಿಂದ ಹೇರಳ ಲಾಭ ಗಳಿಸಿರುವ ಮಾಲಕರು ಉದ್ದಿಮೆಯನ್ನೇ ನಿಲ್ಲಿಸಲು ಮುಂದಾಗಿದ್ದಾರೆ. ಇತ್ತೀಚೆಗೆ ಜಿಎಸ್‌ಟಿ ಎಂಬ ನವೀನ ಮಾದರಿ ತೆರಿಗೆ ಪದ್ಧತಿಯನ್ನು ಕೇಂದ್ರ ಸರಕಾರ ಜಾರಿಗೊಳಿಸಿದೆ. ಬೀಡಿ ಉದ್ದಿಮೆಯುಲ್ಲಿ ಹಲವು ಕಚ್ಚಾ ವಸ್ತುಗಳಿಗೆ ತೆರಿಗೆಯನ್ನು ತೀವ್ರ ಪ್ರಮಾಣದಲ್ಲಿ ಏರಿಸಲಾಗಿದೆ. ಇದರಿಂದ ಬೀಡಿ ವ್ಯಾಪಾರ ನಿಂತು ಹೋಗಿದೆ. ಬೀಡಿ ಕಟ್ಟುವ ಚಟುವಟಿಕೆಯನ್ನು ಎಲ್ಲಾ ದಿನಗಳಲ್ಲಿ ಮಾಲಕರು ಮಾಡಿಸುತ್ತಿಲ್ಲ ಮತ್ತು ಇದರಿಂದ ತೊಂದರೆಯಾಗಿರುವುದು ಅಸಂಘಟಿತ ಬೀಡಿ ಕಾರ್ಮಿಕರಿಗೆ.



ಅಧ್ಯಕ್ಷರು : ಜೆ.ಬಾಲಕೃಷ್ಣ ಶೆಟ್ಟಿ



ಪ್ರಧಾನ ಕಾರ್ಯದರ್ಶಿ: ಸೈಯದ್ ಮುಜೀಬ್



ಖಜಾಂಚಿ : ಪದ್ಮವತಿ ಎಸ್.ಶೆಟ್ಟಿ

ಬೀಡಿ ಕಾರ್ಮಿಕರು ಹೋರಾಟದಿಂದ ಸವಲತ್ತುಗಳನ್ನು ಪಡೆಯುವ ಕಾನೂನು ಬರುವಂತೆ ಮಾಡಿದ್ದರೂ, ಆ ಸವಲತ್ತುಗಳನ್ನು ಪಡೆದುಕೊಳ್ಳುವುದು ಅಷ್ಟು ಸುಲಭವಲ್ಲ. ಬೀಡಿ ಕಾರ್ಮಿಕರಿಗೆ ಕನಿಷ್ಟ ರೂ.1000/ ಪಿಂಚಣಿ ಸಿಗಬೇಕು. ಕೆಲವು ಮಾಲಕರು ಕಾರ್ಮಿಕರ ಪ್ರಾವಿಡೆಂಟ್ ಫಂಡ್ ವಂಚಿಸಿ, ಬೀಡಿ ಕಾರ್ಮಿಕರ ಕಲ್ಯಾಣ ನಿಧಿ ಕುಂಠಿತವಾಗುವಂತೆ ಮಾಡಿದ್ದಾರೆ. ಸವಲತ್ತುಗಳು ಕಾನೂನು ಪುಸ್ತಕದಲ್ಲಿ ಮಾತ್ರ. ಅದರ ಅನುಷ್ಠಾನ ಸರಿಯಾಗಿ ಆಗುತ್ತಿಲ್ಲ. ಬೀಡಿ ಕಾರ್ಮಿಕರ 15 ಬೇಡಿಕೆಗಳನ್ನು ಮುಂದಿಟ್ಟು ಬರುವ ಆಗಸ್ಟ್ 15ರ ವರೆಗೆ ದೇಶದಾದ್ಯಂತ ಸಹಿ ಸಂಗ್ರಹ ನಡೆಯಲಿದ್ದು, ಬಳಿಕ ಪ್ರಧಾನಿಯವರಿಗೆ ನಿಯೋಗ ಹೋಗಿ ಮನವಿ ಸಲ್ಲಿಸಲಿದ್ದೇವೆ ಎಂಬುದಾಗಿ ದೇಬಾಶಿಸ್ ರಾಯ್ ತಿಳಿಸಿದರು.

ಕಾರ್ಮಿಕರು ಕೆಂಬಾವುಟ ಹಿಡಿದು ವರ್ಗವಾಗಿ ಹೋರಾಟಕ್ಕೆ ತೊಡಗಿರುವಾಗ ಮತ ಜಾತಿಗಳ ಅಸ್ಮಿತೆಯ ನೆಲೆಯಲ್ಲಿ ಅವರನ್ನು ವಿಂಗಡಿಸುವ ಪ್ರಯತ್ನಗಳು ನಡೆಯುತ್ತಿವೆ. ಕಾರ್ಮಿಕರಿಗೆ ಮೆರವಣಿಗೆಗೂ ಕೆಲವೆಡೆ ಅವಕಾಶವಿಲ್ಲ. ಪಶ್ಚಿಮ ಬಂಗಾಳದಲ್ಲೂ ಆಳುವ ತೃಣಮೂಲ ಕಾಂಗ್ರೆಸ್ ಬಿಜೆಪಿಯೊಡನೆ ಒಳ ಒಪ್ಪಂದ ಮಾಡಿಕೊಂಡು ಎಡಪಕ್ಷಗಳ ಮೇಲೆ ದಮನ ನಡೆಸುತ್ತಿದೆ, ಕಾರ್ಮಿಕರ ಮೆರವಣಿಗೆ ಮೇಲೂ ದಾಳಿ ನಡೆಸುತ್ತಿದೆ. ಕಳೆದ 6 ವರ್ಷಗಳಿಂದ ನಡೆದಿರುವ ದಮನಕಾರಿ ಆಡಳಿತದಲ್ಲಿ 3500 ಬೀಡಿ ಕಾರ್ಮಿಕರನ್ನು ನಿರ್ಬಂಧದಲ್ಲಿ ಇರಿಸಲಾಗಿತ್ತು. 2000 ಜನರ ಮೇಲೆ ಬರ್ಬರ ದಾಳಿ ನಡೆದಿತ್ತು ಎಂದು ವಿವರಿಸಿದ ರಾಯ್ ಅವರು ಬೀಡಿ ಕಾರ್ಮಿಕ ವರ್ಗ ಈ ಎಲ್ಲಾ ದಮನವನ್ನು ಎದುರಿಸಿ ತಮ್ಮ ಹಕ್ಕುಗಳಿಗಾಗಿ ಹೋರಾಡಲು ಕರೆ ನೀಡಿದರು.

ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ಸಿಐಟಿಯು ರಾಜ್ಯ ಅಧ್ಯಕ್ಷೆ ಎಸ್. ವರಲಕ್ಷ್ಮಿ ಮಾತನಾಡಿ, ಬೀಡಿ ಕಾರ್ಮಿಕರು ತಮ್ಮ ಉದ್ಯೋಗವನ್ನು ಕಳೆದುಕೊಳ್ಳುವ ಹಂತದಲ್ಲಿದ್ದು, ಅವರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕೆಂದು ಆಗ್ರಹಿಸಿದರು. ತಮಿಳುನಾಡಿನಲ್ಲಿ ಇಂಥ ಸಮಸ್ಯೆ ಎದುರಾದಾಗ, ಜನಪ್ರತಿನಿಧಿಗಳು ಪಕ್ಷಭೇದ ಮರೆತು ಬೀಡಿ ಕಾರ್ಮಿಕರ ರಕ್ಷಣೆಗೆ ಮುಂದಾಗಿದ್ದಾರೆ. ಇದರಲ್ಲಿ ಕರ್ನಾಟಕದ ಜನಪ್ರತಿನಿಧಿಗಳು ಹಿಂದಿದ್ದಾರೆ.

ರಾಜ್ಯದಲ್ಲಿ 10 ಕೋಟಿ ಕೆ.ಜಿ. ತಂಬಾಕು ಉತ್ಪಾದನೆಯಾಗಿದೆ. ಇಷ್ಟೊಂದು ತಂಬಾಕು ಬೆಳೆದಿರುವಾಗ, ಸಹಜವಾಗಿ ದೊಡ್ಡ ಪ್ರಮಾಣದಲ್ಲಿ ಬೀಡಿ ಉತ್ಪಾದನೆಯಾಗಿದೆ. ಬೀಡಿ ಮಾಲಕರಿಗೆ ಹಲವು ಪಟ್ಟು ಲಾಭವಾಗಿದ್ದರೂ, ನಷ್ಟ ಎಂದು ಸುಳ್ಳು ಹೇಳಿ, ನೀಡಬೇಕಿದ್ದ ಹೆಚ್ಚುವರಿ ತುಟ್ಟಿಭತ್ತೆಯನ್ನು ನೀಡದೆ ಬಾಕಿ ಇರಿಸಿದ್ದಾರೆ. ಸರಕಾರವೂ ಕೂಡಾ ಅವರಿಗೆ ವಿನಾಯತಿ ಕೊಟ್ಟಿತ್ತು. ಕೇಂದ್ರ ರಾಜ್ಯ ಸರಕಾರಗಳೂ ಮಾಲಕರ ಪರವಾಗಿ ಇವೆಯೇ ಹೊರತು ಬಡ ಬೀಡಿ ಕಾರ್ಮಿಕರ ಪರವಾಗಿ ಇಲ್ಲ ಎಂದವರು ತಿಳಿಸಿದರು.

ಕೇಂದ್ರದಲ್ಲಿ ಆಳುವ ಬಿಜೆಪಿ ಪಕ್ಷದ ಸದಸ್ಯರು ದ.ಕ. ಮತ್ತು ಉಡುಪಿಯಲ್ಲಿ ಸಂಸದರಾಗಿದ್ದಾರೆ. ಅವರು ಯಾವತ್ತೂ ಬೀಡಿ ಕಾರ್ಮಿಕರ ಪ್ರಶ್ನೆಯನ್ನು ಇಲ್ಲವೇ ಉದ್ದಿಮೆಯ ಸಮಸ್ಯೆಯನ್ನು ಸಂಸತ್ತಿನಲ್ಲಿ ಚರ್ಚಿಸಿಯೇ ಇಲ್ಲ. ದ.ಕ. ಜಿಲ್ಲೆಯಲ್ಲಿ ಕೋಮುವಾದಿ ಪ್ರಚೋದನೆ ನೀಡುವಲ್ಲಿ ಭೀಕರ ಭಾಷಣ ನೀಡುವಲ್ಲಿ ಅವರು ಆರೆಸ್ಸೆಸ್ ನಾಯಕರ ಜೊತೆಗೂಡಿದ್ದಾರೆ. ಬೀಡಿ ಕಟ್ಟುವ ಕರಾವಳಿಯ ಜನತೆ ಬಿಜೆಪಿ ನಾಯಕರ ಪ್ರಚೋದಕ ಮಾತುಗಳಿಗೆ ಬಲಿಬೀಳದೆ, ಸೌಹಾರ್ದವನ್ನು ಕಾಪಾಡಬೇಕೆಂದು ಎಸ್.ವರಲಕ್ಷ್ಮಿ ಕರೆ ನೀಡಿದರು.

ದ.ಕ.ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ನಿನ ಪ್ರಧಾನ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ ಮಾತನಾಡಿ ಕಾರ್ಮಿಕರು ಕೂಡಾ ರಾಜಕೀಯದ ಬಗ್ಗೆ ಮಾತನಾಡಬೇಕು. ಕೇಂದ್ರ ಸರಕಾರ ಆದೇಶ ನೀಡಿ ಪ್ರಾವಿಡೆಂಟ್ ಫಂಡ್ ಹಿಂತೆಗೆದುಕೊಂಡಾಗ, ಬೆಂಗಳೂರಿನ ಗಾರ್ಮೆಂಟ್ ಕಾರ್ಮಿಕರು ಬೀದಿಗೆ ಬಂದರು. ಒಂದೇ ದಿನದಲ್ಲಿ ಪ್ರಧಾನಿ ಮೋದಿಯವರು ತಮ್ಮ ಆದೇಶವನ್ನು ಹಿಂತೆಗೆಯಬೇಕಾಯಿತು. ಅಂಗನವಾಡಿ ನೌಕರರು 4 ದಿನ ಬೆಂಗಳೂರಿನ ರಸ್ತೆ ಬಂದ್ ಮಾಡಿದಾಗ ರಾಜ್ಯ ಸರಕಾರ ಅವರ ಬೇಡಿಕೆಗಳಿಗೆ ಬಾಗಬೇಕಾಯಿತು. ಸರ್ಕಾರ ಕಾಂಗ್ರೆಸ್ಸಿದ್ದಾಗಲೀ, ಬಿಜೆಪಿಯದ್ದಾಗಲಿ, ಜೆಡಿಎಸ್‌ನದ್ದೇ ಆಗಿರಲಿ ಬೀಡಿ ಕಾರ್ಮಿಕರ ಬಗ್ಗೆ ಅವು ಏನೂ ಮಾಡಿಲ್ಲ. ಕೋಟ್ಪಾ ಕಾಯಿದೆಯೋ ಇನ್ನೊಂದೋ, ಬೀಡಿ ಕಾರ್ಮಿಕ ವಿರೋಧಿ ನೀತಿಗಳನ್ನು ಬೀಡಿ ಕಾರ್ಮಿಕರು ಒಗ್ಗಟ್ಟಿನ ಹೋರಾಟದಿಂದ ಕೈಬಿಡುವಂತೆ ಮಾಡಬೇಕಾಗಿದೆ ಎಂದು ಜೆ.ಬಾಲಕೃಷ್ಣ ಶೆಟ್ಟಿ ಹೇಳಿದರು.

ರಾಜ್ಯ ಬೀಡಿ ಕಾರ್ಮಿಕ ಫೆಡರೇಶನ್ನಿನ ಉಪಾಧ್ಯಕ್ಷರಾದ ಪದ್ಮಾವತಿ ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಸೈಯ್ಯದ್ ಮುಜೀಬ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸಮ್ಮೇಳನ ಸ್ವಾಗತ ಸಮಿತಿ ಗೌರವಧ್ಯಕ್ಷರಾದ ಕೆ.ಯಾದವ ಶೆಟ್ಟಿ ಸ್ವಾಗತಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ರಮಣಿ ಮೂಡಬಿದರೆ, ಸಿಐಟಿಯು ಮುಖಂಡರಾದ ವಸಂತ ಆಚಾರಿ, ಸುನಿಲ್ ಕುಮಾರ್ ಬಜಾಲ್, ಬೀಡಿ ಕಾರ್ಮಿಕ ರಾಜ್ಯ ಸಮಿತಿ ಮುಖಂಡರಾದ ಯು.ಬಿ.ಲೋಕಯ್ಯ, ಮಹಾಬಲ ವಡೇರಹೋಬಳಿ, ಕೋದಂಡರಾಮ್, ಸಿ.ಕುಮಾರಿ, ಗಿರಿಜ ಮೂಡಬಿದರೆ, ರಾಧಾ ಮೂಡಬಿದರೆ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಸಮ್ಮೇಳನ ಉದ್ಘಾಟನೆಗೂ ಮೊದಲು ಮೂಡಬಿದರೆ ಹಳೇ ಪೋಲೀಸ್ ಠಾಣೆ ಬಳಿಯಿಂದ ಸಮಾಜ ಮಂದಿರದ ವರೆಗೆ ಬೀಡಿ ಕಾರ್ಮಿಕರ ಮೆರವಣಿಗೆ ನಡೆಯಿತು. ಬಳಿಕ ಸಮ್ಮೇಳನದ ಧ್ವಜವನ್ನು ಹಿರಿಯ ಬೀಡಿ ಕಾರ್ಮಿಕ ಮುಖಂಡ ಯು.ಬಿ.ಲೋಕಯ್ಯ ಆರೋಹಣ ಮಾಡಿದರು. ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮಡಿದ ಕಾರ್ಮಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಮುಖಂಡರಿಗೆ ಶ್ರದ್ಧಾಂಜಲಿ ನಿರ್ಣಯವನ್ನು ವಡೇರಹೋಬಳಿ ಮಂಡಿಸಿದರು. ಸಮ್ಮೇಳನ ಸಭಾಂಗಣ ಕಿಕ್ಕಿರಿದು ಬೀಡಿ ಕಾರ್ಮಿಕ ಮಹಿಳೆಯರು ವೇದಿಕೆಯ ಅಕ್ಕಪಕ್ಕಗಳನ್ನು ಆಕ್ರಮಿಸಿದ್ದರು.

ಬೀಡಿ ಕಾರ್ಮಿಕರ ಮೇಲೆ ಸಂಘಿ ದಾಳಿ

ಮಂಗಳೂರಿನ ಮೂಡಬಿದ್ರೆಯಲ್ಲಿ ಬೀಡಿ ಕಾರ್ಮಿಕರ ರಾಜ್ಯ ಸಮ್ಮೆಳನದಲ್ಲಿ ಭಾಗವಹಿಸಿ ತುಮಕೂರಿಗೆ ಹಿಂದಿರುಗುವಾಗ ಮತಾಂದ, ಕೋಮುವಾದಿ ಕಿಡಿಗೇಡಿಗಳು ಧರ್ಮಸ್ಥಳದಿಂದ ಸುಮಾರು 30 ಕಿಲೋಮೀಟರ್ ವರೆಗೆ ಮಹಿಳಾ ಕಾರ್ಮಿಕರೇ ಹೆಚ್ಚಿದ್ದ, ಕೆಂಬಾವುಟ ಹಾಕಿದ್ದ ವಾಹನ ಹಿಂಬಾಲಿಸಿ ಅಡ್ಡಗಟ್ಟಿ ದಾಂದಲೆ ಮಾಡಲು ಎತ್ನಿಸಿದರು. ವಾಹನ ನಿಲ್ಲಿಸದ ಕಾರಣ ಒಂದೇ ಬೈಕಿನಲ್ಲಿದ್ದ 3 ಯುವಕರು ಕಲ್ಲುಗಳನ್ನು ತೂರಿದ ಪರಿಣಾಮವಾಗಿ ವಾಹನದ ಹಿಂದಿನ ಗಾಜು ಹೊಡೆದಿದೆ ಹಾಗೂ ಇಂಡಿಕೇಟರ್ ಸಹ ಒಡೆದು ಹೋಗಿದೆ. ಅವರ ಜೊತೆ ಒಂದು ಆಲ್ಟೊ ಕಾರು ಸಹ ಹಿಂಬಾಲಿಸುತ್ತಿತ್ತು. ಉಪ್ಪಿನಂಗಡಿ–ಸಕಲೇಶಪುರದ ಸಮೀಪದಲ್ಲಿ ಈ ಘಟನೆ ಸಂಭವಿಸಿದೆ. ಸ್ಥಳಕ್ಕೆ ಉಪ್ಪಿನಂಗಡಿ ಪೋಲೀಸ್ ಅಧಿಕಾರಿ ವರ್ಗದವರು ಬಂದು ಸಹಕರಿಸಿದರು. ಕತ್ತಲಲ್ಲಿ ನಿರ್ಜನ ಹೆದ್ದಾರಿಯಲ್ಲಿ ನಡೆದ ಈ ದಾಳಿಯಿಂದ ಮಹಿಳಾ ಕಾರ್ಮಿಕರು ಭೀತಿಯಿಂದ ಅಲ್ಲೇ ಉಳಿದಿದ್ದಾರೆ. ಬೀಡಿ ಕಟ್ಟಿ ಕುಟುಂಬ ಸಾಗಿಸುವ ಮಹಿಳಾ ಕಾರ್ಮಿಕರ ಮೇಲೆ ನಡೆದ ಈ ದಾಳಿ ಅತ್ಯಂತ ಹೀನಾಯವಾದದ್ದು. ಪ್ರತಿಯೊಬ್ಬರು ಕಟು ಶಬ್ದಗಳಲ್ಲಿ ಖಂಡಿಸಬೇಕಾದದ್ದು.

ಕನಿಷ್ಠ ಕೂಲಿ 300 ರೂ., ಕಲ್ಯಾಣ ಸೌಲಭ್ಯಗಳ–ಕಾರ್ಮಿಕ ಕಾನೂನು ಸಮರ್ಪಕ ಜಾರಿ : ಸಮ್ಮೇಳನದ ಆಗ್ರಹಗಳು

ಅತಿ ಕಡಿಮೆ ಕೂಲಿಯಲ್ಲಿ ಬದುಕುತ್ತಿರುವ ಬೀಡಿ ಕಾರ್ಮಿಕರು ಮಾರುಕಟ್ಟೆಯಲ್ಲಿ ಅಕಾಶ ಮುಟ್ಟುತ್ತಿರುವ ಅಗತ್ಯ ವಸ್ತುಗಳ ಬೆಲೆಗಳಿಂದಾಗಿ – ಹೊಟ್ಟೆ ತುಂಬಾ ಊಟ, ದುಬಾರಿವಾಗುತ್ತಿರುವ ಶೈಕ್ಷಣಿಕ ವೆಚ್ಚ, ಉತ್ತಮ ಶಿಕ್ಷಣ, ಉತ್ತಮ ಆರೋಗ್ಯ ಹೊಂದಿರಲು ಸಾಧ್ಯವಾಗುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿರುವ ದಕ್ಷಿಣ ಕನ್ನಡ ಮೂಡಬಿದ್ರೆಯಲ್ಲಿ ಬೀಡಿ ಕಾರ್ಮಿಕರ 9ನೇ ರಾಜ್ಯ ಸಮ್ಮೇಳನವು 1000 ಬೀಡಿಗೆ 300 ರೂ. ಕನಿಷ್ಠ ಕೂಲಿ ಹಾಗೂ 1514 ಅಂಶಗಳಿಗಿಂತ ಹೆಚ್ಚುವ ಪ್ರತಿ ಅಂಶ ಒಂದಕ್ಕೆ 5 ಪೈಸೆ ತುಟ್ಟಿ ಭತ್ಯೆ ನೀಡುವಂತೆ ನಿರ್ಣಯ ಒಂದನ್ನು ಕೈಗೊಂಡು ಸರ್ಕಾರವನ್ನು ಒತ್ತಾಯಿಸಿದೆ. ರಾಜ್ಯದಲ್ಲಿ ಸರಿಸುಮಾರು 10,000 ಬೀಡಿ ಕಾರ್ಮಿಕರು ಇದ್ದಾರೆ. ಹಾಗಾಗಿ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸುವಂತೆ ಆಗ್ರಹಿಸಿದೆ.

ಬೀಡಿ ಕಾರ್ಮಿಕರ ಉತ್ಪಾದಿಸುವ ಬೀಡಿಯ ಮೇಲೆ ವಿಧಿಸಲಾಗಿದ್ದ ಕಲ್ಯಾಣ ಕರ ಜಿ.ಎಸ್.ಟಿ.ಯಿಂದಾಗಿ ಇಲ್ಲದಂತಾಗಿದೆ. ಹಾಗಾಗಿ ಬೀಡಿ ಕಾರ್ಮಿಕರ ಮಕ್ಕಳಿಗೆ ಶಿಕ್ಷಣ ಪೂರಕವಾಗಿ ಸಿಗುತ್ತಿದ್ದ ವಿದ್ಯಾರ್ಥಿ ವೇತನ, ಗಂಭೀರ ಕಾಯಿಲೆಗಳಾದ ಟಿ.ಬಿ., ಕ್ಯಾನ್ಸರ್, ಹೃದಯ ರೋಗಗಳಿಗೆ ಸಿಗುತ್ತಿದ್ದ, ಚಿಕಿತ್ಸೆ ವೆಚ್ಚ ಮರು ಪಾವತಿಗಳನ್ನು ಮಂದುವರಿಸಲು ಕೇಂದ್ರ ಸರ್ಕಾರ – ಹಿಂದೆ ಸಂಗ್ರಹವಾಗುತ್ತಿದ್ದ ಕಲ್ಯಾಣ ಕರಕ್ಕೆ ಸರಿ ಸಮಾನದ – ಮೊತ್ತವನ್ನೂ ಬಜೆಟ್ ನೀಡುವಂತೆಯೂ ಸಮ್ಮೇಳನ ನಿರ್ಣಯವನ್ನೂ ಅಂಗೀಕರಿಸಿದೆ. ಇದೇ ನಿರ್ಣಯದಲ್ಲಿ – ಅತಿ ಹೆಚ್ಚು ಜನರಿಗೆ ಸಿಗುತ್ತಿದೆ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವುದನ್ನೂ ಆನ್‌ಲೈನ್ ಮಾಡಿರುವ ಕ್ರಮವನ್ನೂ ಸಮ್ಮೇಳನ ಕಟುವಾಗಿ ಟೀಕಿಸಿದೆ. ಅಲ್ಲದೆ ಹಿಂದಿನ ಪದ್ದತಿಯನ್ನು ಜಾರಿಗೊಳಿಸುವಂತೆ ಆಗ್ರಹಿಸಿದೆ. ಕಲ್ಯಾಣ ಯೋಜನೆಗಳಲ್ಲಿ ವಿಪರೀತ ವಿಳಂಬ ಹಾಗೂ ಅಸಮರ್ಪಕತೆಯ ಬಗ್ಗೆ ಕೇಂದ್ರ ಸರ್ಕಾರ/ ಕಲ್ಯಾಣ ಆಯುಕ್ತರು ಗಮನ ಹರಿಸುವಂತೆ ಸಮ್ಮೇಳನವು ಒತ್ತಾಯಿಸಿದೆ. ಕಲ್ಯಾಣ ಯೋಜನೆ ಸೌಲಭ್ಯಗಳು ಸುಲಭವಾಗಿ ಬೀಡಿ ಕಾರ್ಮಿಕರಿಗೆ ತಲುಪಲು ಕ್ರಮವಹಿಸಲು ಒತ್ತಾಯಿಸಿದೆ.

ರಾಜ್ಯದಲ್ಲಿ 7.5 ಲಕ್ಷ ಬೀಡಿ ಕಾರ್ಮಿಕರಿಗೆ ಶಾಸನಾತ್ಮಕ ಕನಿಷ್ಠ ಕೂಲಿ, ಗುರುತಿನ ಚೀಟಿ, ಲಾಗ್ ಪುಸ್ತಕ, ಪಿ.ಎಫ್., ನೀಡದೆ ದುಡಿಸುತ್ತಿದ್ದರೂ ಸರ್ಕಾರಗಳ ಕಂಡು ಕಾಣದಂತೆ ಇದೆ. ಬೀಡಿ ಮತ್ತು ಸಿಗಾರ್ ಕಾರ್ಮಿಕ ಸೇವಾ ಷರತ್ತು–1966. ಕಾರ್ಮಿಕರ ಭವಿಷ್ಯ ನಿಧಿ, ಕನಿಷ್ಠ ವೇತನ ಕಾಯ್ದೆಗಳನ್ನು ಸಮರ್ಪಕ ಜಾರಿಗೆ ಒತ್ತಾಯಿಸಿ ನಿರ್ಣಯವನ್ನು ಕೈಗೊಂಡಿದೆ. ರಾಜ್ಯದಲ್ಲಿ 23–24 ಜಿಲ್ಲೆಗಳಲ್ಲಿ ಬೀಡಿ ಕಾರ್ಮಿಕರಿದ್ದು, ಸರ್ಕಾರ ಈ ಬಗ್ಗೆ ತಕ್ಷಣ ಗಮನ ಹರಿಸುವಂತೆ ಸಮ್ಮೇಳನ ಒತ್ತಾಯಿಸಿದೆ.

2 ದಿನಗಳ ಕಾಲ ನಡೆದ ಸಮ್ಮೇಳನವು. ಧೂಮಪಾನ ನಿಷೇಧ ಕಾಯ್ದೆ, ಕೆಲಸ ಕಳೆದು ಕೊಳ್ಳುತ್ತಿರುವ ಕುರಿತು, ಪರಿಹಾರ–ಪಿಂಚಣಿ..... ಕಳಪೆ ಎಲೆ, ಅತಿ ಹೆಚ್ಚು ಅವರೇಜ್ ಮೂಲಕ ಬೀಡಿ ಕಾರ್ಮಿಕರ ಮೇಲೆ ನಡೆಯುತ್ತಿರುವ ಶೋಷಣೆ ಖಂಡಿಸಿತು.

ಮುಂದಿನ ಅವಧಿಗೆ ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ ಸಿಐಟಿಯುಗೆ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು.

ಅಧ್ಯಕ್ಷರು : ಜೆ.ಬಾಲಕೃಷ್ಣ ಶೆಟ್ಟಿ

ಪ್ರಧಾನ ಕಾರ್ಯದರ್ಶಿ : ಸೈಯದ್ ಮುಜೀಬ್,

ಖಜಾಂಚಿ : ಪದ್ಮವತಿ ಎಸ್.ಶೆಟ್ಟಿ

ಉಪಾಧ್ಯಕ್ಷರುಗಳು : ರಮಣಿ(ಮೂಡಬಿದ್ರೆ), ವಿ.ಕೋದಂಡರಾಮು(ಬೆಂಗಳೂರು), ಮಹಾಬಲ ವಡೇರಹೋಬಳಿ(ಉಡುಪಿ), ನಿಸಾರ್ ಅಹಮದ್ (ಮಂಗಳೂರು), ಸಿ.ಎ.ಖರಾಡೆ(ನಿಪ್ಪಾಣಿ, ಬೆಳಗಾವಿ)

ಕಾರ್ಯದರ್ಶಿಗಳು : ಸಿ.ಕುಮಾರಿ(ಮಂಡ್ಯ), ಸದಾಶಿವ ದಾಸ್(ಮಂಗಳೂರು), ರಾಧ(ಮೂಡಬಿದ್ರೆ), ಉಬೇದ್ ಉಲ್ಲಾ(ದಾವಣಗೆರೆ), ಉಮೇಶ್ ಕುಂದಾರ್(ಉಡುಪಿ) ಮತ್ತು 35 ಮಂದಿ ರಾಜ್ಯ ಸಮಿತಿ ಸದಸ್ಯರನ್ನು ಸಮ್ಮೇಳನವು ಆಯ್ಕೆ ಮಾಡಿದೆ.

ಅಂಬೇಡ್ಕರ್ 126 : ಚಿಂತನೆಗಳ ಪುನರವಲೋಕನ

'ಸಮಾನತೆಯ ಅನ್ವೇಷಣೆ'ಯಲ್ಲಿ..

ನಾಗರಾಜ ನಂಜುಂಡಯ್ಯ

ಅಂಬೇಡ್ಕರ್‌ರವರ 126ನೇ ಜನ್ಮ ವರ್ಷಾಚರಣೆಯ ಅಂಗವಾಗಿ ನಡೆದ ಸಮಾನತೆಗಾಗಿ ಅನ್ವೇಷಣೆ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ, 2019 ರಲ್ಲಿ ಕಾಂಗ್ರೇಸ್ ನಾಯಕತ್ವದಲ್ಲಿ ಎಲ್ಲಾ ಇತರೆ ಪಕ್ಷಗಳು ಕೋಮುವಾದಿ, ಫ್ಯಾಸಿಸ್ಟ್ ಸ್ವರೂಪದ ಪ್ರತಿಗಾಮಿ ಬಿಜೆಪಿಯನ್ನು ಸೋಲಿಸಲು ಪಣತೊಡಬೇಕೆಂಬ ಮನೋಭಾವನೆಗಳು ವ್ಯಕ್ತವಾದವು. ಪ್ರಭಾತ್ ಪಟ್ನಾಯಕ್ ಹೇಳಿದಂತೆ ಕಾಂಗ್ರೆಸ್ ಅಂಬೇಡ್ಕರ್ ರವರ ವಿಚಾರಗಳಿಗೆ-ಚಿಂತನೆಗಳಿಗೆ ಸಂವಿಧಾನದ ಆಶಯಗಳಾದ ಸಾಮಾಜಿಕ ನ್ಯಾಯ, ಸಮಾನತೆ, ಜಾತ್ಯಾತೀತತೆ ಹಾಗೂ ಒಕ್ಕೂಟ ಪ್ರಭುತ್ವದ ರಕ್ಷಣೆಗಳಿಗೆ ನೈಜವಾದ ಸೈದ್ಧಾಂತಿಕವಾದ ಬದ್ಧತೆಯಿಂದ ಪ್ರಾಮಾಣಿಕವಾಗಿ ನಡೆದುಕೊಳ್ಳದೆ ಅದು ಸಾಧ್ಯವಿಲ್ಲ. ಕಳೆದ ಎರಡುವರೆ ದಶಕಗಳ ಮತ್ತು ಇಂದಿಗೂ ಅದರ ನೀತಿಗಳೂ ಸಂಘಟನಾ-ಸೈದ್ಧಾಂತಿಕ ನೆಲೆಗಳನ್ನು ನೋಡಿದರೆ ಕಾಂಗ್ರೆಸ್ ಇದನ್ನು ಮಾಡಿತೇ ಎಂಬುದು ಇಡೀ ಸಮ್ಮೇಳನದ ನಂತರ ನನಗೆ ಪ್ರಶ್ನೆಯಾಗಿ ಕಾಡಿತು.



ಜಿ.ವಿ. ಶ್ರೀರಾಮರೆಡ್ಡಿ ಮಾತನಾಡುತ್ತಿರುವುದು

'ಸಮಾನತೆಯ ಅನ್ವೇಷಣೆ' (Quest for Equity)ಯಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ರವರ ಚಿಂತನೆಗಳ ಪುನರವಲೋಕನ (Re-Visiting Ambedkar Ideas) ಕುರಿತು ಅಂತರಾಷ್ಟ್ರೀಯ ಸಮ್ಮೇಳನ ಜುಲೈ 21 ರಿಂದ 23 ರ ವರೆಗೆ, ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಸಾಕಷ್ಟು ಅರ್ಥಪೂರ್ಣವಾಗಿ ನಡೆಯಿತು. ಸಮ್ಮೇಳನ ಅಂತರರಾಷ್ಟ್ರೀಯ ಖ್ಯಾತಿಯ ಮಾನವ ಹಕ್ಕುಗಳ ಹೋರಾಟಗಾರ 'ಮಾರ್ಟಿನ್ ಲೂಥರ್ ಕಿಂಗ್-3' ರವರ ಉದ್ಘಾಟನೆಯ ಮೂಲಕ ವಿದ್ಯುಕ್ತವಾಗಿ ಚಾಲನೆಯಾಯಿತು. ಉದ್ಘಾಟನಾ ಸಮಾರಂಭ, ಪ್ಲಿನರಿ ಅಧಿವೇಶನಗಳು, ಕೀನೋಟ್ ಅಧಿವೇಶನಗಳು, ಪ್ರಮುಖ ಗೋಷ್ಠಿಗಳು, ಚರ್ಚೆಗಳು, ಕವಿಗೋಷ್ಠಿಗಳು, ವಿಚಾರ ಸಂಕಿರಣಗಳು, ವಿಮರ್ಶೆಗಳು ಹಾಗೂ ಮುಖ್ಯ ಮಂತ್ರಿಗಳೊಂದಿಗೆ ನಡೆದ ಸಂವಾದ, ಕೊನೆಯಲ್ಲಿ ಸಮಾರೋಪ ಹಾಗೂ "ಬೆಂಗಳೂರು ಅಂತರರಾಷ್ಟ್ರೀಯ ಸಮ್ಮೇಳನದ ಘೋಷಣೆಗಳು, ಹೀಗೆ ಸುಮಾರು 90 ಕ್ಕೂ ಹೆಚ್ಚು ಗೋಷ್ಠಿಗಳು ನಡೆಯಿತು. ಭಾಗವಹಿಸಿದ್ದ ನನ್ನಂತಹ ಪ್ರತಿನಿಧಿಗಳಿಗೆ (ಸುಮಾರು 5000 ಕ್ಕೂ ಹೆಚ್ಚು-ಮೂರು ದಿನಗಳ ಕಾಲ) ಅವುಗಳಲ್ಲಿ ಆರಿಸಿಕೊಳ್ಳುವುದೇ ಕಷ್ಟವಾಗಿತ್ತು. ಈ ಅಂತರರಾಷ್ಟ್ರೀಯ ಸಮ್ಮೇಳನದ ಭಾಗವಾಗಿ ಮೂರು ದಿನಗಳಲ್ಲಿ 300ಕ್ಕೂ ಹೆಚ್ಚು ವಿದೇಶಿ ದೇಶಿಯ ಹಾಗೂ ನಮ್ಮ ರಾಜ್ಯದ ವಿದ್ವಾಂಸರ ಭಾಷಣಗಳು, ಚರ್ಚೆಗಳು ಭಾಗವಹಿಸಿದ್ದವರಲ್ಲಿ ಸ್ವಲ್ಪ ಮಟ್ಟಿನ ಪ್ರಭುದ್ಧತೆಯನ್ನು ಪಡೆಯಲು ಒಂದು ಅಭೂತಪೂರ್ವ ಅವಕಾಶವಾಗಿತ್ತು ಎಂದು ಹೇಳಲು ನನಗೆ ಮುಜುಗರವೇನೂ ಇಲ್ಲ.

ನನ್ನಲಿದ್ದ ಓದಿನ ಹಸಿವನ್ನು ನೀಗಿಸಲು, ಆಹಾರವನ್ನು ಒದಗಿಸಿಕೊಟ್ಟ ಸಮ್ಮೇಳನವಿದಾಗಿತ್ತು. ಆಯೋಜಿಸಿದ್ದು ಕರ್ನಾಟಕ ಸರ್ಕಾರವಾಗಿತ್ತು. ಇದರ ಹಿಂದೆ ಮುಳುಗುತ್ತಿರುವ ಕಾಂಗ್ರೇಸ್ ಗೆ ಅಂಬೇಡ್ಕರ್ ರವರ ಚಿಂತನೆಗಳ ಮರು-ಭೇಟಿ ಪ್ರಸ್ತುತ ಅಗತ್ಯತೆಯ ಬಗ್ಗೆ ಹಲವಾರು ವಿದ್ವಾಂಸರು ಮಾತನಾಡಿದ್ದು ಉಂಟು. ಇದು ಕಾಂಗ್ರೆಸಿನ ಚುನಾವಣಾ ತಂತ್ರವೆಂಬುದನ್ನು, ತಳ್ಳಿ ಹಾಕುವಂತಿಲ್ಲ. ಏಕೆಂದರೆ, ದೇಶವು ಇಂದು ಕೋಮುವಾದಿ-ಪ್ರತಿಗಾಮಿ ಶಕ್ತಿಗಳ ಆಡಳಿತದಿಂದ ಗಂಡಾಂತರಕ್ಕೆ ಸಿಲುಕುವ ಅಪಾಯ ಎದುರಾಗುತ್ತಿದೆ. ಸಂವಿಧಾನದ ಅಡಿಪಾಯ-ಆಶಯಗಳಾದ, ಸಮಾನತೆ, ಜಾತ್ಯಾತೀತತೆ ಸ್ವರೂಪ, ಸಾಮಾಜಿಕ ನ್ಯಾಯ ಹಾಗೂ ಒಕ್ಕೂಟ ಪ್ರಭುತ್ವಗಳ ವಿನಾಶಕ್ಕೆ ಪ್ರಸ್ತುತ ರಾಷ್ಟ್ರದ ಅಧಿಕಾರದ ಚುಕ್ಕಾಣಿ ಹಿಡಿದಿರುವ ಆರ್.ಎಸ್.ಎಸ್. ನ ಅಂಗ ಪಕ್ಷವಾದ ಬಿಜೆಪಿ ತಮ್ಮ ಕಾರ್ಯಕ್ರಮಗಳನ್ನು ರೂಪಿಸಿದೆ. ಅವರ ಹಿಂದುತ್ವದ ಪ್ರತಿಪಾದನೆಗೆ ಅಡ್ಡಲಾಗಿರುವುದು - 'ಸಂವಿಧಾನ'. ಆದ್ದರಿಂದ ಇದರ ಅಡಿಪಾಯವನ್ನೂ ಸಡಿಲಗೊಳಿಸಲು, ಪ್ರಜಾಪ್ರಭುತ್ವದ ಬಹುಮತವನ್ನು ಬಳಸಲು ಮುಂದಾಗಿದ್ದಾರೆ.

ಇಂತಹ ಅಪಾಯದ ಮುನ್ಸೂಚನೆಯನ್ನು ಕಾಂಗ್ರೆಸ್ ತಡವಾಗಿಯಾದರೂ ಅರ್ಥ ಮಾಡಿಕೊಂಡು, ಅಂಬೇಡ್ಕರ್ ರವರ ಚಿಂತನೆಗಳ ಮರು ಸ್ಥಾಪನೆಗೆ ಕರ್ನಾಟಕದಲ್ಲಾದರೂ ಆರಂಭಿಸಿರುವುದು ಉತ್ತಮವಾದ ಹೆಜ್ಜೆಯಾಗಿದೆ ಎಂದು ಗುರುತಿಸಬಹುದು.

ಉದ್ಘಾಟನಾ ಸಮಾರಂಭ

ಮಾನವ ಹಕ್ಕುಗಳ ವಿಶ್ವ ನಾಯಕರಾದ ಮಾರ್ಟಿನ್ ಲೂಥರ್ ಕಿಂಗ್-3, ಇವರು ತಮ್ಮ ಉದ್ಘಾಟನಾ ಭಾಷಣದಲ್ಲಿ 'ಅಮೆರಿಕಾದ ಕಪ್ಪು ಜನತೆಯ ವಿಮೋಚನಾ ಹೋರಾಟಕ್ಕೂ - ಭಾರತದಲ್ಲಿನ ದಲಿತರ ಧಮನದ ವಿರುದ್ಧದ ಹೋರಾಟಗಳನ್ನು ಹೋಲಿಸುತ್ತಾ, ಟ್ರಂಪ್ ಮತ್ತು ಮೋದಿ ಈ ಎರಡು ವಿಚಾರಗಳಲ್ಲಿಯೂ ಒಂದೇ ನೀತಿಯನ್ನು ಹೊಂದಿದ್ದಾರೆ ಎಂದು ತಮ್ಮ ನೇರ ಅನುಭವವನ್ನು ಬಿಚ್ಚಿಟ್ಟರು. ಇಡೀ ಜಗತ್ತು ತಂತ್ರಜ್ಞಾನದಲ್ಲಿ ಎಷ್ಟೇ ಅಭಿವೃದ್ಧಿ-ಪ್ರಗತಿ ಹೊಂದಿದ್ದರೂ ಸಹ, ನಾಗರೀಕ ಸಮಾಜದ ಇಂತಹ ಹೀನಾಯ-ಅವಮಾನ-ಅಮಾನವೀಯ 'ಸ್ಥಿತಿ-ಗತಿ'ಗಳ ನಿರ್ಮೂಲನೆ ಸಾಧ್ಯವಾಗದಿರುವುದು ವಿಪರ್ಯಾಸವೆನಿಸುತ್ತದೆ ಎಂದರು. ಈ ಸಭೆಯಲ್ಲಿ ಕಾಂಗ್ರೆಸ್ ನ ರಾಹುಲ್ ಗಾಂಧಿಯವರು ಉಪಸ್ಥಿತರಿದ್ದು, ಮೋದಿಯವರ ಆಡಳಿತದ ಬಗ್ಗೆ ಕಟುಟೀಕಾ ಪ್ರಸಾರದ ಭಾಷಣ ಮಾಮೂಲಾಗಿತ್ತು.

ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ

ಎರಡನೇ ದಿನವೂ ಪ್ರಧಾನ ಆವರಣವು ಕಿಕ್ಕಿರಿದು ತುಂಬಿತ್ತು. (3000 ಕ್ಕೂ ಹೆಚ್ಚು), ಅರ್ಥಶಾಸ್ತ್ರಜ್ಞ ಹಾಗೂ ಪ್ರೊ. ಸುಖದೇವ್ ಥೋರತ್, ಪ್ರೊ. ಸ್ಯಾಮ್ಯುಯಲ್ ಮೈಯ್ಯರ್ಸ್, ವಿದೇಶದ ಲಾರ್ಡ್ ಭಿಕ್ಕು ಪರೇಖ್ ರ ಪ್ರಸ್ತಾವನೆಗಳು ನೆರೆದಿದ್ದವರನ್ನು ಆಕರ್ಷಿಸಿತ್ತು. ಪ್ರೊ. ಥೋರಟ್ ಮಾತನಾಡುತ್ತಾ, ಜಾಗತೀಕರಣ ಪ್ರಕ್ರಿಯೆಗಳ ಜಾರಿಯಿಂದಾಗಿ, ಆರ್ಥಿಕ ಅಸಮಾನತೆ, ಸಾಮಾಜಿಕ ತಾರತಮ್ಯ, ಜಾತಿ-ಧರ್ಮದ ಹೆಸರಿನಲ್ಲಿ ಹೆಚ್ಚಾಗಿರುವುದನ್ನು ಅಂಕಿ-ಅಂಶಗಳ ಮೂಲಕ ತೆರೆದಿಟ್ಟರು. ಶಿಕ್ಷಣ, ಆರೋಗ್ಯ ಮುಂತಾದ ಮೂಲ ಸೌಕರ್ಯಗಳು ಖಾಸಗೀಕರಣಗೊಂಡಿರುವುದರಿಂದ, ದಲಿತರ, ಹಿಂದುಳಿದವರ ಅಲ್ಪಸಂಖ್ಯಾತರ ಜೀವನ ಅಧೋಗತಿಗಿಳಿದಿದೆ. ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಅಗತ್ಯವಿದೆ ಎಂದರು. ದಲಿತರಿಗೆ ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯವಿರುವುದರಿಂದ ಈ ಸಮುದಾಯದ ಧ್ವನಿ ಸ್ವಲ್ಪ ಕೇಳಿಸುತ್ತಿದೆ. ಇಲ್ಲದಿದ್ದರೆ ಇವರನ್ನು ಧ್ವಂಸಗೊಳಿಸುತ್ತಿದ್ದರು. ಆದಾಗ್ಯೂ, ದಲಿತ ಸಮುದಾಯಕ್ಕೆ ನೈಜ-ಪ್ರತ್ಯೇಕ ಪ್ರಾತಿನಿಧ್ಯ



ಪ್ರಭಾತ್ ಪಾಟ್ನಾಯಕ್

ಇರಬೇಕು ಎಂದು ಅಂಬೇಡ್ಕರ್ ಬಯಸಿದ್ದರು. ಅದಕ್ಕಾಗಿ ಪ್ರತ್ಯೇಕ ಕ್ಷೇತ್ರಗಳು ಬೇಕೆಂದು ಥೋರತ್ ಪ್ರತಿಪಾಧಿಸಿದರು. ರಾಜಕೀಯ ವ್ಯವಸ್ಥೆಯಲ್ಲಿ ಅಲ್ಪಸಂಖ್ಯಾತರನ್ನು ದಲಿತರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ರೂಪಿಸಬೇಕು. ಅಸ್ಪೃಶ್ಯತೆಯನ್ನು ದೇಶದ ಸಂವಿಧಾನವೇ ನಿಷೇದಿಸಿದ್ದರೂ ದಲಿತರ ಮೇಲಿನ ದೌರ್ಜನ್ಯಗಳು ನಿಂತಿಲ್ಲ. ಇದು ಜಾತಿ ವ್ಯವಸ್ಥೆಯ ಕ್ರೂರ ಮುಖವಾಣಿಗೆ ಸಾಕ್ಷಿಯಾಗಿದೆ. 2014 ರಲ್ಲಿ ಎನ್‌ಸಿಆರ್‌ಬಿ ಪ್ರಕಾರ, ದೇಶದಲ್ಲಿ 2.40 ಲಕ್ಷ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. ಈ ಅನಿಷ್ಟ ಪದ್ಧತಿಯ ಬೇರು ಪಾಳೇಗಾರಿ ಮೌಲ್ಯಗಳು, ಇದನ್ನು ಕೇವಲ ಕಾನೂನಿನಿಂದ ಹೋಗಲಾಡಿಸಲು ಅಸಾಧ್ಯವೆಂದು ಖೇದದಿಂದ ಹೇಳಿದರು.

ಪ್ರೊ. ಸ್ಯಾಮ್ಯುಯಲ್ ಮಾತನಾಡಿ, ಭಾರತದ ಹಾಗೂ ಅಮೆರಿಕಾದಲ್ಲಿ ಅಸಮಾನತೆ ಒಂದೇ ಸ್ವರೂಪದಲ್ಲಿದೆ., ಅಸಮಾನತೆ ನಿವಾರಣೆಗೆ ಮೀಸಲಾತಿ ಸಿದ್ಧ ಔಷದವಾಗಿದೆ. ಜಾತಿ ವಿನಾಶ, ವರ್ಣಬೇದ ವಿನಾಶ ಎರಡು ಒಂದೇ ಮಗ್ಗಲಿನ ಹೋರಾಟಗಳು ಎಂದರು. ಮನೆಯಲ್ಲಿಯೇ ರಕ್ಷಣೆಯಿಲ್ಲ ಇದೇ ಸಂದರ್ಭದಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತರಾದ ಕೈಲಾಸ ಸತ್ಯಾರ್ಥಿಯವರ ಪ್ರಕಾರ, ದೇಶದಲ್ಲಿ ಬಹಳಷ್ಟು ಹೆಣ್ಣು ಮಕ್ಕಳಿಗೆ ಮನೆಯಲ್ಲೆ ಸೂಕ್ತ ರಕ್ಷಣೆಯಿಲ್ಲದಿರುವುದು ನಿಜಕ್ಕೂ ಅವಮಾನಕರ, ಇದು ಭಾರತದ ಸಾಮಾಜಿಕ ಅನಿಷ್ಟತೆಗೆ ಹಿಡಿದ ಕನ್ನಡಿಯಾಗಿದೆ ಎಂದರು. ಮಕ್ಕಳ ಮೇಲೆ, ಮಹಿಳೆಯರ ಮೇಲೆ ಯಾವುದೇ ರೀತಿಯ ಲೈಂಗಿಕ ದೌರ್ಜನ್ಯಕ್ಕೆ ಅವಕಾಶವಿಲ್ಲದಂತೆ, ಬೃಹತ್ ಹೋರಾಟಗಳನ್ನು ನಡೆಸಬೇಕಾದ ಅನಿವಾರ್ಯತೆ ಇದೆ ಎಂದರು. ಇನ್ನೊಂದೆಡೆ, ಕೆಲವು ಮತೀಯ ಶಕ್ತಿಗಳು, ಮಕ್ಕಳನ್ನು, ಯುವಕ-ಯುವತಿಯರನ್ನು ಹಿಂಸಾ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿರುವುದು ದೊಡ್ಡ ಸವಾಲಿನ ಸಮಸ್ಯೆಯಾಗಿದೆ. ನಕ್ಸಲ್ ಪೀಡಿತ ಪ್ರದೇಶಗಳು, ಕಾಶ್ಮೀರದಲ್ಲಿನ ಹಲವು ಹಿಂಸಾಕೃತ್ಯಗಳ ಬಗ್ಗೆ ಉದಾಹರಣೆ ಕೊಟ್ಟರು.

ಬ್ರಾಹ್ಮಣಶಾಹಿ ಹಾಗೂ ಠಾಕೂರ್‌ಶಾಹಿ

ಮತ್ತೊಂದು ಪ್ರಧಾನ ಆವರಣದಲ್ಲಿ ನಡೆದ ಗೋಷ್ಠಿಯಲ್ಲಿ ಮಾತನಾಡಿದ ಆಶೀಶ್ ನಂದಿಯವರು, ದಲಿತರ ಮೇಲಿನ ದೌರ್ಜನ್ಯದ ಮೂಲ ಬ್ರಾಹ್ಮಣಶಾಹಿ ಹಾಗೂ ಠಾಕೂರ್‌ಶಾಹಿ - ದಲಿತರ ಏಳಿಗೆಯಿಂದ ತಮ್ಮ ಸ್ಥಾನ-ಮಾನ ಸೌಲಭ್ಯಗಳಿಗೆ ಕುತ್ತು ಬರಬಹುದು ಎಂಬ ಆತಂಕ, ಇವರಿಗೆ ಮಾತ್ರವಲ್ಲದೆ, ರೆಡ್ಡಿ, ಪಟೇಲ್, ಜಾಟ್, ಯಾದವ ಜಾತಿಗಳಲ್ಲಿಯೂ ಅಭದ್ರತೆಯ ಆತಂಕ ಸೃಷ್ಟಿಯಾಗಿದೆ. ಆದ್ದರಿಂದ ಎಲ್ಲರೂ ಮೀಸಲಾತಿಗಾಗಿ ಬೀದಿಗೆ ಧುಮುಕಿ, ಹಿಂಸಾತ್ಮಕ ಕಾರ್ಯದಲ್ಲಿ ತೊಡಗಿದ್ದಾರೆ. ಇದಕ್ಕೆ ಆಯಾ ಬಿಜೆಪಿ ಆಡಳಿತಗಳು, ಗುಜರಾತ್, ರಾಜಸ್ತಾನ, ಮಧ್ಯಪ್ರದೇಶ ಹಾಗೂ ಹರಿಯಾಣಗಳಲ್ಲಿ ಪುಷ್ಠಿ ಒದಗಿಸುತ್ತಿದ್ದಾರೆ ಎಂದರು. ಇವರೆಲ್ಲರೂ ಚಾತುರ್ವರ್ಣದ ಶೂದ್ರರೇ ಆಗಿದ್ದಾರೆ ಎಂದರು.

ಈ ಸಂದರ್ಭದಲ್ಲಿಯೇ ದಕ್ಷಿಣ ಆಫ್ರಿಕಾದ ಕ್ವಾಜಲ್ ನೇಟಲ್, ಪ್ರೊ। ಗುಲಾಂ ವಹೀದ್ ಮಾತನಾಡಿ, ಅಂಬೇಡ್ಕರರವರ ಚಿಂತನೆಗಳು ದಕ್ಷಿಣ ಆಫ್ರಿಕಾದ ಕರಿಯ ಜನರ ವಿಮೋಚನೆಗೆ ಅಗತ್ಯವಾಗಿದೆ. ನಾವುಗಳು ಇದನ್ನು ಕೊಂಡೊಯ್ಯುತ್ತೇವೆ ಎಂದರು.

'ಕಾಂಗ್ರೆಸ್' ನ ಮಾಜಿ-ಹಾಲಿ ನಾಯಕರು


ಕಾಂಗ್ರೆಸ್‌ನಲ್ಲಿನ ಮಣಿ ಶಂಕರ್ ಅಯ್ಯರ್, ಶಶಿ ತರೂರ್, ಜಯರಾಮ್ ರಮೇಶ್ ಹಾಗೂ ಬಾಲ ಚಂದ್ರ ಮುಂಗೇಕರ್ ರವರು ಹಲವು ಗೋಷ್ಠಿಗಳಲ್ಲಿ ಭಾಗವಹಿಸಿದ್ದು, ಅವರ ಭಾಷಣಗಳಲ್ಲಿ ಒಂದೇ ರೀತಿಯ 'ರಾಗ'ವಿತ್ತು. ಭಾರತದ ಸಂವಿಧಾನದ ರಚನಾ ಸಮಿತಿ ಮೊದಲು ಸಭೆ ನಡೆದಿದ್ದು, 1946 ರ ಡಿಸೆಂಬರ್ 9 ರಂದು, ಅದೇ ದಿನ ಇಟಲಿಯಲ್ಲಿ ಸೋನಿಯಾಗಾಂಧಿ ಅವರು ಹುಟ್ಟಿದ್ದು ಎಂದು ಮಣಿ ಶಂಕರ್ ಅಯ್ಯರ್ ಪ್ರಸ್ತುತ ಪಡಿಸುತ್ತಾ, ಭಾರತದ ಪ್ರಜಾಪ್ರಭುತ್ವ ರೂಪುಗೊಳ್ಳುವುದಕ್ಕೂ, ಕಾಂಗ್ರೆಸ್‌ನ ಈಗಿನ ಅಧ್ಯಕ್ಷರಾದ ಸೋನಿಯಾ ಗಾಂಧಿಯವರಿಗೂ ಇರುವ ಸಂಬಂಧವನ್ನು ಕಲ್ಪಿಸಿದ್ದು. ಅಂಬೇಡ್ಕರನ್ನು ತಿರಸ್ಕರಿಸಿದ್ದ ಅಂದಿನ ಕಾಂಗ್ರೆಸ್ ನಿಲುವನ್ನು ಮರೆಮಾಚಿಸಲು ಪಟ್ಟ ಶ್ರಮವೇನೋ ಎಂದೆನಿಸಿತು.

ಜೈರಾವ್ ರಮೇಶ್ ರವರು ಕಾಂಗ್ರೇಸ್ ಅಧಿಕಾರದ ಅವಧಿಯಲ್ಲಿ 'ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ'(ಮನರೇಗಾ) ಆದಿವಾಸಿ ಹಕ್ಕುಗಳ ರಕ್ಷಣೆ ಕಾಯ್ದೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಯಶಸ್ವಿಯಾಗಿತ್ತು. ಇದಕ್ಕೆ ಎಡಪಕ್ಷಗಳ ಬೆಂಬಲವಿತ್ತು ಎಂದರು. ಇದೀಗ ಇದರಿಂದ ಗ್ರಾಮೀಣ ದಲಿತರಿಗೆ ಬುಡಕಟ್ಟು

ಪುಟ 10 ಕ್ಕೆ

ಚಿತ್ರ ಮಾಹಿತಿ

ಹೆಚ್.ಆರ್. ನವೀನ್‌ಕುಮಾರ್



‘ಸಮಾನತೆಯ ಅನ್ವೇಷಣೆ’ಯಲ್ಲಿ.........

ಪುಟ 9 ರಿಂದ

ಪಂಗಡಗಳಿಗೆ ಉದ್ಯೋಗದ ಖಾತ್ರಿಯಾಯಿತು. ಆದರೀಗ ಬಿಜೆಪಿ ಇವುಗಳ ವಿನಾಶಕ್ಕೆ ಕೈ ಹಾಕಿದೆ. ಅಂಬೇಡ್ಕರರ ಸಂವಿಧಾನದ ಆಶಯುಗಳಿಗೆ ವಿರುದ್ಧವಾಗಿರುವ ಬಿಜೆಪಿ ಅವರನ್ನು ಹೈಜಾಕ್ ಮಾಡಿದೆ. ಮೋದಿಯವರು ಹಿಂದುತ್ವ ರಾಷ್ಟ್ರ ಮಾಡಲು ಸೂಕ್ತ ರಾಜಕೀಯ ಸಮಯವಿದಾಗಿದೆ ಎಂದು ಚಿಂತಿಸುತ್ತಿದ್ದಾರೆ ಎಂದರು.

‘ರಾಷ್ಟ್ರೀಯವಾದ ಭಾರತದ ಕಲ್ಪನೆ’ ಕುರಿತಂತೆ ಮಾತನಾಡಿದ ಸಂಸದ ಶಶಿತರೂರ್ ಭಾರತದ ಸಂವಿಧಾನವನ್ನು ಕೊಟ್ಟ ಅಂಬೇಡ್ಕರ್‌ರವರು ದೇಶಕ್ಕೆ ಮಾತ್ರವಲ್ಲ ಜಗತ್ತಿಗೆ ಆದರ್ಶವಾಗಿದ್ದಾರೆ. ಅವರ ಚಿಂತನೆಗಳು ಎಂದೆಂದಿಗೂ ಪ್ರಸ್ತುತವಾಗಿದೆ. ಇಂದು ಬಿಜೆಪಿ ದಮನಿತರ, ಅಲ್ಪಸಂಖ್ಯಾತರ, ದಲಿತರ ಅಭಿವ್ಯಕ್ತಿಯ ಮೇಲೆ ಧಾಳಿ ನಡೆಸುತ್ತಿದೆ. ಅಸಹಿಷ್ಣುತೆ ಇವರ ಆಡಳಿತದ ಪ್ರಮುಖ ಅಂಶವಾಗಿದೆ. ನಮ್ಮ ಸಂವಿಧಾನವು ದೇಶದಲ್ಲಿ ಪ್ರತಿಯೊಬ್ಬರಿಗೂ ಎಲ್ಲಾ ವಿಚಾರಗಳಲ್ಲಿಯೂ ಅಭಿವ್ಯಕ್ತಿಯ ಸ್ವಾತಂತ್ರ್ಯ ಒದಗಿಸಿದೆ. ಜಾತಿ, ಧರ್ಮ, ಮತಗಳ ಹೆಸರಿನಲ್ಲಿ ದೇಶದ ಏಕತೆಯನ್ನು ಧಮನ ಮಾಡುವುದು ಸರಿಯಲ್ಲ. ಪ್ರತ್ಯೇಕ ನಾಡಧ್ವಜ, ದೇಶದ ಏಕತೆಗೆ ಧಕ್ಕೆ ತರುವುದಿಲ್ಲ, ರಾಜ್ಯಗಳು ನಾಡಧ್ವಜ ಹೊಂದಲು ಯಾವುದೇ ನಿರ್ಬಂರ್ಧವಿಲ್ಲ ಎಂದರು.

ಕಾಂಗ್ರೆಸ್‌ನ ಮಾಜಿ ರಾಜ್ಯ ಸಭೆ ಸದಸ್ಯರಾದ ಪ್ರೊ. ಎಂ.ವಿ. ರಾಜೀವ್‌ಗೌಡ, ಕೇಂದ್ರದ ಮಾಜಿ ಸಚಿವರಾಗಿದ್ದ, ಸಲ್ಮಾನ್ ಖುರ್ಷಿದ್ ಇನ್ನೂ ಅನೇಕರು ಹಲವು ಗೋಷ್ಠಿಗಳಲ್ಲಿ ಬಾಗವಹಿಸಿದ್ದರು.

ರಾಷ್ಟ್ರೀಯವಾದ, ಭಾರತದ ಪರಿಕಲ್ಪನೆ, ಜಾಗತೀಕರಣ, ಹಿಂದುತ್ವವಾದ ಮೇಲಿನ ಗೋಷ್ಠಿಗಳಲ್ಲಿ – ಉನ್ನತ ಮಟ್ಟದ ಚರ್ಚೆಗಳು:

ಖ್ಯಾತ ಅಂಕಣಗಾರ್ತಿ ಹಾಗೂ ಪ್ರೊಫೆಸರ್ ಕಲ್ಪನ ಕನ್ನಾಬಿರನ್, ಅಮೆರಿಕಾ ಇಂಡಿಯಾನ ಯುನಿವರ್ಸಿಟಿಯ ಕಾನೂನು ಪ್ರಾಧ್ಯಪಕರಾದ ಕೆವಿನ ಬ್ರೌನ್ ಖ್ಯಾತ ಚಿಂತಕ ಅರುಣಾ ರಾಯ್ ಭಾಗವಹಿಸಿದ್ದ ಗೋಷ್ಠಿಯು ಸಮ್ಮೇಳನದ ಮತ್ತೊಂದು ಉನ್ನತ ಮಟ್ಟದ ಗೋಷ್ಠಿಯಾಗಿತ್ತು. ಅಮೆರಿಕದಲ್ಲಿನ ಆಫ್ರಿಕನ್ನರ ಹೋರಾಟ ಮತ್ತು ಬಾರತದ ದಲಿತರ ಹೋರಾಟಗಳ ಮಧ್ಯೆ ಇರುವ ಹಲವು ಸಾಮತ್ಯೆಯನ್ನು ಅವರು ಬಿಚ್ಚಿ ಹೇಳಿದರು.

ಅಸಮಾನತೆ, ವರ್ಣ–ತಾರತಮ್ಯ ಅಮೆರಿನ್ ಆಫ್ರಿಕನ್‌ರಿಗೆ ಮುಂದುವರಿಯುತ್ತಲೆ ಇದೆ. ಅವರ ಧ್ವನಿ ಅಡಗಿಸುವ ನಿಟ್ಟಿನಲ್ಲಿ ಬಿಳಿಯರ ನೀತಿಯಲ್ಲಿ ಯಾವ ಬದಲಾವಣೆಯೂ ಇಲ್ಲ. ಅದೇ ರೀತಿ ಭಾರತದಲ್ಲಿಯೂ ಅಸ್ಪೃಶ್ಯತೆ ವರ್ಗ ತಾರತಮ್ಯ ಜೀವಂತವಾಗಿದೆ. ಅಂಬೇಡ್ಕರ್ ರವರು ಈ ದಮನಕ್ಕೆ ಸಿಕ್ಕ ಜನರ ಕಣ್ಮಣಿಯಾಗಿದ್ದಾರೆ. ಸ್ವತಂತ್ರ ಭಾರತದ 65 ನೇ ವರ್ಷದ ಗಣರಾಜ್ಯೋತ್ಸದಲ್ಲಿ ‘ಒಬಾಮ ಆಹ್ವಾನಿತರಾಗಿದ್ದರು. ಆದರೆ, ಅಮೇರಿಕಾದ ಬಿಳಿಯರು ಕರಿಯರ ನಡುವಿನ ವರ್ಣಭೇದ, ಅಸಮಾನತೆ ಭಾರತದಷ್ಟೆ ಕ್ರೂರವಾಗಿದೆ ಎಂದರು. ದಲಿತರ ಮೇಲೆ ಹಲ್ಲೆ, ದೌರ್ಜನ್ಯಗಳು ಹೆಚ್ಚಾಗಿ ನಡೆಯುತ್ತಿದ್ದರೂ ಸಹ, ಅನೇಕ ರಾಜಕೀಯ ಪಕ್ಷಗಳು ಮೌನವಾಗಿರುವುದು ಸ್ವತಂತ್ರ ಭಾರತದ ದುರಂತವೆಂದರು.

ಚಿಂತಕಿ ಅರುಣಾ ರಾಯ್ ರವರು ರಾಜಸ್ತಾನದಲ್ಲಿ ಹೆಬ್ಬೆಟ್ಟು ಗುರುತು ಕಂಪ್ಯೂಟರ್‌ನಲ್ಲಿ ಸರಿಯಾಗಿ ಬಂದಿಲ್ಲವೆಂಬ ಕಾರಣಕ್ಕೆ 3 ಲಕ್ಷಕ್ಕೂ ಹೆಚ್ಚಿನ ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಜನರಿಗೆ, ಉದ್ಯೋಗ ಖಾತ್ರಿ ಯೋಜನೆಯಿಂದ ವಂಚಿತರಾಗಿದ್ದಾರೆ. ತಂತ್ರಜ್ಞಾನವು ಮುಂದೊಂದು ದಿನ, ನಮ್ಮ ಪ್ರಜಾಪ್ರಭುತ್ವದ ಹಕ್ಕುಗಳನ್ನು ನಾಶಮಾಡುವ ಕಾಲ ದೂರವಿಲ್ಲವೆಂದರು. ಸರ್ಕಾರಗಳಿಗೆ ಸಾಮಾಜಿಕ ಕಾಳಜಿ ಇಲ್ಲ. ಕನಿಷ್ಠ ವೇತನ ನೀಡಲು, ರೈತರ ಸಾಲಮನ್ನಾ ಮಾಡಲು ಕೇಂದ್ರ ಸರ್ಕಾರ ಹಿಂದು – ಮುಂದು ನೋಡುತ್ತದೆ, ಆದರೆ ಕಾರ್ಪೋರೇಟುಗಳ ಕೈಗೊಂಬೆಗಳಾಗಿ ಅವರ ಮಾತನ್ನು ಪಾಲಿಸುತ್ತದೆ. ಇದಕ್ಕೆಲ್ಲಾ ವಿಸ್ತಾರವಾದ ಚಳುವಳಿಗಳು ಮಾತ್ರ ಉತ್ತರಕೊಡಬಲ್ಲವು, ಇದನ್ನೆ ಅಂಬೇಡ್ಕರ್‌ರವರು ನಂಬಿದ್ದರು. ಶೋಷನಾ ರಹಿತ – ದಮನ ಮುಕ್ತ ಸಮಾಜ ಅವರ ಭಾರತದ ಪರಿಕಲ್ಪನೆಯಾಗಿತ್ತು. ನಾನಂತು ಅಂಬೇಡ್ಕರ್ ರವರ ಚಿಂತನೆಗಳಿಂದ ಆಕರ್ಷಿತಳಾಗಿಯೇ, ನನ್ನ ಜೀವನ ಶೈಲಿಯನ್ನೂ ರೂಪಿಸಿಕೊಂಡಿದ್ದೇನೆ ಎಂದರು.

ಮಾರ್ಕ್ಸ್‌ವಾದ–ಅಂಬೇಡ್ಕರ್ ವಾದಗಳ ನಡುವೆ ಸಂವಾದ

ಪ್ರೊ॥ ಜಿ. ಹರಗೋಪಾಲ್ ಅಧ್ಯಕ್ಷತೆಯಲ್ಲಿ ನಡೆದ ಪ್ರಧಾನ ಗೋಷ್ಠಿಗಳಲ್ಲಿ ಅತ್ಯನ್ನತ ಮಟ್ಟದ್ದು, ಕಿಕ್ಕಿರಿದು ಸಭಾಂಗಣ ತುಂಬಿತ್ತು. ನೂರಾರು ಜನರು ನಿಂತು ಆಲಿಸಿದರು. ಪ್ರಮುಖ ಪ್ರಬಂಧಕರಾಗಿ, ಪ್ರೊ॥ ಪ್ರಭಾತ್ ಪಟ್ನಾಯಕ್, ಅರ್ಥಶಾಸ್ತ್ರಜ್ಞರು, ಪೋಲ್ಯಾಂಡಿನ ಆರ್ಥಿಕತಜ್ಞ, ಪ್ರೊ। ಭೋನಿಸ್ಲಾ ಜಾರ್‌ನೋಚ್ಬಾ ಹಾಗೂ ಹಾಗೂ ಅಂಬೇಡ್ಕರ್ ಕುಟುಂಬದ ಚಿಂತಕ, ಬರಹಗಾರ ಪ್ರೊ. ಆನಂದ್ ತೇಲ್ತ್‌ಂಬ್ದೆ, ಸಮ್ಮೇಳನದಲ್ಲಿ ಭಾಷಣಕಾರರಾಗಿ ಆಗಮಿಸಿದ್ದು, ನೂರಾರು ಪ್ರತಿನಿಧಿಗಳನ್ನು ಆಕರ್ಷಿಸಿದ ಗೋಷ್ಠಿ ಇದಾಗಿತ್ತು.

ಕಾರ್ಲ್‌ಮಾರ್ಕ್ಸ್ ಮತ್ತು ಅಂಬೇಡ್ಕರ್ ವಿಚಾರಗಳು ಪ್ರಸ್ತುತವೆಂದು ಬಿಂಬಿಸಿದ ಗೋಷ್ಠಿಯಾಗಿ ಮಾರ್ಪಾಡಾಗಿತ್ತು. ಪ್ರೊ। ಭೋನಿಸ್ಲಾ ತಮ್ಮ ವಿಚಾರವನ್ನು ಸ್ಲೈಡ್ ಮೂಲಕ ಪರದೆಯ ಮೇಲೆ ಬಿಂಬಿಸುತ್ತಾ ತಮ್ಮ ವಿಚಾರ ಮಂಡಿಸಿದ್ದು ನೆರೆದಿದ್ದವರ ಮೆಚ್ಚುಗೆಗೆ ಪಾತ್ರವಾಯಿತು. ತಮ್ಮ ಪೋಲಾಂಡಿನ ಕಮ್ಯುನಿಸ್ಟ್ ಪಕ್ಷದ ಆಡಳಿತದಲ್ಲಿ ಅಂಬೇಡ್ಕರ್ ಚಿಂತನೆ, ಭಾತದ ಸಂವಿಧಾನದ ಅನೇಕ ಅಂಶಗಳನ್ನು ಅಳವಡಿಸಿಕೊಂಡ ಬಗ್ಗೆ ಬಗ್ಗೆ ವಿಶ್ಲೇಷಣೆ ನೀಡಿದರು. ಭಾರತದ ಮಾರ್ಕ್ಸಿಸ್ಟ್‌ರೊಂದಿಗೆ ದಲಿತ ಚಳುವಳಿ ಐಕ್ಯವಾಗಬೇಕೆಂದರು. ಮಾರ್ಕ್ಸ್‌ವಾದದಲ್ಲಿ ಆರ್ಥಿಕ ಸಮಾನತೆ ಇದೆ. ಬಂಡವಾಳ ಶಾಹಿ ಪದ್ಧತಿಯ ಶೋಷಣೆಯ ನೀತಿಗಳಿಗೆ, ಮಾರ್ಕ್ಸ್‌ವಾದದಲ್ಲಿ ದುಡಿಯುವ ಜನತೆಗೆ ನ್ಯಾಯ ದೊರಕುತ್ತದೆ. ಅದೇ ರೀತಿ ಅಂಬೇಡ್ಕರ್‌ರವರ ಸಂವಿಧಾನದಲ್ಲಿ ಆರ್ಥಿಕ–ಸಾಮಾಜಿಕ ನ್ಯಾಯ ಅಡಗಿದೆ. ಈ ಸಮ್ಮೇಳನದ ಮೂಲ ಆಶಯವು ‘ಸಮಾನತೆಯ ಅನ್ವೇಷಣೆ’ಯಾಗಿದೆ. ಸ್ಪಷ್ಟವಾದ ಗುರಿಗಳು ನಮ್ಮ ಮುಂದೆ ಇರುವುದು ಈ ಎರಡು ವೈಜ್ಞಾನಿಕ ವಾದಗಳಲ್ಲಿದೆ. ಆಲೋಚಿಸಿರಿ. ದಲಿತರು–ಮಾರ್ಕ್ಸಿವಾದಿಗಳಲ್ಲಿ ಸಾಮ್ಯತೆ ಮೂಡಲಿ ಎಂಬ ಅಭಿಪ್ರಾಯ ನೆರೆದಿದ್ದವರಲ್ಲಿ ಆಲೋಚಿಸುವಂತೆ ಮಾಡುವಲ್ಲಿ ಗಮನಾರ್ಹವಾಗಿತ್ತು.

ನಂತರ ಭಾರತದ ಮಾರ್ಕ್ಸಿಸ್ಟ್ ಚಿಂತಕ ಹಾಗೂ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಮಾತನಾಡಿ ದೇಶವು ಇಂದು ಹಿಂದುವಾದಿಗಳ ಹಿಡಿತದಲ್ಲಿ ಗಂಡಾಂತರದಲ್ಲಿದೆ, ನಾವೆಲ್ಲ ಗಂಭೀರವಾಗಿ ರಾಜಕೀಯ ಸನ್ನಿವೇಶವನ್ನೂ ಅರ್ಥಮಾಡಿಕೊಳ್ಳಬೇಕಾಗಿದೆ. ಅಂಬೇಡ್ಕರ್ ಕಂಡ ಭಾರತ ಇಂದು ಹಿಂದುತ್ವ ಪರಿಕಲ್ಪನೆಯವರ ಆಡಳಿತದಲ್ಲಿ ನುಚ್ಚುನೂರಾಗುತ್ತಿದೆ. ಪ್ರತಿಗಾಮಿ ಬೂರ್ಜ್ವಾ ರಾಷ್ಟ್ರೀಯುವಾದದ ವೈಭವೀಕರಣಗೊಳ್ಳುತ್ತಿದೆ. ಭಾರತದ ಸ್ವತಂತ್ರ ಸಂಗ್ರಾಮದ ಹೋರಾಟ ಬ್ರಿಟಿಷ್ ವಿರೋಧಿ ಹೋರಾಟಕ್ಕೆ ಸೀಮಿತವಾಗಿರಲಿಲ್ಲ. ದೇಶವನ್ನು ಒಂದು ಪಾಲೇಯಗಾರಿ ಜಾತಿವ್ಯವಸ್ಥೆ–ಗ್ರಸ್ತ ಸಾಮಾಜಿಕ ಅಸಮಾನತೆಯಿಂದ ‘ಸಮಾನತೆಯ ನಾಗರೀಕ ಸಮಾಜದ ಸಾಮಾಜಿಕ ನ್ಯಾಯದ ಪರಿಕಲ್ಪನೆ’ಯನ್ನೂ ಹೊಂದಿತ್ತು. ಆದರೆ ಇಂದು ರಾಷ್ಟ್ರೀಯವಾದವು ಕೇವಲ ಹಿಂದುತ್ವ ಅಜೆಂಡಾಕ್ಕೆ ಸೀಮಿತವಾಗಿ ಬಿಟ್ಟಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಜಾಗತೀಕರಣ, ಉದಾರೀಕರಣ, ಖಾಸಗೀಕರಣ–ನವ ಉದಾರವಾದದ ಪ್ರಕ್ರಿಯೆಗಳು ಆರ್ಥಿಕ ಅಸಮಾನತೆಯ ಕಂದಕವನ್ನೂ ತೀವ್ರ ಆಳಗೊಳಿಸಿದೆ. ಶಿಕ್ಷಣ–ಆರೋಗಗಳನ್ನು ಇಂದು ಸರಕುಗಳಾಗಿ ಮಾರ್ಪಾಡು ಮಾಡಲು ಹೊರಟಿದ್ದಾರೆ. ಇದರಿಂದ ಎಷ್ಟು ಹಣವನ್ನು ದೋಚಲು ಸಾಧ್ಯವೆಂಬುದು ವ್ಯವಸ್ಥೆಯ ಭಾಗವಾಗಿದೆ. ದೇಶದ ಶಿಕ್ಷಣ ಸಂಸ್ಥೆಗಳ ಮೇಲೆ ಹಿಂದುತ್ವವಾದಿಗಳು ಅಸಹಿಷ್ನುತೆಯ ಹೆಸರಿನಲ್ಲಿ ಆಕ್ರಮಣ ನಡೆಸುತ್ತಿದ್ದಾರೆ ಎಂದು ಖೇದ ವ್ಯಕ್ತಪಡಿಸಿದರು.

ಆನಂದ್ ತೇಲ್ತುಂಬ್ಧೆ ಮಾತನಾಡುತ್ತಾ ಪ್ಯಾಸಿಸಂ ಈಗಾಗಲೇ ಭಾರತದಲ್ಲಿ ಹಿಂದುತ್ವವಾದ ಪ್ರತಿಪಾದಿಸುವ ನರೇಂದ್ರ ಮೋದಿ ಆಡಳಿತದಲ್ಲಿ ಅಡಕವಾಗಿ ಬಿಟ್ಟಿದೆ.



ಸಂವಿಧಾನವನ್ನು ಒಪ್ಪದ ಘೋರ ಶಕ್ತಿಗಳು ಸ್ವಾತಂತ್ರ್ಯ, ಬ್ರಾತೃತ್ವ, ಸೋದರತ್ವಗಳನ್ನು ವಿನಾಶಗೊಳಿಸುವಲ್ಲಿ ಕಾರ್ಯನಿರತರಾಗಿದ್ದಾರೆ. ಸಮಾನತೆ ಮತ್ತು ಸಾಮಾಜಿಕ ನ್ಯಾಯ ಸಂವಿಧಾನದ ಅಡಿಪಾಯಗಳು, ಇವುಗಳನ್ನು ಸಡಿಲಗೊಳಿಸುವ ನಿಲುವು ಹಿಂದುತ್ವ ಪರಿಕಲ್ಪನೆಯದ್ದಾಗಿದೆ. ಭಾರತವು ಅಸಮಾನತೆಯಲ್ಲಿ, ಜಗತ್ತಿನಲ್ಲಿಯೇ ಎರಡನೆ ಸ್ಥಾನದಲ್ಲಿದೆ. ದಕ್ಷಿಣ ಆಫ್ರಿಕಾ ಮೊದಲನೆ ಸ್ಥಾನದಲ್ಲಿದೆ. ಅಲ್ಲಿ ಕರಿಯರ ಧಮನ, ಇಲ್ಲಿ ದಲಿತರ–ಅಲ್ಪಸಂಖ್ಯಾತರ ಧಮನ ಹೆಚ್ಚಾಗಿದೆ. ಕಾಂಗ್ರೆಸ್ ಗೆ ಇದೀಗ ಅಂಬೇಡ್ಕರ್ ಪುನಃ ನೆನಪಾಗಿದ್ದಾರೆ. ಇದೇ ಕಾಂಗ್ರೆಸ್ ಸ್ವಾತಂತ್ರ್ಯ ನಂತರ, ಸಂವಿಧಾನವನ್ನೂ ಕೊಟ್ಟಂತಹ ಅಂಬೇಡ್ಕರ್ ರವರಿಗೆ ಕೊಟ್ಟಂತ ಅಗೌರವ, ಮಾಡಿದ ಅವಮಾನ ಇಲ್ಲಿ ನೆರೆದಿರುವ ಯಾರು ಮರೆತಿಲ್ಲ. ದೇಶವಿಂದು ಫ್ಯಾಸಿಸ್ಟ್ ಶಕ್ತಿಗಳ ಕೈ ಹಿಡಿತದಲ್ಲಿ ಅಪಾಯಕ್ಕೆ ಸಿಲುಕಿದೆ. ಕಾಂಗ್ರೆಸ್ ಕೇವಲ ಶೇ. 13 ರಷ್ಟು ರಾಜ್ಯಗಳ ರಾಜಕೀಯದಲ್ಲಿ ಇಂದು ಆಡಳಿತ ನಡೆಸುತ್ತಿದೆ. ಆದರೆ ಬಿಜೆಪಿ ಶೇ.51 ರಷ್ಟು ರಾಜ್ಯಗಳನ್ನು ತನ್ನ ತೆಕ್ಕೆಗೆ ತೆ–ಗೆದುಕೊಂಡಿದೆ. ಅದಕ್ಕೆ ಕಾಂಗ್ರೆಸ್‌ನವರ ಆಡಳಿತದ ನೀತಿಗಳೇ ಕಾರಣವೆಂದರು.

ಭಾರತದ ಮಾರ್ಕ್ಸಿಸ್ಟ್‌ರು ಕೂಡ ಹಿಂದೆ ಅಂಬೇಡ್ಕರ್ ಬಗ್ಗೆ ಅವರ ವಿಚಾರಗಳ ಬಗ್ಗೆ ತಪ್ಪು ಮಾಡಿದ್ದಾರೆ. ಅದನ್ನು ಕಮ್ಯೂನಿಸ್ಟ್‌ರು ಒಪ್ಪಿಕೊಂಡು ಮುಂದಿನ ಕಾರ್ಯ ನಿರ್ವಹಿಸಬೇಕು. ಕಾರ್ಮಿಕರ ವರ್ಗ ಹೋರಾಟದೊಳಗೆ ಸಾಮಾಜಿಕ ಧಮನದ ವಿರುದ್ಧದ ಹೋರಾಟ ನೈಜವಾಗಿ ಸೇರ್ಪಡೆಗೊಳ್ಳಬೇಕು. ದಲಿತರ ಕುರಿತಂತೆ ಕಮ್ಯುನಿಸ್ಟ್‌ರ ಹೊಸ ಸ್ವರೂಪದ ಹೋರಾಟಗಳು, ಧಮನಕ್ಕೆ ತುತ್ತಾದ ದಲಿತರಲ್ಲಿ ವಿಶ್ವಾಸ ಮೂಡಿಸುವಂತಿರಬೇಕು, ಉತ್ಪಾದನಾ ಶಕ್ತಿಗಳು ಒಂದಾಗಬೇಕು. ಆರ್ಥಿಕ ಅಸಮಾನತೆಯ ವಿರುದ್ಧದ ಹೋರಾಟವು – ಸಾಮಾಜಿಕ ನ್ಯಾಯದ ದಿಕ್ಸೂಚಿಯಾಗಬೇಕು. ತೇಲ್ತುಂಬ್ದೆಯವರ ವಿಶ್ಲೇಷಣೆ ನೆರೆದಿದ್ದವರಲ್ಲಿ ಗಾಂಭೀರ್ಯ ತುಂಬಿತು.

ಭೂಒಡೆತನ ದಲಿತರಿಗೆ ದೊರಕದೆ ರಾಜಕೀಯ ಸಬಲೀಕರಣ

ಅಥವಾ ಸಾಮಾಜಿಕ ನ್ಯಾಯ ಮರೀಚಿಕೆ : ಜಿ.ವಿ.ಎಸ್.

ಪ್ರಮುಖವಾದ ಮತ್ತಷ್ಟು ಗೋಷ್ಠಿಗಳೆಂದರೆ, ‘ರಾಜಕೀಯ ಸಬಲೀಕರಣ ಮತ್ತು ಸಾಮಾಜಿಕ ನ್ಯಾಯ’ ಇದರಲ್ಲಿ ಸಿಪಿಐ(ಎಂ) ಪಕ್ಷದ ಮಾಜಿ ಶಾಸಕರಾದ ಜಿ.ವಿ. ಶ್ರೀರಾಮರೆಡ್ಡಿ ಮಾತನಾಡಿ, ಕೇಂದ್ರದಲ್ಲಿ ಅಧಿಕಾರದಲ್ಲಿರುವ ನರೇಂದ್ರ ಮೋದಿ ಸರ್ಕಾರದಿಂದ ದಲಿತರಿಗೆ ‘ಸಾಮಾಜಿಕ ನ್ಯಾಯ’ ಎಂದೆಂದಿಗೂ ಅಸಾಧ್ಯವೆಂದರು. ದೇಶದ ಒಟ್ಟು ಸಂಪತ್ತಿನಲ್ಲಿ ಶೇ 58 ರಷ್ಟು, ಕೇವಲ ಶೇ 1 ರಷ್ಟು, ದೊಡ್ಡ ಕುಳಗಳು ಹೊಂದಿವೆ. ರೈತರನ್ನು – ಅಂಬಾನಿಗಳೊಂದಿಗೆ ಹೋಲಿಸಲು ಸಾಧ್ಯವಿಲ್ಲ. ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಯಾವುದೇ ಕೊಡುಗೆ ನೀಡದ ಸಂಘ ಪರಿವಾರದವರಿಂದ, ಸಂವಿಧಾನದ ಆಶಯುಗಳನ್ನು ಸಂರಕ್ಷಿಸಲು ರಾಜಕೀಯ ಇಚ್ಛಾಶಕ್ತಿ ಕಿಂಚಿತ್ತು ಇಲ್ಲ, ದಲ್ಲಿತರಿಗೆ ಭೂಮಿ ಹಂಚಿಕೆಯಾಗಿ ಅದರ ಒಡೆತನ ದೊರಕದೆ, ರಾಜಕೀಯ ಸಬಲೀಕರಣ ಅಥವಾ ಸಾಮಾಜಿಕ ನ್ಯಾಯ ಮರೀಚಿಕೆಯಾಗಿರುತ್ತದೆ ಎಂದರು. ನವ–ಉದಾರವಾದ ನೀತಿಗಳು ಆರ್ಥಿಕ ಅಸಮಾನತೆಯನ್ನು ಹೆಚ್ಚು ಮಾಡಿದೆ. ಉದ್ಯೋಗದಲ್ಲಿರುವ ಮೀಸಲಾತಿಗೆ ಧಕ್ಕೆ ಬಂದೊದಗಿದೆ. ಆದ್ದ–ರಿಂದ ಅಂಬೇಡ್ಕರ್ ಕಂಡ ಸಮಾನತೆಯ ಕನಸನ್ನು ನನಸು ಮಾಡಲು ಬೃಹತ್ ಜನತಾ ಚಳುವಳಿಯ ಅಗತ್ಯತೆಯ ಬಗ್ಗೆ ತಿಳಿಸಿದರು.

ಒಟ್ಟಾರೆಯಾಗಿ ನಡೆದ 80 ಕ್ಕೂ ಹೆಚ್ಚು ಗೋಷ್ಠಿಗಳಲ್ಲಿ 300 ಕ್ಕೂ ಹೆಚ್ಚು ವಿದ್ವಾಂಸರು ಭಾಗವಹಿಸಿದ್ದರು. ಪ್ರಗತಿಪರ ಚಿಂತಕರಾದ ಲೋಲಾಕ್ಷ, ರುದ್ರಪ್ಪ ಹನಗನವಾಡಿ, ಟಿ. ವಿಜಯುಕುಮಾರ್, ಜಿ.ಎನ್.ನಾಗರಾಜ್, ಜಿ. ರಾಮಕೃಷ್ಣ, ರಚನಾ ಬಾಜಪ್ಯೆ, ರಂಜಾನ್ ದರ್ಗ, ಪ್ರದೀಪ್ ರಾವತ್, ಆಶಾಲತ, ನಿಡುಮಾಮುಡಿ ಸ್ವಾಮೀಜಿ, ಬಂಜೆಗೆರೆ ಜಯಪ್ರಕಾಶ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪ್ರೊ। ಜಿ. ಸಿದ್ದರಾಮಯ್ಯ, ಅರ್ಚನಾ ಸಿಂಗ್, ತೀಸ್ತಾ ಸೆಟಲ್ವಾಡ್, ವೆಲೆರಿಯನ್ ರೋಡ್ರಿಗುಸ್, ಮಾರ್ಟಿನ್ ಪುಚ್ಚಾಸ್, ದಲಿತ ಮುಖಂಡರು ಹೋರಾಟಗಾರರಾದ ವೆಂಕಟಸ್ವಾಮಿ, ಮಾವಳ್ಳಿ ಶಂಕರ್, ಮೋಹನ್‌ರಾಜು, ಮೂರ್ತಿ, ಮುನಿಸ್ವಾಮಿ, ಲಕ್ಷ್ಮಿನಾರಾಯಣ ನಾಗವಾರ, ಡಿ.ಜಿ. ಸಾಗರ, ಹಿಂದೂದರ ಹೊನ್ನಾವರ, ಬೇಜವಾಡ ವಿಲ್ಸನ್ ಇನ್ನಿತರರು ಭಾಗವಹಿಸಿದ್ದರು. ಮಹಿಳಾ ಹೋರಾಟಗಾರರು, ಲೇಖಕರಾದ ಕಮಲಾ ಹಂಪನ, ಕೆ.ಎಸ್. ವಿಮಲ, ಆಶಾಲತ, ಶೈಲಜಾ ಮೆನನ್, ಏಂಜಿಲಾ ಹರೀಶ್, ವಾಣಿ ಕಾಂತ, ಮೋನಾ ಕವಿಗಳಾದ ಎಲ್. ಹನುಮಂತಯ್ಯ, ಸಿದ್ದಲಿಂಗಯ್ಯ, ಕೋಟಿಗನಾ ಹಳ್ಳಿ ರಾಮಯ್ಯ, ವಡ್ಡಗೆರೆ ನಾಗರಾಜಯ್ಯ, ಯಲ್ಲಪ್ಪ, ನೇತ್ರಾವತಿ, ವಕೀಲರು, ನ್ಯಾಯವಾದಿಗಳು, ಇನ್ನಿತರರು ಭಾಗವಹಿಸಿದ್ದರು.

ಇವುಗಳ ಮಧ್ಯೆ ನಿವೃತ್ತ ನ್ಯಾಯದೀಶರಾದ ನಾಗಮೋಹನ್ ದಾಸ್, ಅಧ್ಯಕ್ಷತೆಯಲ್ಲಿ ನಡೆದ ಸಂವಿಧಾನಾತ್ಮಕ ಹಕ್ಕುಗಳು ಮತ್ತು ಆಡಳಿತದಲ್ಲಿ ಕಾನೂನು ಎಂಬ ಗೋಷ್ಠಿಯು ಹಲವರ ಗಮನಕ್ಕೆ ಬರಲಿಲ್ಲ. ಕೆಲವೇ ಕೆಲವು ಯುವ ವಕೀಲರು, ಕಾನೂನು ವಿದ್ಯಾರ್ಥಿಗಳೂ ಮಾತ್ರ ಭಾಗವಹಿಸಿದ್ದರು. ಆಂಧ್ರದ ಸುಕುಮಾರ್ ನಾರಾಯಣ್, ಅರವಿಂಧ್ ಹಾಗೂ ರೋಹಿತ್ ಡೆ ಮಾತನಾಡಿದರು. ರಾಜಕೀಯದಲ್ಲಿ ಕುಸಿಯುತ್ತಿರುವ ನೈತಿಕತೆಯ ಬಗ್ಗೆ ಮಾತನಾಡಿದ ಭಾಷಣಕಾರರು ರೋಹಿತ್ ವೆಮುಲ್ಲಾರ ಪ್ರಕರಣ, ಜೆ.ಎನ್.ಯು ಪ್ರಕರಣ ಹಾಗೂ ಊನ ದಲಿತರ ಪ್ರಕರಣ, ಉತ್ತರ ಪ್ರದೇಶ, ಗುಜರಾತ್, ಛತ್ತೀಸ್‌ಗರ್‌ನಲ್ಲಿ ನಡೆದ ಅಸಹಿಷ್ಣುತೆ ಪ್ರಕರಣಗಳು, ನರೇಂದ್ರ ದಾಬೋಲ್ಕರ್, ಪನ್ಸಾರೆ ಹಾಗೂ ಕಲಬುರಗಿ ಪ್ರಕರಣ ಹೀಗೆ ದೇಶದಲ್ಲಿ ಕಾನೂನು ಉಲಂಘನೆಗಳು ಕಾನೂನು ಪರಿಪಾಲಕರಿಂದಲೇ ನಡೆಯುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸಿದರು. ನಮ್ಮ ಸಂವಿಧಾನ ಭವ್ಯವಾದದ್ದು, ಇದರ ತಳಪಾಯಕ್ಕೆ ಆಪತ್ತು ಬರುತ್ತಿದೆ. ಪ್ರಜಾಪ್ರಭುತ್ವದ ಹೆಸರಿನಲ್ಲಿಯೇ ಇದರ ಆಶಯಗಳನ್ನು ಸರ್ವನಾಶ ಮಾಡಲಾಗುತ್ತಿದೆ ಎಂಬ ಹಲವು ಅಂಶಗಳು ಇಲ್ಲಿ ಚರ್ಚೆಯಾಯಿತು.

ಮುಖ್ಯ ಮಂತ್ರಿಗಳ ಜೊತೆ ಸಂವಾದ

ಬೆಂಗಳೂರು ಘೋಷಣೆ

ಪ್ರೊ. ರಾಜೇಂದ್ರ ಚೆನ್ನಿ ಯವರ ನೇತೃತ್ವದಲ್ಲಿ ನಡೆಸಿದ ಮುಖ್ಯಮಂತ್ರಿಗಳೊಂದಿಗಿನ ಸಂವಾದದಲ್ಲಿ ಕೆ.ಬಿ. ಸಿದ್ದಯ್ಯ, ಕೆ. ನೀಲಾ, ಡಿ. ಉಮಾಪತಿ, ಬೋಳುವಾರು ಮಹ್ಮದ್ ಕುಂಞ, ನಟರಾಜ್ ಹುಳಿಯಾರ್ ಹಾಗೂ ರೋಡ್ರಿಗ್ರಸ್ ಭಾಗವಹಿಸಿದ್ದರು. ದೇವದಾಸಿ ಅನಿಷ್ಟ ಪದ್ಧತಿಯ ನಿರ್ಮೂಲನೆಗೆ ಏನು ಕ್ರಮ ಕೈಗೊಂಡಿದ್ದೀರಿ? ಕಲಬುರಗಿ ಹಂತಕರನ್ನು ಇನ್ನು ಬಂಧಿಸಿಲ್ಲವೇಕೆ? ಜಾತಿ ವಿನಾಶ ತಡೆಗೆ ನಿಮ್ಮ ಸರ್ಕಾರ ಯಾವ ಕಾರ್ಯಕ್ರಮ ರೂಪಿಸುತ್ತಿದೆ? ಕನ್ನಡ ಶಿಕ್ಷಣ ಮಾಧ್ಯಮಗಳಿಗೆ ನಿಮ್ಮ ಪ್ರಯತ್ನಗಳೇನು? ಅಹಿಂದಕ್ಕೆ ಒಂದು ತಾತ್ವಿಕತೆಯ ಸ್ವರೂಪ ಏಕೆ ಬಂದಿಲ್ಲ? ದ.ಕ. ದಲ್ಲಿ ಮುಸ್ಲಿಂ ರಕ್ಷಣೆಗಾಗಿ ಬೇರೊಂದು ಪಕ್ಷ ಹುಡುಕುತ್ತಿದ್ದಾರೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು? ಹೀಗೆ ಹತ್ತು–

ಪುಟ 15 ಕ್ಕೆ

ಲೊಂಗ್‌ಯಾನ್ ಪ್ರದೇಶ ಚೀನಾದ ವ್ಯೂಹಾತ್ಮಕ ಕ್ರಾಂತಿಕಾರಿ ಕೇಂದ್ರವಾಗಿದೆ. ಚೀನಾದ ಆಂತರಿಕ ಯುದ್ಧದ ಸಂದರ್ಭದಲ್ಲಿ ಈ ಪ್ರದೇಶದಿಂದ ಸಾವಿರಾರು ಜನ ಪೀಪಲ್ಸ್ ಲಿಬರೇಷನ್ ಆರ್ಮಿ (PLA) ಲೊಂಗ್‌ಯಾನ್ ಪ್ರದೇಶದಿಂದ ಸೇರ್ಪಡೆಯಾಗಿದ್ದಾರೆ. ಮಾತ್ರವಲ್ಲದೆ ಒಂದೊಂದು ಕುಟುಂಬದಿಂದಲೂ ಕನಿಷ್ಟ ಒಬ್ಬರಂತೆ ತಮ್ಮ ಜೀವನವನ್ನು CPC ಗಾಗಿ ತ್ಯಾಗ ಮಾಡಿದ್ದಾರೆ. 86,000 ಮಂದಿಯಿಂದ ನಡೆದಿರುವ ಲಾಂಗ್ ಮಾರ್ಚಿನಲ್ಲಿ ಈ ಪ್ರದೇಶದಿಂದಲೇ 26,000 ಕ್ಕೂ ಮಿಕ್ಕಿ ಜನ ಭಾಗವಹಿಸಿದ್ದಾರೆ.

ಚೀನಾ ಭೇಟಿ ಭಾಗ–3

ಮಣ್ಣಿನ ಕಟ್ಟಡಗಳ ಲೊಂಗ್‌ಯಾನ್

ವಸಂತ ಆಚಾರಿ

ಲೊಂಗ್‌ಯಾನ್ ಸಿಟಿ ಪ್ರದೇಶವು 19,063 ಕಿ.ಮೀ. ವ್ಯಾಪ್ತಿಯನ್ನು ಹೊಂದಿದೆ. ಇದು ಪ್ಯೂಜಿಯಾನ್ ಪ್ರಾಂತ್ಯದ ಸಮತಟ್ಟಾದ ಪ್ರದೇಶದ ನಗರವಾಗಿದೆ. ಈ ನಗರವು ಜಿಯೋಲಾಂಗ್ ಮತ್ತು ಟಿಂಗ್ ನದಿ ದಡದ ಮೇಲ್ ಪ್ರದೇಶದಲ್ಲಿ ಇದೆ. ಲೊಂಗ್‌ಯಾನ್ ಪ್ರದೇಶದ ಒಟ್ಟು ಜನ ಸಂಖ್ಯೆ 26.1 ಲಕ್ಷ. 77.9% ಪ್ರದೇಶವು ಕಾಡಿನಿಂದ ಕೂಡಿರುವುದು ವಿಶೇಷವಾಗಿದೆ. ಅಂದರೆ ಸ್ವಾಭಾವಿಕವಾಗಿ ಕಾಡು ಬೆಳೆಯಲು ಚೀನಾ ಸರಕಾರ ನೀಡುತ್ತಿರುವ ಆದ್ಯತೆಯನ್ನು ಇಲ್ಲಿ ಕಾಣಬಹುದಾಗಿದೆ. ಇಲ್ಲಿಯ ಹವಾಗುಣ–ಮುಂಗಾರು ಮಳೆ, ಬೇಸಿಗೆ ಕಾಲ ಮತ್ತು ಚಳಿಗಾಲ ಕಾಲಕ್ಕೆ ಅನುಗುಣವಾಗಿ ಇಲ್ಲಿಯ ಜನತೆಗೆ ಲಭ್ಯವಿರುವುದು ವಿಶೇಷತೆ.

ಕ್ರಿ.ಪೂ. 736 ರಲ್ಲಿ ಟಾಂಗ್ ರಾಜ ಮನೆತನದ ಟಿಂಗ್‌ಜೊಹೊರವರು ಪೂರ್ವ ಪ್ಯೂಜಿಯನ್ ಅಥವಾ ಮಿಂಕ್ಸಿಯನ್ನು ಸ್ಥಾಪಿಸಿದರು. ಈ ಪ್ರದೇಶವನ್ನು ನಂತರದ ಅವಧಿಗೆ ಆಡಳಿತಾತ್ಮಕ ಕ್ರಮಗಳಿಗಾಗಿ ಚಾಂಗ್ಟಿಂಗ್, ಹಾಂಗ್ಲೈನ್ ಮತ್ತು ಕ್ಸಿನ್‌ಲ್ಲೋ ಎಂಬ ವಿಭಾಗಗಳಾಗಿ ಪರಿವರ್ತಿಸಲಾಯಿತು. 6 ವರ್ಷಗಳ ನಂತರ ಕ್ಸಿನ್‌ಲೋ ವಿಭಾಗವನ್ನು ಲೊಂಗ್‌ಯಾನ್ ಎಂದು ನಾಮಕರಣ ಮಾಡಲಾಯಿತು. ಇಲ್ಲಿನ ಕಾವೇರ್ನ್ ಎಂಬ ಪ್ರದೇಶವು ಸುಂದರ ಪ್ರವಾಸಿ ಕೇಂದ್ರವಾಗಿದೆ.

ಲೊಂಗ್‌ಯಾನ್ ಪ್ರದೇಶ ಚೀನಾದ ವ್ಯೂಹಾತ್ಮಕ ಕ್ರಾಂತಿಕಾರಿ ಕೇಂದ್ರವಾಗಿದೆ. ಚೀನಾದ ಆಂತರಿಕ ಯುದ್ಧದ ಸಂದರ್ಭದಲ್ಲಿ ಈ ಪ್ರದೇಶದಿಂದ ಸಾವಿರಾರು ಜನ ಪೀಪಲ್ಸ್ ಲಿಬರೇಷನ್ ಆರ್ಮಿ (PLA) ಲೊಂಗ್‌ಯಾನ್ ಪ್ರದೇಶದಿಂದ ಸೇರ್ಪಡೆಯಾಗಿದ್ದಾರೆ. ಮಾತ್ರವಲ್ಲದೆ ಒಂದೊಂದು ಕುಟುಂಬದಿಂದಲೂ ಕನಿಷ್ಟ ಒಬ್ಬರಂತೆ ತಮ್ಮ ಜೀವನವನ್ನು CPC ಗಾಗಿ ತ್ಯಾಗ ಮಾಡಿದ್ದಾರೆ. 86,000 ಮಂದಿಯಿಂದ ನಡೆದಿರುವ ಲಾಂಗ್ ಮಾರ್ಚಿನಲ್ಲಿ ಈ ಪ್ರದೇಶದಿಂದಲೇ 26,000 ಕ್ಕೂ ಮಿಕ್ಕಿ ಜನ ಭಾಗವಹಿಸಿದ್ದಾರೆ. ಮಾತ್ರವಲ್ಲದೆ, 1955 ಮತ್ತು 1968 ರಲ್ಲಿ 68 ಮಂದಿ ಲಾಂಗ್‌ಯಾರ್ ಪ್ರದೇಶದಿಂದಲೇ ಬ್ರಿಗೇಡಿಯರ್ ಜನರಲ್ಸ್ ಆಗಿ ಗೌರವ ಪಡೆದಿದ್ದಾರೆ. ಇದರಿಂದಾಗಿ ಒಟ್ಟು 82% ಮಂದಿ ಪ್ಯೂಜಿಯನ್ ಪ್ರೊವಿನ್ಸ್‌ನಿಂದಲೇ ಈ ಅವಧಿಯಲ್ಲಿ ಜನರಲ್ಸ್ ಆಗಿದ್ದರೂ ಎಂದು ಗುರುತಿಸಲಾಗಿದ್ದು, ಆ ಕಾರಣಕ್ಕಾಗಿಯೇ ಲಾಂಗ್‌ಯಾನ್ ಪ್ರದೇಶವನ್ನು "ಜನರಲ್ಸ್‌ಗಳ ಮನೆ" (The home of Generals) ಎಂದು ಕರೆಯಲಾಗುತ್ತದೆ.

ಮಣ್ಣಿನಿಂದ ಮಾಡಿದ ಕಟ್ಟಡಗಳು (ಯಾಂಗ್‌ಡಿಂಗ್ ಥೊಲೋ)

ಯಾಂಗ್‌ಡಿಂಗ್ ಥೊಲೋ ಅಂದರೆ ಮಣ್ಣಿನಿಂದ ಮಾಡಿದ ಕಟ್ಟಡಗಳು ದಕ್ಷಿಣ ಲೊಂಗ್‌ಯಾನ್ ಸಿಟಿಯಲ್ಲಿ ವ್ಯಾಪಕವಾಗಿ ಕಂಡುಬರುವ ಕಟ್ಟಡಗಳು. ಹಕ್ಕಾ ಮನೆ ನಿವೇಶನವನ್ನು ಹೊಂದಿದ್ದು ಪ್ರಾಚೀನ ಕಾಲದ ವಾಸ್ತುಶಿಲ್ಪ ಕಲೆಯನ್ನು ಇಲ್ಲಿ ಕಾಣಬಹುದಾಗಿದೆ. ಇಲ್ಲಿನ ವಾಸ್ತು ಶಿಲ್ಪವು ಪ್ರಾಚೀನ ಇತಿಹಾಸ, ವಿಶಾಲ ಪ್ರಮಾಣದಲ್ಲಿ ಅದರದ್ದೇ ಆದ ಮಾದರಿಯಲ್ಲಿ ಗುರುತಿಸಬಹುದಾದ ಆಕೃತಿಯಲ್ಲಿ ಜಗತ್ಪ್ರಸಿದ್ಧಿಯನ್ನು ಪಡೆದಿದೆ. ಈ ಮಣ್ಣಿನ ಕಟ್ಟಡಗಳನ್ನು ಕೆಳಹಂತದಲ್ಲಿ ನೆಲಕ್ಕೆ ಹೊಂದಿಕೊಂಡು ದೊಡ್ಡ ದೊಡ್ಡ ಪ್ರಮಾಣದ ಮರಗಳಿಂದ ತಯಾರಿಸಲಾಗಿದೆ. ಇದರ ಗೋಡೆಗಳು ಸುಣ್ಣ, ಮಣ್ಣು ಮತ್ತು ಅಕ್ಕಿಯ ಅಂಟಾದ ನೀರು, ಕಂದು ಬಣ್ಣದ ಸಕ್ಕರೆ, ಬಿದಿರು ಚಿಪ್ಸ್ ಹಾಗೂ ಮರದ ಹಲಗೆಗಳನ್ನು ಸೇರಿಸಿ ಗೋಡೆಗಳನ್ನು ಕಟ್ಟಲಾಗಿದೆ. ಇದು ಮಳೆ, ಬಿಸಿಲುಗಳಿಗೆ ಯಾವುದೇ ರೀತಿಯಲ್ಲಿ ಧಕ್ಕೆಯಾಗದಿರುವುದು ಇದರ ವಿಶೇಷತೆ. ಈ ಮಣ್ಣಿನ ಕಟ್ಟಡಗಳಲ್ಲಿ ಎರಡು ವಿಧಗಳಿವೆ. ವೃತ್ತಾಕಾರದ ಮಣ್ಣಿನ ಕಟ್ಟಡ ಮತ್ತು ಚೌಕಾಕಾರದ ಮಣ್ಣಿನ ಕಟ್ಟಡಗಳು. ಈ ಪ್ರಾಂತ್ಯದಲ್ಲಿ ಒಟ್ಟು 360 ವೃತ್ತಾಕಾರದ ಹಾಗೂ 4000ಕ್ಕೂ ಮಿಕ್ಕಿದ ಚೌಕಾಕಾರದ ಮಣ್ಣಿನ ಕಟ್ಟಡಗಳಿವೆ.

ಈ ಕಟ್ಟಡಗಳು ಯಾವ ರೀತಿ ಇದೆ ಎಂಬುದನ್ನು ಇಲ್ಲಿ ತಿಳಿಸಲು ಇಚ್ಛಿಸುತ್ತೇನೆ. ವೃತ್ತಾಕಾರದ ಮಣ್ಣಿನ ಕಟ್ಟಡಗಳು ಹಕ್ಕ ಕುಟುಂಬಸ್ಥರು ಇಲ್ಲಿ ವಾಸಿಸುವ ಸ್ಥಳವಾಗಿತ್ತು. ಇದು ಯಾವಾಗಲೂ 2–3 ರಿಂಗ್‌ನ ರೀತಿ ಮಹಡಿಗಳು ಇರುತ್ತದೆ. ಹೊರಾಂಗಣದ ರಿಂಗ್ 10 ಮೀಟರ್‌ಕ್ಕಿಂತ ಜಾಸ್ತಿ ಎತ್ತರವಾಗಿರುತ್ತದೆ. 3–4 ಮಹಡಿಗಳಲ್ಲಿ 100ಕ್ಕೂ ಮಿಕ್ಕಿ ಕೊಠಡಿಗಳು, ಪ್ರಥಮ ಮಹಡಿಯಲ್ಲಿ ಅಡುಗೆ ಕೊಠಡಿ, ದಾಸ್ತಾನು ಕೊಠಡಿ ಮತ್ತು ಬೆಡ್‌ರೂಮ್‌ಗಳು ಮೂರು ಮತ್ತು ನಾಲ್ಕನೇ ಮಹಡಿಗಳಲ್ಲಿ ಇವೆ. ಎರಡನೇ ಮಹಡಿಯ ಮಧ್ಯದ 30 ರಿಂದ 50 ಕೊಠಡಿಗಳು ಅತಿಥಿಗಳಿಗಾಗಿ ಕಾದಿರಿಸಲಾಗಿದೆ. ಮಧ್ಯದ ರಿಂಗ್‌ನಲ್ಲಿ ದೊಡ್ಡದಾದ ಹಾಲ್ ಇರುತ್ತದೆ. ಈ ಹಾಲ್‌ನಲ್ಲಿ ಹಬ್ಬ ಹಾಗೂ ಮದುವೆ ಸಮಾರಂಭಗಳು ಇಲ್ಲಿ ನಡೆಯುತ್ತದೆ. ಬಾವಿ, ಸ್ನಾನ ಗೃಹ ಹಾಗೂ ಮಿಲ್ಸ್‌ಗಳು ಈ ಕಟ್ಟಡದ ಒಳಗಡೆ ಇವೆ. ಈ ಮಣ್ಣಿನ ಕಟ್ಟಡಗಳು ಯಾವುದೇ ರೀತಿಯಲ್ಲಿ ಕಬ್ಬಿಣ ಅಥವಾ ಕಾಂಕ್ರೀಟ್ ಉಪಯೋಗಿಸದೇ ಬರೀ ಅಂಟಾದ ಮಣ್ಣಿನಿಂದ ರಚಿಸಲಾಗಿದೆ. ಇದರ ಹೊರಾಂಗಣದ ಗೋಡೆಯು 3 ಮೀಟರ್ ದಪ್ಪದಲ್ಲಿ ಇದೆ. ಇದರ ಮೇಲೆ ಒಂದು ದೊಡ್ಡ ಟ್ರಕ್ ಹರಿದರೂ ಏನೂ ಆಗುವುದಿಲ್ಲವೆಂದು ಅವರು ವಿವರಿಸುತ್ತಾರೆ. ಇಂತಹ ಕಟ್ಟಡಗಳನ್ನು ಪ್ರವಾಸಿ ಕೇಂದ್ರವಾಗಿ ವೀಕ್ಷಣೆಗೆ



ಇರಿಸಲಾಗಿದೆ. ಇದೊಂದು ಅದ್ಭುತ ಸಂಗತಿಯೂ ಆಗಿದೆ ಎನ್ನಬಹುದು. ಈ ರೀತಿಯ ಕಟ್ಟಡಗಳ ಒಳಗಡೆ ಇರುವ ವಿಶೇಷತೆಯನ್ನು ಇಲ್ಲಿ ವೀಕ್ಷಿಸಬಹುದಾಗಿದೆ. 1986ರಲ್ಲಿ ಚೀನಾ ದೇಶದ ಅಂಚೆ ಮತ್ತು ಸಂಪರ್ಕ ಸಚಿವಾಲಯದಿಂದ ಈ ರೀತಿಯ ಕಟ್ಟಡಗಳ ಚಿತ್ರವನ್ನು ಅಂಚೆ ಚೀಟಿಗಳಾಗಿ ಉಪಯೋಗಿಸಲಾಗಿತ್ತು.

ಯಾಂಗ್‌ಡಿಂಗ್ ಥೊಲೋ ಅಥವಾ ಮಣ್ಣಿನ ಗೋಡೆಗಳು ಗೊವಾಪಿ ಟೌನ್‌ಶಿಫ್ ಗ್ರಾಮದ ಶಾಂವ್‌ಯಾಂಗ್‌ನಲ್ಲಿ ಇಂಜಿಂಗ್ ಕಟ್ಟಡಗಳನ್ನು ಅಳವಡಿಸಲಾಗಿದೆ. ಇದನ್ನು 1851 ರಲ್ಲಿ ಕಟ್ಟಿಸಲಾಗಿದೆ. 17 ಮೀಟರ್ ಎತ್ತರದ ಗೋಡೆಗಳನ್ನು ಹೊಂದಿದ್ದು ಯಾಂಗ್‌ಡಿಂಗ್ ಪ್ರಾಂತ್ಯದ ದೊಡ್ಡ ಕಟ್ಟಡಗಳಾಗಿವೆ. ಮಣ್ಣಿನ ಕಟ್ಟಡಗಳು ಪ್ಯೂಜಿಯನ್ ಕಟ್ಟಡಗಳಲ್ಲಿ ಪ್ರಮುಖ ಅವಿಭಾಜ್ಯ ಅಂಗಗಳಾಗಿ ಈ ಕಟ್ಟಡಗಳು ಪರಿವರ್ತನೆಗೊಂಡಿವೆ ಮತ್ತು ವಿಶ್ವದ ಸ್ವಾಭಾವಿಕ ಮತ್ತು ಸಾಂಸ್ಕೃತಿಕ ಚಾರಿತ್ರಿಕ ಸ್ಮಾರಕಗಳಾಗಿ ವೀಕ್ಷಣೆಗೆ ಲಭ್ಯವಾಗಿವೆ. 2008 ರಲ್ಲಿ ವಿಶ್ವದ ಹೆರಿಟೇಜ್ ಸೈಟ್‌ಗಳಲ್ಲಿ ಪ್ಯೂಜಿಯನ್ ಕಟ್ಟಡಗಳು ಗುರುತಿಸಿಕೊಂಡಿವೆ. ಈ ಬಗ್ಗೆ ನಮಗೆ ಸ್ಥಳೀಯ ಶಾಲೆಯಲ್ಲಿ ಪಾಠ ಮಾಡುತ್ತಿರುವ ಯುವ ಮಹಿಳೆ ಗೈಡ್ ಆಗಿ ವಿವರಿಸಿದರು. ಕೊನೆಗೆ ಆಕೆ ತಮ್ಮ ಮನೆಯಲ್ಲಿಯೇ ಕಾಡಿನಿಂದ ಲಭ್ಯವಾಗುವ ಎಲೆಗಳಿಂದ ತಯಾರಿಸಿದ ಚಹಾದ ವಿವಿಧ ರೀತಿಯ ಆಕಾರಗಳನ್ನು ಬಿಸಿಬಿಸಿಯಾಗಿ ನೀಡಿದರು. ಕೆಲವು ಸಂಗಾತಿಗಳು ವಿಶೇಷ ಮಾದರಿಯ ಚಹಾದ ಎಲೆಯ ಪೊಟ್ಟಣಗಳನ್ನು ಕೊಂಡುಕೊಂಡರು. ನಂತರ ನಮ್ಮನ್ನು ಇಲ್ಲಿ ನೋಡಲೇ ಬೇಕಾದ ಸ್ಥಳಕ್ಕೆ ಕೊಂಡುಹೋದರು. ಗುಟಿಯಾನ್ ಕಾಂಗ್ರೆಸ್ ಅಥವಾ ಗುಟಿಯಾನ್ ಸಭೆ. ಇದನ್ನು 1848 ರಲ್ಲಿ ಕ್ವಿಂಗ್ ಮನೆತನದವರು ಕಟ್ಟಿಸಲಾಗಿದ್ದು ಶಾಂಘೌಯಾಂಗ್‌ನ ಗುಟಯಾನ್ ಟೌನ್‌ಶಿಫ್‌ನ ಕ್ಸಿಬಾಯಿ ಹಿಂದೆ ಇದು ಲಾಯೋ ಕ್ಲಾನ್‌ನ ರಾಜ ಮನೆತನ ಸೇರುವ ಹಾಲ್ ಆಗಿ–ತ್ತು. ಆದರೆ ಅದನ್ನು "ಶಾಂಘೌಯಾಂಗ್ ಪ್ರಾಥಮಿಕ ಶಾಲೆ"ಯಾಗಿ ಪರಿವರ್ತಿಸಲಾಗಿದೆ. ಕೆಂಪು ಸೇನೆಯ ಮಾರ್ಚ್ ಈ ಪ್ರದೇಶದಲ್ಲಿ ಹಾದು ಹೋಗುವಾಗ ಈ ಗುಟಿಯಾನ್‌ನಲ್ಲಿ ವಾಸ್ತವ್ಯ ಹೂಡಿತ್ತು ಎಂದು ವಿವರಿಸಲಾಗಿದೆ. ಇದು ಇಟ್ಟಿಗೆ ಮತ್ತು ಮರದಿಂದ ರಚಿಸಲಾಗಿರುವ ಒಂದು ಮಹಡಿಯ ದೊಡ್ಡಮನೆ. 826 ಸ್ಟಾರ್ ಮೀಟರ್ ಸುತ್ತಳತೆಯನ್ನು ಹೊಂದಿದ್ದು ಎರಡು ಹಾಲ್ ಮತ್ತು ಎರಡು ಬದಿಯಲ್ಲಿ ಮುಕ್ತವಾಗಿ ಕಾಣುವ ಕೊಠಡಿಯನ್ನು ಹೊಂದಿದೆ. ಹಿಂದುಗಡೆಯ ಹಾಲ್‌ನಲ್ಲಿ 1929 ಇಸವಿಯ ಡಿಸೆಂಬರ್‌ನಲ್ಲಿ ಹಿರಿಯ ನಾಗರೀಕರು ಪಾಲ್ಗೊಳುತ್ತಿರುವ ತರಗತಿ ಕೊಠಡಿ ಇದೆ. 1929 ರಲ್ಲಿ ಕಾಂ. ಮಾವೋತ್ಸೋ ತುಂಗ್ ರವರ ಉಪಸ್ಥಿತಿಯಲ್ಲಿ ಕೆಂಪು ಸೇನೆಯ 4ನೇ ತುಕಡಿಯು 9ನೇ ಪ್ರತಿನಿಧಿ ಅಧಿವೇಶನವನ್ನು ನಡೆಸಿ ಚಾರಿತ್ರಿಕ ನಿರ್ಣಯವೊಂದನ್ನು ಇಲ್ಲಿ ಅಂಗೀಕರಿಸಲಾಗಿದೆ. ಚೆನ್ ಈ ಯವರು ಅಧ್ಯಕ್ಷತೆ ವಹಿಸಿದ್ದ ಮಾರನೇ ದಿನದ ಸಭೆಯಲ್ಲಿ ಕಾಂ॥ ಮಾವೋತ್ಸೆತುಂಗ್ ರವರು ರಾಜಕೀಯ ನಿರ್ಣಯದ ವರದಿಯನ್ನು ಇಲ್ಲಿ ಮುಂದಿಟ್ಟರು. ಚೀನಾದ ಕಮ್ಯೂನಿಷ್ಟ್ ಪಾರ್ಟಿ ಮತ್ತು ಕೆಂಪು ಸೇನೆಯನ್ನು ಕಟ್ಟುವಲ್ಲಿ ಈ ಗುಟಿಯಾನ್ ಸಭೆಯು ಚಾರಿತ್ರಿಕ ದಾಖಲೆಯಾಗಿದೆ. ಈ ಸಭೆಯಲ್ಲಿ ಈ ಚಾರಿತ್ರಿಕ ನಿರ್ಣಯವನ್ನು ಅಂಗೀಕರಿಸಿದ್ದು ಕೆಂಪು ಸೇನೆಯನ್ನು ಕಟ್ಟಿ ಬೆಳೆಸುವಲ್ಲಿ ದೊಡ್ಡ ಕಾರ್ಯಕ್ರಮವಾಗಿ ಪರಿವರ್ತನೆಗೊಂಡಿವೆ.

ಈಗ ಈ ಸಭಾಂಗಣವು (Meeting Hall) ಪ್ರಜಾ ಪ್ರತಿನಿಧಿಗಳು ಆಸೀನರಾಗುವ ಕೊಠಡಿ, ಸಭೆ ನಡೆಯುವ ಸ್ಥಳ, ವಿಶ್ರಾಂತಿ ಕೊಠಡಿ, ಘೋಷಣೆಗಳು, ಪಕ್ಷದ ಬಾವುಟ, ಗೋಡೆಗಡಿಯಾರ, ಕಾರ್ಲ್ಸ್‌ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರ ಪೋಟೋ, ಎಡಬದಿಯ ಕೊಠಡಿ ಕಾಂ॥ ಮಾವೋತ್ಸೆ ತುಂಗ್‌ರವರು ಆಸೀನರಾಗುವ ಆಫೀಸ್ ರೂಂ ಹಾಗೂ ಪ್ರತಿನಿಧಿಗಳು, ನಾಯಕರು ತಾವುಗಳು ಸ್ವಯಂ ಆಗಿ ನೀರು ಬಿಸಿ ಮಾಡಿ ಸ್ನಾನ ಮಾಡುವ ಕೊಠಡಿಗಳನ್ನು ಹಾಗೂ ಚಲಿಗಾಲದಲ್ಲಿ ಮೈ ಬಿಸಿಮಾಡಲು ಬೆಂಕಿ ಹಾಕಲು ವ್ಯವಸ್ಥೆಯನ್ನು ಮಾಡಿರುವುದನ್ನು ಕಾಣಬಹುದಾಗಿದೆ. ಪ್ರವಾಸಿಗರು ಹಾಗೂ ಕಮ್ಯೂನಿಷ್ಠ ಪಕ್ಷದ ಕಾರ್ಯಕರ್ತರಿಗೆ ವೀಕ್ಷಣೆಗೆ ಬಂದಾಗ ವೀಕ್ಷಿಸಲು ಸಾಧ್ಯವಾಗುವಂತೆ ಇರಿಸಲಾಗಿದೆ. ಸಭಾಂಗಣದ ಹೊರಗಡೆಯು ಬಯಲಿನಲ್ಲಿ ಬಲ ಭಾಗದಲ್ಲಿ ರೆಡ್ ಆರ್ಮಿ ಪಥ ಸಂಚಲನ ಮಾಡುತ್ತಿದ್ದ ಸ್ಥಳವನ್ನು ಹಾಗೆನೇ ವಿಕ್ಷಣೆಗಾಗಿ ವ್ಯವಸ್ಥೆ ಮಾಡಲಾಗಿದೆ. ಸಭಾಂಗಣದ ಹೊರಗಡೆ ಎಡಭಾಗದಲ್ಲಿ ತಾವರೆಕೊಳ ಹಾಗೂ ಬಾವಿ ಇದೆ. ಇದು ಅಂದಿನ ಚಾರಿತ್ರಿಕ ಸತ್ಯದ ವಿಚಾರವನ್ನು ಇಂದಿನ ಜನತೆಗೆ ನೈಜವಾಗಿ ತೋರಿಸುತ್ತದೆ. ಕ್ರಾಂತಿಕಾರಿಗಳಿಗೆ ಇದೊಂದು ಸ್ಪೂರ್ತಿಯ ಸೆಲೆಯಾಗಿದೆ. ಚಾರಿತ್ರಿಕ ಘಟನೆಗಳ ಬಗ್ಗೆ ದೊಡ್ಡದಾದ ಬೋರ್ಡಿನಲ್ಲಿ ಬರೆಯಲಾಗಿದೆ. ಇದು ಇಂದಿಗೂ ವಿಶ್ವದ ಎಲ್ಲಾ ವೀಕ್ಷಕರಿಗೆ ಮಾಹಿತಿಯನ್ನು ನೀಡುತ್ತದೆ. ಈ ಹಾಲ್‌ನ ಹಿಂದುಗಡೆ ಬೃಹತ್ ಆದ ಕಾಡನ್ನು ಬೆಳೆಸಲಾಗಿದೆ. ಅದರ ಎದುರುಗಡೆ ಪ್ರದರ್ಶನ ಹಾಲ್ ಇದೆ. 1960 ರಲ್ಲಿ ರಚಿಸಲಾದ ಮೀಟಿಂಗ್ ಹಾಲ್ ಇದೆ. ಇದು 1974 ರಲ್ಲಿ ಉದ್ಘಾಟನೆಗೊಂಡಿದೆ. ಈ ಪ್ರದೇಶವು ಒಟ್ಟು 38,151.81 ಚದರ ಮೀಟರ್ ವ್ಯಾಪ್ತಿ ವಿಸ್ತೀರ್ಣವನ್ನು ಹೊಂದಿದೆ. ಪಶ್ಚಿಮ ಪ್ಯೂಜಿಯಾನ್ ಪ್ರದೇಶದಲ್ಲಿ ನಡೆದ ಕ್ರಾಂತಿಕಾರಿ ಹೋರಾಟದ ಸಂದರ್ಭವನ್ನು ಹಾಗೆನೇ ನೆನಪಿಸುತ್ತಿದೆ. ಇದಕ್ಕೆ ಜನತೆ "ಪ್ಯೂಜಿಯನ್ ಸಭೆಯ ನಿರ್ಣಯಗಳು" ಎಂದು ಕರೆಯುತ್ತಾರೆ. ಇಲ್ಲಿನ ಗೋಡೆಗಳಲ್ಲಿ ಹಾಗೆನೇ ಕೆತ್ತನೆ ಮಾಡಲಾಗಿದೆ. ಈ ಪ್ರದೇಶವನ್ನು ಅಂದಿನ ಕ್ರಾಂತಿಕಾರಿ ಹೋರಾಟ ಚರಿತ್ರೆಯಾಗಿ ಚೀನಾ ಸರ್ಕಾರ ಒಂದು ಅಗತ್ಯ ಸಾಂಸ್ಕೃತಿಕ ಸ್ಮಾರಕವಾಗಿ ರಕ್ಷಿಸುತ್ತಿದೆ.

ಜನಶಕ್ತಿ ಉತ್ಸವ ಮತ್ತು ಪ್ರಸಾರಾಂದೋಲನ 2017

ಕಳೆದ 3 ವರ್ಷಗಳಂತೆ ಈ ವರ್ಷವೂ "ಜನಶಕ್ತಿ ಉತ್ಸವ"ವನ್ನು ಹಮ್ಮಿಕೊಳ್ಳಲಾಗುತ್ತಿದೆ. ಜನಶಕ್ತಿ ಪತ್ರಿಕೆಯನ್ನು ದುಡಿಯುವ ಜನರ ಚಳುವಳಿಯ ಒಳಗೂ/ಹೊರಗೂ ಇನ್ನಷ್ಟು ಹೆಚ್ಚಿನ ಜನವಿಭಾಗಗಳಿಗೆ ಪರಿಚಯಿಸುವುದು, ವ್ಯಾಪಕವಾಗಿ ತೆಗೆದುಕೊಂಡು ಹೋಗುವುದು, ಜನಪ್ರಿಯಗೊಳಿಸುವುದು 'ಜನಶಕ್ತಿ ಉತ್ಸವ'ದ ಪ್ರಮುಖ ಗುರಿ. ಈ ವರ್ಷ ಈ ಕೆಳಗಿನ ಕೆಲವು ಹೊಸ ಅಂಶಗಳನ್ನು ಒಳಗೊಂಡ "ಜನಶಕ್ತಿ ಉತ್ಸವ ಮತ್ತು ಪ್ರಚಾರಾಂದೋಲನ 2017" ಜುಲೈ–ಅಗಸ್ಟ್ ನಲ್ಲಿ ನಡೆಯಲಿದೆ.

ತುಮಕೂರು, ಉಡುಪಿ, ಕೋಲಾರ, ಗುಲ್ಬರ್ಗ ಗಳಲ್ಲಿ ಜನಶಕ್ತಿ ಜಿಲ್ಲಾ ಉತ್ಸವಗಳು ಅಗಸ್ಟ್ ಮೊದಲ ವಾರದಲ್ಲಿ ನಡೆಯಲಿವೆ.

- "ಜನಶಕ್ತಿ ಉತ್ಸವ 2017"ರ ಒಟ್ಟಾರೆ ಥೀಮ್ "ಇಂಡಿಯಾ 70 : ಸಾಧನೆಗಳು, ಸವಾಲುಗಳು"
- ಅಗಸ್ಟ್ 19 (ಶನಿವಾರ) ರಂದು ಬೆಂಗಳೂರಲ್ಲಿ "ಜನಶಕ್ತಿ ಉತ್ಸವ 2017" ಉತ್ಸವ ನಡೆಯಲಿದೆ. ಕಾ. ಬೃಂದಾ ಕಾರಟ್ ಅವರು ಉತ್ಸವವನ್ನು ಉದ್ಘಾಟಿಸಲಿದ್ದಾರೆ.
- ಉತ್ಸವದಲ್ಲಿ ಮೊದಲ ಅರ್ಧದಿನ ಜನಶಕ್ತಿ ಬಳಗದ ಸಮಾವೇಶ ಹಾಗೂ ಎರಡನೇ ಅರ್ಧದಿನ ವ್ಯಾಪಕವಾಗಿ ಮಾಧ್ಯಮ/ಜನತೆಯ ಗಮನ ಸೆಳೆಯುವ ವಿಚಾರ ಸಂಕಿರಣ/ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಳ್ಳಲಿದೆ. ಜನಶಕ್ತಿ ವಿಶೇಷಾಂಕ ಬಿಡುಗಡೆನೂ ಮಾಡಬೇಕು. ಜನಶಕ್ತಿ ವಿಶೇಷಾಂಕದ ಥೀಮ್ ಸಹ "ಇಂಡಿ–ಯಾ 70 : ಸಾಧನೆಗಳು, ಸವಾಲುಗಳು" ಕಾರ್ಯಾಗಾರ ಸಂಘಟಿಸಬೇಕು.
- ಜನಶಕ್ತಿ ಪತ್ರಿಕೆಯ ಪ್ರಸಾರ ಮತ್ತು ಫೇಸ್ ಬುಕ್ ಪುಟದ "ಲೈಕ್"ಗಳನ್ನು ವನ್ನು ಇಮ್ಮಡಿಯಷ್ಟು ಹೆಚ್ಚಿಸುವ ಗುರಿ ಇಟ್ಟುಕೊಳ್ಳಲಾಗಿದೆ
- ಜಿಲ್ಲಾ ಮಟ್ಟದ ಜನಶಕ್ತಿ ಉತ್ಸವಗಳ ಭಾಗವಾಗಿ ಉತ್ಸವ ಥೀಮ್ ನ ಒಂದು ಆಯಾಮದ ಸುತ್ತ ಒಂದು ವಿಶೇಷ ಉಪನ್ಯಾಸ/ಸಂವಾದ, ಓದುಗರ ವೇದಿಕೆ, ಜನಶಕ್ತಿ ಬಳಗದ ಸಮಾವೇಶ, ಪ್ರಸಾರಾಂದೋಲನದ ಉದ್ಘಾಟನೆ ಇರುತ್ತದೆ.
- ಜಿಲ್ಲಾ ಮಟ್ಟದ ಜನಶಕ್ತಿ ಉತ್ಸವ, ಬಳಗದ ಸಮಾವೇಶದಿಂದ ಆರಂಭಿಸಿ ಎರಡು ವಾರಗಳ ಕಾಲ ಜಿಲ್ಲಾ ಮಟ್ಟದ ಪ್ರಸಾರಾಂದೋಲನ ನಡೆಸಲಾಗುತ್ತದೆ
- ಇನ್ನಷ್ಟು ವ್ಯಾಪಕವಾಗಿ ಪಕ್ಷದ ಮತ್ತು ನಮ್ಮ ಚಳುವಳಿಯ ಹೊರಗಿರುವ ಎಡ/ಪ್ರಜಾಸತ್ತಾತ್ಮಕ ಬುದ್ಧಿಜೀವಿಗಳು ಚಳುವಳಿಕಾರರನ್ನು ವಿಶೇಷಾಂಕದ ಲೇಖಕರಾಗಿ ಮತ್ತು ಇತರ ಎಲ್ಲಾ ಚಟುವಟಿಕೆಗಳಲ್ಲಿ ಒಳಗೊಳ್ಳಲು ಪ್ರಯತ್ನಿಸಬೇಕು.
- ಜನಶಕ್ತಿ ಬಳಗದ ರಾಜ್ಯ ಮಟ್ಟದ ಒಂದು ಸಾಮಾಜಿಕ ಮಾಧ್ಯಮ ಕಾರ್ಯಾಗಾರವನ್ನು ಕಾರ್ಯಾಗಾರವನ್ನು ಜುಲೈ ನಲ್ಲಿ ಸಂಘಟಿಸಲಾಗುತ್ತದೆ
- ಜನಶಕ್ತಿಯ ಮುಂದಿನ ಬೆಳವಣಿಗೆಗಳಿಗೆ ನಿಧಿ ಸ್ಥಾಪಿಸಲು ವಿಶೇಷಾಂಕದ ಜಾಹೀರಾತುಗಳ ಮೂಲಕ ರೂ. 25 ಲಕ್ಷದ ನಿಧಿಯ ಗುರಿ ಇಟ್ಟುಕೊಳ್ಳಲಾಗಿದೆ.

ಸರಕಾರೀ ಖರ್ಚಿನಲ್ಲಿ ಖಾಸಗಿ ಆಸ್ಪತ್ರೆಗಳು: ಆರೋಗ್ಯ ಸೇವೆಗಳನ್ನು ಒದಗಿಸಲಾರದ ಅಸಮರ್ಥತೆ

ನೀತಿ ಆಯೋಗ ಮತ್ತು ಕೇಂದ್ರ ಆರೋಗ್ಯ ಮಂತ್ರಾಲಯ ನಗರಪ್ರದೇಶಗಳಲ್ಲಿ ಜಿಲ್ಲಾ ಸರಕಾರೀ ಅಸ್ಪತ್ರೆ ಕಟ್ಟಡಗಳು ಮತ್ತು ಜಮೀನನ್ನು ಖಾಸಗಿಯವರಿಗೆ 30ವರ್ಷಗಳ ಲೀಸ್ ಗೆ ಕೊಡುವ ಪ್ರಸ್ತಾವವೊಂದನ್ನು ಮುಂದಿಟ್ಟಿದೆ ಎಂದು ವರದಿಯಾಗಿದೆ. ಈ ಕುರಿತು ಖಾಸಗಿಯವರೊಂದಿಗೆ ಮಾಡಿಕೊಳ್ಳಬಹುದಾದ ಕಾಂಟ್ರಾಕ್ಟ್‌ನ ಮಾದರಿಯೊಂದನ್ನು ಅದು ತಯಾರಿಸಿದೆಯಂತೆ.

ಇದರ ಪ್ರಕಾರ ದೇಶದ ಎಂಟು ಮಹಾನಗರಗಳನ್ನು ಬಿಟ್ಟು ಇತರ ಪಟ್ಟಣಗಳಲ್ಲಿ ಜಿಲ್ಲಾ ಅಸ್ಪತ್ರೆಗಳ ಕಟ್ಟಡಗಳ ಭಾಗಗಳನ್ನು ಮತ್ತು ಅವುಗಳ ಜಮೀನುಗಳ ಗಮನಾರ್ಹ ಭಾಗಗಳನ್ನು 50ಅಥವ 100 ಹಾಸಿಗೆಗಳ ಆಸ್ಪತ್ರೆಗಳ ಸೌಲಭ್ಯಗಳನ್ನು ಒದಗಿಸಲು ಖಾಸಗಿಯವರಿಗೆ ವಹಿಸಿಕೊಡಬೇಕು. 50 ಹಾಸಿಗೆಗಳ ಆಸ್ಪತ್ರೆಗೆ 30ಸಾವಿರ ಚದರಡಿ ಮತ್ತು 100 ಹಾಸಿಗೆ ಸೌಲಭ್ಯಕ್ಕೆ 60 ಸಾವಿರ ಚದರಡಿ ನೀಡಬೇಕು. ಜಿಲ್ಲಾ ಆಡಳಿತ ಈಗಾಗಲೇ ಸರಕಾರೀ ಆಸ್ಪತ್ರೆಗಳ ಕಟ್ಟಡಗಳಲ್ಲಿ 75%ವನ್ನು ಖಾಸಗಿಯವರಿಗೆ ವಹಿಸಬೇಕು.

ಇಷ್ಟೇ ಅಲ್ಲ, ಸರಕಾರೀ ಆಸ್ಪತ್ರೆಗಳು ತಮ್ಮ ರಕ್ತ ಬ್ಯಾಂಕ್ ಮತ್ತು ಅಂಬುಲೆನ್ಸ್ ಸೇವೆಗಳನ್ನೂ ಖಾಸಗಿಯವರೊಂದಿಗೆ ಹಂಚಿಕೊಳ್ಳಬೇಕು. ಖಾಸಗಿಯವರಿಗೆ ಹೊಸ ಸೌಲಭ್ಯಗಳನ್ನು ಒದಗಿಸಲು ಬೇಕಾಗುವ ಹಣದಲ್ಲಿಯೂ ಒಂದು ಭಾಗವನ್ನು ರಾಜ್ಯ ಸರಕಾರ ಒದಗಿಸಬೇಕು.

ಇನ್ನೂ ಮುಂದುವರೆದು ಈ ಕರಡು ಪ್ರಸ್ತಾಪ ಈ ಖಾಸಗಿ ಆಸ್ಪತ್ರೆಗಳಿಗೆ ಸಾಕಷ್ಟು ರೋಗಿಗಳು ಲಭ್ಯವಾಗುವಂತೆ ಮಾಡುವ ಹೊಣೆಯನ್ನೂ ಸರಕಾರ ಹೊತ್ತುಕೊಳ್ಳಬೇಕಾಗಿದೆ. ಇದನ್ನು ನಿರ್ವಹಿಸಲಿಕ್ಕಾಗಿಯೇ, ಕನಿಷ್ಟ ಹಿಂದಿನ ಎರಡು ವರ್ಷಗಳಲ್ಲಿ ಪ್ರತಿದಿನ 1000ಕ್ಕಿಂತ ಹೆಚ್ಚು ರೋಗಿಗಳಿಗೆ ಶುಶ್ರೂಷೆ ನಿಡಿರುವ ಜಿಲ್ಲಾ ಆಸ್ಪತ್ರೆಗಳನ್ನು ಮಾತ್ರ ಖಾಸಗೀಕರಿಸಲಾಗುವದಂತೆ!

ಬಿಜೆಪಿ ನೇತೃತ್ವದ ಈ ಸರಕಾರದ ಆರಂಭದ ದಿನಗಳಲ್ಲಿ ತಯಾರಿಸಿದ ರಾಷ್ಟ್ರೀಯ ಆರೋಗ್ಯ ಧೋರಣೆಯ ಕರಡಿನಲ್ಲಿ ಖಾಸಗಿಯವರಿಗೆ ಸೀಮಿತ ಪಾತ್ರವನ್ನಷ್ಟೇ ಕೊಡಲಾಗಿತ್ತು, ಸರಕಾರ ಒಂದು ಸಾರ್ವತ್ರಿಕ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಹೆಚ್ಚಿನ ಪ್ರಮಾಣದಲ್ಲಿ ಹೂಡಿಕೆ ಮಾಡಬೇಕು, ಮಧ್ಯಂತರದಲ್ಲಿ ಮಾತ್ರ ಖಾಸಗಿಯವರ ನೆರವನ್ನು ಪಡೆಯಬೇಕು ಎಂದಿತ್ತು ಎಂದು ವಿಶ್ಲೇಷಕರು ಹೇಳುತ್ತಾರೆ.

ಆದರೆ ನೀತಿ ಆಯೋಗ ಈ ಕರಡನ್ನು ತಿರಸ್ಕರಿಸಿತು, ಮುಕ್ತಟೆ ಸಾರ್ವತ್ರಿಕ ಆರೋಗ್ಯ ಸೇವೆಯೆಂಬುದು ಕೇವಲ ಒಂದು ಭ್ರಾಂತಿ ಎಂದು ಹೇಳಿಕೊಂಡು ಈ ಪ್ರಸ್ತಾವವನ್ನು ರೂಪಿಸಿದೆಯಂತೆ. ಇದನ್ನು ರೂಪಿಸುವಲ್ಲಿ ವಿಶ್ವಬ್ಯಾಂಕಿನ 'ತಾಂತ್ರಿಕ ನೆರವು' ಪಡೆಯಲಾಗಿದೆ ಎಂದರೆ ಯಾರಿಗೂ ಆಶ್ಚರ್ಯವಾಗಬೇಕಿಲ್ಲ.

ಈಗ ಬಡಜನರು ಮತ್ತು ಕೆಳ ಮಧ್ಯಮ ವರ್ಗಗಳ ಜನರು ಮೂಲಭೂತ ಆರೋಗ್ಯ ಸೇವೆಗಳನ್ನು ಪಡೆಯಲು ತಮ್ಮ ಮಾಸಿಕ ಆದಾಯದ 50ರಿಂದ 75 ಪಟ್ಟು ಖರ್ಚು ಮಾಡುತ್ತಿದ್ದಾರೆ, ಇದರಿಂದಾಗಿ ಆಸ್ತಿಪಾಸ್ತಿಗಳನ್ನು ಮಾರಿಕೊಳ್ಳುತ್ತಿದ್ದಾರೆ, ಉದ್ಯೋಗ ಕಳಕೊಳ್ಳುತ್ತಿದ್ದಾರೆ, ಮಕ್ಕಳ ಶಿಕ್ಷಣವನ್ನು ಅರ್ಧದಲ್ಲಿ ನಿಲ್ಲಿಸುತ್ತಿದ್ದಾರೆ ಎಂಬ ಇತ್ತೀಚಿನ ವರದಿಯ ಹಿನ್ನೆಲೆಯಲ್ಲಿ ನೀತಿ ಆಯೋಗದ ಈ ಪ್ರಸ್ತಾವವನ್ನು ನೋಡಬೇಕಾಗಿದೆ.

'ಉತ್ತಮ ಆಳ್ವಿಕೆ'ಯ ಮಾತಾಡುವ ಅಚ್ಛೇ ದಿನ್' ಸರಕಾರ ಸಾರ್ವತ್ರಿಕ ಆರೋಗ್ಯ ಸೇವೆಯ ಯೋಚನೆಯನ್ನು ಕೈಬಿಟ್ಟು ಈ ರೀತಿಯಲ್ಲಿ ಸರಕಾರೀ ಖರ್ಚಿನಲ್ಲಿ ಖಾಸಗಿಯವರಿಗೆ ಅವಕಾಶ ಕಲ್ಪಿಸುವ ಯೋಚನೆ ಮಾಡುತ್ತಿರುವುದೇಕೆ? ಆರೋಗ್ಯ ಸೇವೆಯನ್ನು ನಿರ್ವಹಿಸುವ ಸಾಮರ್ಥ್ಯ ಈ ಸರಕಾರಕ್ಕೆ ಇಲ್ಲವೆಂದಿರಬಹುದೇ ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ.

ಬೆಳೆ ವಿಮಾ ಸ್ಕೀಮುಗಳು ರೈತರಿಗಲ್ಲ, ಖಾಸಗಿ ವಿಮಾ ಕಂಪನಿಗಳ ಲಾಭಕ್ಕೆ

ಹೀಗೆಂದು ಮಹಾಲೆಕ್ಕ ಪರಿಶೋಧಕ(ಸಿಎಜಿ)ರ ವರದಿಯನ್ನು ನೋಡಿದರೆ ಯಾರಿಗಾದರೂ ಅನಿಸದಿರದು. ಇನನೊಂದು ಸರಕಾರೇತರ ಸಮಸ್ತೆ ವಿಜ್ಞಾನ ಮತ್ತು ಪರಿಸರ ಕೇಂದ್ರ (ಸಿಎಸ್ಇ) ಕೂಡ ಈ ತೀರ್ಮಾನಕ್ಕೆ ಬಂದಿದೆ. ಇದನ್ನು ರೈತ ಸಂಘಟನೆಗಳು ಈ ಮೊದಲೇ ಗಮನಿಸಿ ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದವು ಎಂಬುದನ್ನು ಇಲ್ಲಿ ಗಮನಿಸಬಹುದು.

ಬೆಳೆ ವಿಮಾ ಯೋಜನೆಗಳನ್ನು ನಿರ್ವಹಿಸುವ ಬಹುಪಾಲು ಖಾಸಗಿ ಸಾಮಾನ್ಯ ವಿಮಾ ಕಂಪನಿಗಳು ಈ ಎಪ್ರಿಲ್ 10,000 ಕೋಟಿ ರೂ.ಗಳ ಲಾಭ ಮಾಡಿಕೊಂಡಿವೆ ಎಂದು ಸಿಎಸ್ಇ ವರದಿ ಹೇಳುತ್ತದೆ.


ಈ ವಿಮಾ ಕಂಪನಿಗಳ ನೇರ ಪ್ರೀಮಿಯಂ ಆದಾಯ 2016-17 ರಲ್ಲಿ 32% ಹೆಚ್ಚಳ ಕಂಡಿತು. 2016-17 ರ ಅವುಗಳ 1.27 ಲಕ್ಷ ಕೋಟಿ ರೂ.ಗಳ ಆದಾಯದಲ್ಲಿ ಅರ್ಧದಷ್ಟು ಬೆಳೆ ವಿಮೆಯಿಂದಲೇ ಬಂದಿವೆಯಂತೆ.

ಸಿಎಜಿ 2011-12ರಿಂದ 2015-166 ರವರೆಗೆ ಸರಕಾರದ ಮೂರು ಬೆಳೆ ವಿಮಾ ಯೋಜನೆಗಳ ಅಧ್ಯಯನ ನಡೆಸಿ ತಯಾರಿಸಿದ ವರದಿಯನ್ನು ಸಂಸತ್ತಿನಲ್ಲಿ ಇತ್ತೀಚೆಗೆ ಮಂಡಿಸಲಾಯಿತು. ಸಿಎಸ್ಇ ಹೊಸ 'ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಾ'(ಪಿಎಂಎಫ್‌ಬಿವೈ) ದ ಅಧ್ಯಯನ ಮಾಡಿದೆ.

ಸಿಎಸ್ಇ ಅಧ್ಯಯನದ ಪ್ರಕಾರ ವಿಮಾ ಕಂಪನಿಗಳು ಈ ವರ್ಷ ವಸೂಲಿ ಮಾಡಿದ ಪ್ರೀಮಿಯಂ ಮೊತ್ತ 15,891 ಕೋಟಿ ರೂ. ಅವು ಇತ್ಯರ್ಥಮಾಡಿದ ದಾವೆಗಳ ಮೊತ್ತ ಕೇವಲ ರೂ. 5,962 ಕೋಟಿ ರೂ.

ಭಾರತದ 14ನೇ ರಾಷ್ಟ್ರಪತಿಗಳಾಗಿ ಪ್ರಮಾಣ ವಚನ ಸ್ವೀಕರಿಸಿರುವಹೊಸ ರಾಷ್ಟ್ರಪತಿಗಳು ತಾನು ರಾಷ್ಟ್ರಪತಿ ಭವನದಲ್ಲಿ ರಾತ್ರಿಯ ಅನ್ನಕ್ಕಾಗಿ ದಿನವಿಡೀ ಬೆವರು ಸುರಿಸುವ ಅಸಂಖ್ಯ ರಾಮನಾಥ್ ಕೋವಿಂದ್‌ಗಳ ಪ್ರತಿನಿಧಿಯಾಗಿರುತ್ತೇನೆ ಎಂದು 'ಜೈಶ್ರೀರಾಮ್' ಘೋಷಣೆಗಳ ನಡುವೆ ಹೇಳಿದ್ದಾರೆ -ಸುದ್ದಿ

ಚರಂಡಿ ಸ್ವಚ್ಛಗೊಳಿಸುವಾಗ 100 ದಿನಗಳಲ್ಲಿ 39 ಕಾರ್ಮಿಕರು, ಬಹುಪಾಲು ದಲಿತರು ಪ್ರಾಣ ಕಳಕೊಂಡಿದ್ದಾರೆ.



ವ್ಯಂಗ್ಯಚಿತ್ರ: ಸಮದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ಮತ್ತೆ ದೀನಾನಾಥ ಬತ್ರ ಶಿಫಾರಸುಗಳು: ಟಾಗೋರ್, ಗಾಲಿಬ್, ಉರ್ದು ಪದಗಳನ್ನು ಪಠ್ಯಗಳಿಂದ ತೆಗೆಯಿರಿ

ಕೇಸರಿ ಪಡೆಗಳ 'ಶಿಕ್ಷಣ ತಜ್ಞ' ದೀನಾನಾಥ ಬತ್ರ ಮತ್ತೆ ಸುದ್ದಿ ಮಾಡಿದ್ದಾರೆ. ಇವರು 'ಶಿಕ್ಷಾ ಸಂಸ್ಕೃತಿ ಉತ್ಥಾನ್ ನ್ಯಾಸ್' ಎಂಬ ಸಂಘ ಪರಿವಾರದ ಸಂಸ್ಥೆಯ ವತಿಯಿಂದ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮಂಡಳಿ(ಎನ್‌ಸಿಇಆರ್‌ಟಿ)ಗೆ ಐದು ಪುಟಗಳ ಶಿಫಾರಸುಗಳನ್ನು ಕಳಿಸಿದ್ದಾರೆ ಎಂದು ವರದಿಯಾಗಿದೆ.

ಪಠ್ಯಪುಸ್ತಕಗಳಲ್ಲಿ ರವೀಂದ್ರನಾಥ ಟಾಗೋರ್ ಅವರ ವಿಚಾರಗಳು, ಖ್ಯಾತ ಉರ್ದು ಕವಿ ಮಿರ್ಜಾ ಗಾಲಿಬ್ ಅವರ ಒಂದು ಗಝಲ್, ಪ್ರಖ್ಯಾತ ಚಿತ್ರಕಾರ ಎಂ.ಎಫ್. ಹುಸೇನ್ ರವರ ಆತ್ಮಕತೆಯ ಭಾಗಗಳು, ಕ್ರಾಂತಿಕಾರಿ ಕವಿ ಪಾಷ್‌ನ ಒಂದು ಕವನ ಇವನ್ನೆಲ್ಲ ತೆಗೆಯ ಬೇಕು, ಉರ್ದು, ಅರೇಬಿಕ್ ಮತ್ತು ಇಂಗ್ಲಿಷ್ ಪದಗಳನ್ನು ತೆಗೆಯಬೇಕು, 1984ರ ಸಿಖ್-ವಿರೋಧಿ ದಂಗೆಗಳ ಬಗ್ಗೆ ಹಿಂದಿನ ಪ್ರಧಾನಿಗಳು ಕ್ಷಮೆ ಕೋರಿದ್ದರು ಎಂಬ ಮಾತನ್ನು, 2002ರ ಗುಜರಾತ್ ಗಲಭೆಗಳಲ್ಲಿ 2000 ಮುಸ್ಲಿಮರ ಕೊಲೆಯಾಯಿತು ಎಂಬುದನ್ನು ಕೈಬಿಡಬೇಕು ಹಾಗೂ ಬಿಜೆಪಿಯನ್ನು ಹಿಂದುತ್ವ ಪಕ್ಷ ಎನ್ನುವುದನ್ನು ತೆಗೆಯಬೇಕು ಎಂಬದು ಅವರ ಇತ್ತೀಚಿನ ಕೆಲವು ಶಿಫಾರಸುಗಳು.

ಇತಿಹಾಸದ ಪಠ್ಯದಲ್ಲಿ "ವೈದಿಕೋತ್ತರ ಅವಧಿಯಲ್ಲಿ ಮಹಿಳೆಯರನ್ನು ಶೂದ್ರರಂತೆ ಕಾಣಲಾಗುತ್ತಿತ್ತು(6ನೇ ತರಗತಿ), "ಎಲ್ಲ ಮೊಗಲ್ ಅರಸರು ಪೂಜಾ ಸ್ಥಳಗಳ ನಿರ್ಮಾಣ ಮತ್ತು ನಿರ್ವಹಣೆಗೆ ಅನುದಾನಗಳನ್ನು ಕೊಡುತ್ತಿದ್ದರು,...' (12ನೇ ತರಗತಿ)ಮುಂತಾದವು ಅವರು ಆಕ್ಷೇಪಿಸುವ ಸಾಲುಗಳು. ತರಗತಿ 8ರ ಪಠ್ಯದಲ್ಲಿರುವ 19ನೇ ಶತಮಾನದ ಲೇಖಕಿ, ಮೊದಲ ಮಹಿಳಾವಾದಿ ಕೃತಿ ಎನಿಸಿಕೊಂಡ ತಾರಾಬಾಯಿ ಶಿಂಧೆಯವರ ಕೃತಿಯ ಆಯ್ದ ಭಾಗಗಳನ್ನು ತೆಗೆಯ ಬೇಕು ಎನ್ನುವುದು ಅವರ ಮತ್ತೊಂದು ಶಿಫಾರಸು.

ಈ ಹಿಂದೆ ದಿಲ್ಲಿ ವಿಶ್ವವಿದ್ಯಾಲಯದ ಪಠ್ಯದಿಂದ ಎ.ಕೆ.ರಾಮಾನುಜನ್ ಅವರ 'ಮುನ್ನೂರು ರಾಮಾಯಣಗಳು' ಕೃತಿಯನ್ನು ತೆಗೆಯಬೇಕು ಎಂದುವೀ ಸಂಸ್ಥೆ ಆಗ್ರಹಿಸಿತ್ತು. ಕೊನೆಗೆ ವ್ಯಾಪಕ ಪ್ರತಿಭಟನೆಗಳ ನಡುವೆಯೂ ಅದನ್ನು ದಿಲ್ಲಿ ವಿವಿಯ ಓದುವ ಪಟ್ಟಿಯಿಂದ ತೆಗೆಯಲಾಯಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಭೋಪಾಲ್ ಎನ್‌ಕೌಂಟರ್ ಬಗ್ಗೆ ಸಿಬಿಐ ತನಿಖೆ ಏಕಿಲ್ಲ

ಅಕ್ಟೋಬರ್ 2016ರಲ್ಲಿ ಭೋಪಾಲ್ ಸೆಂಟ್ರಲ್ ಜೈಲಿನಿಂದ ಪರಾರಿಯಾಗಲು ಪ್ರಯತ್ನಿಸಿದರು ಎನ್ನಲಾದ 8 ಶಂಕಿತ ಸಿಮಿ ಕಾರ್ಯಕರ್ತರ ಎನ್‌ಕೌಂಟರ್ ಸಾವಿನ ಬಗ್ಗೆ ತನಿಖೆ ಏಕಿಲ್ಲ ಎಂದು ಸುಪ್ರಿಂ ಕೋರ್ಟ್ ಮಧ್ಯಪ್ರದೇಶದ ಬಿಜೆಪಿ ಸರಕಾರವನ್ನು ಕೇಳಿರುವುದಾಗಿ ವರದಿಯಾಗಿದೆ.

ಈ ಸಿಮಿ ಕಾರ್ಯಕರ್ತರು ಜೈಲಿನಿಂದ ಪರಾರಿಯಾದರು, ನಂತರ ಸಿಕ್ಕಿಬಿದ್ದಾಗ ಪೋಲಿಸರ ಮೇಲೆ ಗುಂಡು ಹಾರಿಸಿದರು. ಈ ಚಕಮಕಿಯಲ್ಲಿ ಹತರಾದರು ಎಂಬ ಸರಕಾರದ ದಾವೆ ಆಗಲೇ ಸಂದೇಹಕ್ಕೆ ಒಳಗಾಗಿತ್ತು. ಇದರಿಂದಾಗಿ ಬಿಜೆಪಿ ಸರಕಾರ ನಿರ್ವಾಹವಿಲ್ಲದೆ ನ್ಯಾಯಾಂಗ ತನಿಖೆಗೆ ಒಪ್ಪಬೇಕಾಯಿತು. ಈ ತನಿಖೆ ಇನ್ನೂ ನಡೆಯುತ್ತಿದೆಯಂತೆ.



ಜೆಎನ್‌ಯು ನಲ್ಲಿನ್ನು ಟ್ಯಾಂಕ್ ದೇಶಭಕ್ತಿ!

'ಅಚ್ಛೇ ದಿನ್ ಮಾದರಿ ವಿಸಿ'ಯ ಅಮೋಘ ಸಲಹೆ!

ಅಚ್ಛೇ ದಿನ್‌ಗಳ 'ನವಭಾರತ ನಿರ್ಮಾಣ'ದಲ್ಲಿ ವಿಶ್ವವಿದ್ಯಾಲಯಗಳ ಹೊಸ ಪಾತ್ರ ಏನಿರಬೇಕು ಎಂಬುದರ ಪಥಪ್ರದರ್ಶನ ಮಾಡುತ್ತಿರುವ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ ಉಪಕುಲಪತಿಗಳು ಈ ವಾರ ಇನ್ನೊಂದು ಅಮೋಘ ಪ್ರದರ್ಶನ ಕೊಟ್ಟಿದ್ದಾರೆ. ಕಾರ್ಗಿಲ್ ವಿಜಯ ದಿನಾಚರಣೆಯನ್ನು ಮೂರು ದಿನಗಳ ಮೊದಲೇ ಜೆಎನ್‌ಯು ಆವರಣದಲ್ಲಿ ಮೊತ್ತಮೊದಲ ಬಾರಿಗೆ ನಿವೃತ್ತ ಸೇನಾಧಿಕಾರಿಗಳ 'ಸಹಕಾರ'ದಿಂದ ಏರ್ಪಡಿಸಿ ಸೈ ಎನಿಸಿ ಕೊಳ್ಳುವದರಲ್ಲಿಯೇ ತೃಪ್ತರಾಗದೆ ಅವರು ವಿವಿ ಆವರಣದಲ್ಲಿ ಒಂದು ಎದ್ದು ಕಾಣುವ ಜಾಗದಲ್ಲಿ ಒಂದು ಸೇನಾ ಟ್ಯಾಂಕನ್ನು ಪ್ರತಿಷ್ಠಾಪಿಸಿ ವಿದ್ಯಾರ್ಥಿಗಳಿಗೆ ಸೇನಾಪಡೆಗಳ ತ್ಯಾಗವನ್ನು ಸದಾ ನೆನಪಿಸುವಂತೆ ಮಾಡಬಹುದು ಎಂಬ ಪ್ರಸ್ತಾವವನ್ನು ಮುಂದಿಟ್ಟಿದ್ದಾರೆ. ಇಂತಹ ಒಂದು ಟ್ಯಾಂಕನ್ನು ದೊರಕಿಸಲು ನೆರವಾಗಬೇಕು ಎಂದು ಅವರು ಈ ಸಮಾರಂಭಕ್ಕೆ ಆಹ್ವಾನಿಸಿದ ಇಬ್ಬರು ಕೇಂದ್ರ ಮಂತ್ರಿಗಳನ್ನು (ಒಬ್ಬರು ಮಾಜಿ ಸೇನಾಧ್ಯಕ್ಷರು) ಕೋರಿದರು ಎಂದು ವರದಿಯಾಗಿದೆ.

ಮಂತ್ರಿಗಳು ಇದಕ್ಕೆ ಶಾಬಾಷ್‌ಗಿರಿ ಕೊಡುತ್ತ ಕಳೆದ ವರ್ಷ 'ರಾಷ್ಟ್ರ-ವಿರೋಧಿ' ಘೋಷಣೆಗಳು ಮೊಳಗಿದ ಈ ಆವರಣದಲ್ಲಿ ಇಂದು "ಭಾರತ್ ಮಾತಾಕೀ ಜೈ' ಘೋಷಣೆ ಮೊಳಗುತ್ತಿರುವುದರ ಬಗ್ಗೆ ಆಶ್ಚರ್ಯ, ಆನಂದ ವ್ಯಕ್ತಪಡಿಸಿದರಂತೆ.

ನಿವೃತ್ತ ಸೇನಾಧಿಕಾರಿಯೊಬ್ಬರು 'ಜೆಎನ್‌ಯುನಲ್ಲಿ ವಿಜಯ ಘೋಷಿಸಿರುವ' ಉಪಕುಲಪತಿಗಳನ್ನು ಅಭಿನಂದಿಸುತ್ತ ಇನ್ನು ನಮ್ಮ ಪಡೆಗಳು ಜಾಧವ್‌ಪುರ್ ವಿವಿ, ಹೈದರಾಬಾದ್ ವಿವಿ ಮುಂತಾದ ಕೋಟೆಗಳನ್ನು ವಶಪಡಿಸಿಕೊಳ್ಳುತ್ತವೆ ಎಂದು ಸಾರಿದರಂತೆ.

ಅದೇನೇ ಇರಲಿ, ಜೆಎನ್‌ಯು ವಿಸಿಗಳ ಈ ಅಮೋಘ ಸೂಚನೆಗೆ ಅಮೋಘ ಸ್ವಾಗತ ದೊರಕಿದೆ, ಮುಖ್ಯವಾಗಿ ವ್ಯಂಗ್ಯಚಿತ್ರಕಾರರಿಂದ! ಅದರ ಒಂದು ಉದಾಹರಣೆ ಈ ಕೆಳಗಿದೆ.

ಜೆಎನ್‌ಯುನಲ್ಲಿ ಒಂದು ಸಾಲುವುದಿಲ್ಲ, ನಾಲ್ಕು ಮತ್ತು ಇಡೀ ದೇಶದ ಎಲ್ಲ ಕಾಲೇಜುಗಳಲ್ಲಿ ಒಂದೊಂದು ಟ್ಯಾಂಕುಗಳನ್ನು ಇಡಬೇಕು ಎಂದೊಬ್ಬರು ಸಲಹೆ ಮಾಡಿದರು. ಅಂದರೆ 35,000 ಟ್ಯಾಂಕುಗಳು,ಅದಕ್ಕೆ 20ಲಕ್ಷ ಲಕ್ಷ ಡಾಲರ್ ಬೇಕಾಗಬಹುದು, ಅದರೇನಂತೆ ದೇಶಭಕ್ತಿಗೆ ತಾನೇ? ಅಲ್ಲದೆ ಇದರಿಂದ ರಕ್ಷಣಾ ಉತ್ಪಾದನೆಯ ಕ್ಷೇತ್ರಕ್ಕೆ ಪ್ರವೇಶ ಪಡೆಯುತ್ತಿರುವ ದೇಶಿ-ವಿದೇಶಿ ಶಸ್ತ್ರಾಸ್ತ್ರ ತಯಾರಿಕರಿಗೆ ಸಿದ್ಧ ಆರ್ಡರ್‌ಗಳನ್ನು ನೀಡಿದಂತಾಗುವುದಲ್ಲವೇ ಎಂದು ಇನ್ನೊಬ್ಬರು ಕೇಳಿದ್ದಾರೆ.

ಇನ್ನೊಬ್ಬ ವ್ಯಂಗ್ಯಚಿತ್ರಕಾರರು ಈ ಖರ್ಚನ್ನು ಕಡಿಮೆ ಮಾಡುವ ಉಪಾಯವನ್ನೂ ಸೂಚಿಸಿದ್ದಾರೆ. ಈ ಟ್ಯಾಂಕುಗಳನ್ನು ಇಟ್ಟರೆ ಪ್ರೊಫೆಸರುಗಳ ಸಂಖ್ಯೆಯಲ್ಲಿ ಇನ್ನೂ ಎಷ್ಟು ಕಡಿತ ಮಾಡಬಹುದು ಎಂದು ಲೆಕ್ಕ ಹಾಕುವಂತೆ ಅವರು ಸೂಚಿಸಿದ್ದಾರೆ!

ಈ ವಿಸಿಗಳಿಗೆ ಯುದ್ಧ ಮತ್ತು ಶಾಂತಿ ಕುರಿತು ಅಧ್ಯಯನ ಮಾಡುವ ವಿಭಾಗವನ್ನು ತೆರೆಯುವ ವಿಚಾರ ಏಕೆ ಹೊಳೆಯಲಿಲ್ಲ ಎಂಬ 'ಪೆದ್ದು' ಪ್ರಶ್ನೆಯನ್ನು ಎತ್ತಿದವರೂ ಇಲ್ಲವೆಂದೇನಿಲ್ಲ.



ವ್ಯಂಗ್ಯಚಿತ್ರ: ಕೀರ್ತಿಶ್, ಬಿಬಿಸಿ ಹಿಂದಿ



ಜಿಎಸ್‌ಟಿ–ಅತ್ಯಂತ ದೊಡ್ಡ ನವ–ಉದಾರವಾದಿ ಹೊಡೆತ

ಪ್ರಧಾನಿ ಮೋದಿಯವರು ಮೊದಲ ಪ್ರಧಾನ ಮಂತ್ರಿ ಜವಹರಲಾಲ ನೆಹರೂರವರ 'ಅದೃಷ್ಟದೊಂದಿಗೆ ಸಮಾಗಮ'ದ ಭಾಷಣವನ್ನು ಅನುಕರಿಸುತ್ತ ಮಾಡಿದ ಭಾಷಣದ "ಹಳೆ ವ್ಯವಸ್ಥೆಯಿಂದ ಹೊರಬಂದು ಹೊಸದಕ್ಕೆ ಹೆಜ್ಜೆ" ಎಂಬ ಮಾತುಗಳು ದೇಶಿ ಮತ್ತು ವಿದೇಶಿ ಕಾರ್ಪೊರೇಟ್‌ಗಳಿಗೆ ಮಾತ್ರ ಹೊಸ ಶಕೆಯ ಆರಂಭವಾಗಿತ್ತು. ಅಂದರೆ ಕಾರ್ಪೊರೇಟ್‌ಗಳ ಮಟ್ಟಿಗೆ ಜೂ.30– ಜು.1 ಮಧ್ಯರಾತ್ರಿ ಗಂಟೆ ಬಾರಿಸುತ್ತಿದ್ದಂತೆ ಏಕ–ಭಾರತ ಮಾರುಕಟ್ಟೆಯಲ್ಲಿ ಎಲ್ಲ 'ಬೇಲಿ'ಗಳನ್ನು ಮುರಿದ 'ವಿಮೋಚನೆ'ಯಾಗಿತ್ತು, ಅದಕ್ಕಾಗಿ ಸಂಭ್ರಮಿಸುವ ಸಮಯವಾಗಿತ್ತು. ಆದರೆ ಸಾಮಾನ್ಯ ಜನರ ಮೇಲೆ ಇದು ಒಂದು ಬೃಹತ್ ಪರೋಕ್ಷ ತೆರಿಗೆ ಹೊರೆ ಬಿದ್ದಿರುವ ಸಮಯ. ಏಕೆಂದರೆ ಒಂದೇ ಹೊಡೆತದಲ್ಲಿ ಕೇಂದ್ರ ಸರ್ಕಾರ ತನ್ನ ಪರೋಕ್ಷ ತೆರಿಗೆಗಳನ್ನು ಹಲವು ಪಟ್ಟು ಹೆಚ್ಚಿಸಿಕೊಂಡಿದೆ ಎನ್ನುವ ಹಿರಿಯ ಕಾರ್ಮಿಕ ಮುಖಂಡ ಜೆ ಎಸ್. ಮಜುಂದಾರ್ ಇದರ ವಿವಿಧ ಆಯಾಮಗಳನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ.

ಕಳೆದ ಜುಲೈ 1ರಿಂದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಆಡಳಿತ ಶುರುವಾಗಿದೆ. ಜಿಎಸ್‌ಟಿಯ ಉಪಯೋಗಗಳು ಕುರಿತು ಪತ್ರಿಕೆಗಳಲ್ಲಿ ಸಾವಿರಾರು ಕಾಲಂಗಳನ್ನು ತುಂಬಿದವು. ಸರ್ಕಾರ ಮತ್ತು ಕಾರ್ಪೊರೇಟ್‌ಗಳು ಸಹ ಅಪಾರ ಪ್ರಮಾಣದ ಜಾಹೀರಾತುಗಳನ್ನು ನೀಡಿದವು. ಇದರ ಜೊತೆ–ಗೆ ಈ ನೀತಿ ಜಾರಿಗೆ ಕಾರಣವಾಗಿದ್ದು ನಾವೇ ಎಂಬ ಗೌರವ ಪಡೆಯಲು ಕೇಂದ್ರದ ಹಣಕಾಸು ಸಚಿವ ಅರುಣ್ ಜೇಟ್ಲಿ ಮತ್ತು ಮಾಜಿ ಹಣಕಾಸು ಸಚಿವ ಪಿ.ಚಿದಂಬರಂ ಸಾರ್ವಜನಿಕವಾಗಿಯೇ ಪೈಪೋಟಿಗಿಳಿದರು. ಈ ಜಿಎಸ್‌ಟಿ ಎನ್‌ಡಿಎ ಕೂಸೆ ಅಥವಾ ಯುಪಿಎ ಕೂಸೆ?

ಅರುಣ್ ಜೇಟ್ಲಿ ಈ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಎಲ್ಲ ಪಕ್ಷಗಳ ಸಂಸದರು ಮತ್ತು ಶಾಸಕರೆಲ್ಲರ ಒಮ್ಮತ ಇತ್ತು ಎಂದು ಹೇಳಿಕೊಂಡರು. ಏನಾದರೂ ಟೀಕೆಗಳು ಬಂದಿದ್ದರೆ, ಅದು ಇದೊಂದು 'ತರಾತುರಿ'ಯ ಕ್ರಮ ಎಂದೋ ಅಥವ ಜಾರಿಯಲ್ಲಿನ ಕೆಲವು ತಾಂತ್ರಿಕ ಕಾರಣಗಳ ಬಗ್ಗೆಯೋ ಅಷ್ಟೇ ಎಂದು ಅವರು ಹೇಳಿದರು.

2010ರಲ್ಲಿ ಯುಪಿಎ ಸರ್ಕಾರ ಜಿಎಸ್‌ಟಿಯನ್ನು ಜಾರಿಗೊಳಿಸಲು ಸಂಸತ್ತಿನ ಅನುಮೋದನೆಗೆ ಮುಂದಾದಾಗ ಬಿಜೆಪಿ ಜಿಎಸ್‌ಟಿ ದರಗಳಿಗೆ ಸಂಬಂಧಿಸಿದಂತೆ ವಿರೋಧ ವ್ಯಕ್ತಪಡಿಸಿತು. ಆಗ ಅದರ ಪ್ರಮುಖ ವಿರೋಧವಿದ್ದದ್ದು ಇದರಲ್ಲಿ ರಾಜ್ಯಗಳ ಪಾಲಿನ ಕುರಿತು ಮತ್ತು ಜಿಎಸ್‌ಟಿಎನ್ ಸಂರಚನೆ ಕುರಿತಾಗಿತ್ತು. ಈಗ ಎಲ್ಲ ಕಡೆಗಳಿಂದಲೂ ಒಮ್ಮತವಿದೆ ಎಂದು ಹೇಳಿಕೊಂಡ ಬಿಜೆಪಿ ಸರ್ಕಾರ ಹೊಸ ವ್ಯವಸ್ಥೆಗೆ ಚಾಲನೆ ನೀಡಲು ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ವಿಶೇಷ ಮಧ್ಯ ರಾತ್ರಿಯ ಸಮಾರಂಭ ಆಯೋಜಿಸಿತು. ಈ ಸಮಾರಂಭವನ್ನು ವಿರೋಧಿಸಿದ ಪ್ರತಿಪಕ್ಷಗಳು ತಮ್ಮ ಗೈರುಹಾಜರಿಗೆ ಜಿಎಸ್‌ಟಿಯೇತರ ಕಾರಣಗಳನ್ನು ಕೊಟ್ಟವು. ಆದರೆ ಅಂದು ಪ್ರಧಾನಿ ಮೋದಿಯವರು ಮೊದಲ ಪ್ರಧಾನ ಮಂತ್ರಿ ಜವಹರಲಾಲ ನೆಹರೂರವರ 'ಅದೃಷ್ಟದೊಂದಿಗೆ ಸಮಾಗಮ'ದ ಭಾಷಣವನ್ನು ಅನುಕರಿಸುತ್ತ ಮಾಡಿದ ಭಾಷಣ "ಹಳೆ ವ್ಯವಸ್ಥೆಯಿಂದ ಹೊರಬಂದು ಹೊಸದಕ್ಕೆ ಹೆಜ್ಜೆ" ಎಂಬ ಮಾತುಗಳು ದೇಶಿ ಮತ್ತು ವಿದೇಶಿ ಕಾರ್ಪೊರೇಟ್‌ಗಳಿಗೆ ಮಾತ್ರ ಹೊಸ ಶಕೆಯ ಆರಂಭವಾಗಿತ್ತು. ಹೀಗಾಗಿ ಜಿಎಸ್‌ಟಿ ಎಂಬುದು ಹಳೆಯ ಪರೋಕ್ಷ ತೆರಿಗೆ ವ್ಯವಸ್ಥೆಯಿಂದ ಹೊಸ ಜಿಎಸ್‌ಟಿ ವ್ಯವಸ್ಥೆಗೆ ಪದಾರ್ಪಣೆಯಾಗಿತ್ತು. ಅಂದರೆ ಕಾರ್ಪೊರೇಟ್‌ಗಳ ಮಟ್ಟಿಗೆ ಜೂ.30– ಜು.1 ಮಧ್ಯರಾತ್ರಿ ಗಂಟೆ ಬಾರಿಸುತ್ತಿದ್ದಂತೆ ಒಂದು–ಭಾರತ ಮಾರುಕಟ್ಟೆಯಲ್ಲಿ ಎಲ್ಲ 'ಬೇಲಿ'ಗಳನ್ನು ಮುರಿದು 'ವಿಮೋಚನೆ'ಯಾಗಿತ್ತು, ಅದಕ್ಕಾಗಿ ಸಂಭ್ರಮಿಸುವ ಸಮಯವಾಗಿತ್ತು. ಜಿಎಸ್‌ಟಿ ಭಾರತೀಯ ಆರ್ಥಿಕ ವ್ಯವಸ್ಥೆಗೆ ನೀಡಿದ ಅತಿದೊಡ್ಡ ನವ–ಉದಾರವಾದಿ ಪ್ರಚೋದನೆಯ ಸಂಕೇತವಾಗಿತ್ತು.

ಅತಿದೊಡ್ಡ ನವ–ಉದಾರವಾದಿ ಏಟ

ಜಿಎಸ್‌ಟಿಯಿಂದ ದೇಶದ ಅನೌಪಚಾರಿಕ ಆರ್ಥಿಕ ವ್ಯವಸ್ಥೆ ವೇಗವಾಗಿ ಔಪಚಾರಿಕ ವ್ಯವಸ್ಥೆಗೆ ಸಾಗಲಿದೆ. ಬಹುತೇಕ ಸ್ವಯಂ ಉದ್ಯೋಗ ನಡೆಸುವ ಕೋಟ್ಯಂತರ ಸಣ್ಣ ವರ್ತಕರು, ಸರಕುಗಳ ಉತ್ಪಾದಕರು, ವಿವಿಧ ಸೇವೆಗಳನ್ನು ಒದಗಿಸುವವರು ಇವರೆಲ್ಲ ಅದೇ ಕ್ಷೇತ್ರದಲ್ಲಿ ವಹಿವಾಟು ನಡೆಸುತ್ತಿರುವ ವಿದೇಶಿ ಮತ್ತು ದೇಶಿ ಬೃಹತ್ ಕಾರ್ಪೊರೇಟ್‌ಗಳ ಜೊತೆ ಈ ಅಸಮಾನವಾದ ಏಕ–ಭಾರತ ಮಾರುಕಟ್ಟೆಯಲ್ಲಿ ಸ್ಪರ್ಧೆಗೆ ಇಳಿಯಬೇಕಾಗಿದೆ. ಈಗಾಗಲೆ ಲಕ್ಷಾಂತರ ವರ್ತಕರು ರಾಷ್ಟ್ರೀಯ, ರಾಜ್ಯ, ಮತ್ತು ಜಿಲ್ಲಾ ಮತ್ತು ಸ್ಥಳೀಯ ಮಟ್ಟಗಳಲ್ಲಿ ಪ್ರತಿಭಟನೆಗಳನ್ನು ನಡೆಸಿದ್ದಾರೆ. ಇದು ಅವರಿಗೆ ಅಸ್ತಿತ್ವದ ಪ್ರಶ್ನೆಯಾಗಿದೆ.

ಔಷಧಗಳನ್ನು ಆನ್‌ಲೈನ್‌ನಲ್ಲಿ ಮಾರಾಟ ಮಾಡುವುದಕ್ಕೆ ದೊಡ್ಡ ಇ–ವಹಿವಾಟಿನ ಕಂಪನಿಗಳಿಗೆ ಅನುಮತಿ ನೀಡಿದ ಸರಕಾರದ ನೀತಿಯನ್ನು ಖಂಡಿಸಿ ಸುಮಾರು 7.5 ಲಕ್ಷ ಒಬ್ಬೊಬ್ಬರು ನೌಕರನ್ನು ಇಟ್ಟುಕೊಂಡಿರುವ ಸ್ವಯಂ ಉದ್ಯೋಗಿ ಚಿಲ್ಲರೆ ಔಷಧಿ ವರ್ತಕರು ಮೇ.30ರಂದು ದೇಶಾದ್ಯಂತ ಮುಷ್ಕರ ನಡೆಸಿದರು.

ಕಳೆದ ತಿಂಗಳು ಅಮೆರಿಕ ಅಧ್ಯಕ್ಷ ಟ್ರಂಪ್ ಭೇಟಿಗೂ ಮೊದಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅಮೇಜಾನ್, ವಾಲ್‌ಮಾರ್ಟ್, ಆಪಲ್, ಗೂಗಲ್, ಅಡೋಬ್, ಮಾಸ್ಟರ್‌ಕಾರ್ಡ್, ಜೆಪಿ ಮಾರ್ಗನ್ ಚೇಸ್ ಮತ್ತು ಕಾರ್ಲೈಲ್ ಗ್ರೂಪ್‌ನಂತಹ ಐಟಿ ಮತ್ತು ಬ್ಯಾಂಕಿಂಗ್ ಉದ್ದಿಮೆಗಳ ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಿದ್ದು ಸುಮ್ಮನೇ ಅಲ್ಲ.

ಅಮೆರಿಕದ ಬೃಹತ್ ಬಹುರಾಷ್ಟ್ರೀಯ ಕಂಪನಿ ಮತ್ತು ವಿಶ್ವದ ಅತಿ ದೊಡ್ಡ ಇ–ವಹಿವಾಟುದಾರ ಕಂಪನಿ ಅಮೇಜಾನ್ ಮುಖ್ಯಸ್ಥ ಜೆಫರಿ ಬೆಜೋಸ್ ಪ್ರಧಾನಿ ಮೋದಿಯವರನ್ನು ಭೇಟಿ ಮಾಡಿ ಭಾರತದಲ್ಲಿ 200 ಕೋಟಿ ಡಾಲರ್ ಬಂಡವಾಳ ತೊಡಗಿಸುವುದಾಗಿ ಮಾತು ಕೊಟ್ಟರು. ಈ ಸಂದರ್ಭದಲ್ಲಿ ಅವರು "ಭಾರತದಲ್ಲಿ ಇಂಟರ್‌ನೆಟ್ ಬಳಕೆ ಹರಡುತ್ತಿರುವ ವೇಗ ಆಶ್ಚರ್ಯ ಹುಟ್ಟಿಸುವಂತದ್ದು. ಹರಡುತ್ತಿದೆ. ಇದರಿಂದ ಆ ದೇಶದಲ್ಲಿ ಇ–ವಹಿವಾಟು ಬೆಳೆಯಲು ಒಂದು ಪ್ರಮುಖ ಅವಕಾಶ ಉಂಟಾಗಿದೆ" ಎಂದು ಸಾರ್ವಜನಿಕವಾಗಿಯೇ ಹೇಳಿದರು. 'ಇದರ ಬೆನ್ನಲ್ಲೇ ಇತ್ತೀಚೆಗೆ ಅಮೇಜಾನ್ ಕಂಪನಿ 500 ಕೋಟಿ ಡಾಲರ್ ಹೂಡಿಕೆಯೊಂದಿಗೆ ಆಹಾರ ರಿಟೇಲ್ ಕ್ಷೇತ್ರವನ್ನು ಪ್ರವೇಶಿಸಲು ಸರಕಾರ ಅನುಮತಿ ನೀಡಿದೆ.

ಶ್ರಮಶಕ್ತಿಯನ್ನು ಹೆಚ್ಚು ಅವಲಂಬಿಸಿರುವ ಜವಳಿಯಂತಹ ಹಲವಾರು ಉದ್ಯಮಗಳು ಮುಚ್ಚುವ ಹಂತದಲ್ಲಿವೆ. ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಲೇಆಫ್ ಆಗುತ್ತಿದೆ. ಜಿಎಸ್‌ಟಿ ಸಂಪೂರ್ಣವಾಗಿ ಸರಕುಗಳ ಅನುಭೋಗಕ್ಕೆ ಸಂಬಂಧಿಸಿದ್ದಾಗಿದ್ದು ಉತ್ಪಾದನೆಯೊಂದಿಗೆ ಯಾವುದೇ ಸಂಬಂಧ ಹೊಂದಿಲ್ಲ. ಹೀಗಾಗಿ ಇದು ಸಣ್ಣ, ಪುಟ್ಟ ಮತ್ತು ಮಧ್ಯಮ ವಲಯದ ಕೈಗಾರಿಕೆಗಳ ಮೇಲೆ ಗಂಭೀರ ಪರಿಣಾಮ ಬೀರಲಿದ್ದು ಬೃಹತ್ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಕೊಲ್ಲಲಿದೆ. ಈ ನೀತಿಯ ಅಡಿಯಲ್ಲಿ ಸರಕುಗಳ ಅನುಭೋಗಿಸುವ ರಾಜ್ಯಗಳು ಮಾತ್ರ ಎಸ್‌ಜಿಎಸ್‌ಟಿ, ಅಂದರೆ ರಾಜ್ಯ ಜಿಎಸ್‌ಟಿ ಪಡೆಯಲಿದ್ದು ಸರಕು ತಯಾರಿಕಾ ರಾಜ್ಯಗಳು ಹೆಚ್ಚಿನ ಸಂಕಷ್ಟಕ್ಕೆ ಗುರಿಯಾಗಲಿವೆ. ಸೀಮಿತ ಅವಧಿ ವರೆಗೆ ಪರಿಹಾರ ಪ್ಯಾಕೇಜ್‌ಗಳನ್ನು ಘೋಷಿಸಿದರೂ ಅದು ಉತ್ಪಾದಕತೆಯನ್ನು ನಿರುತ್ತೇಜಗೊಳಿಸುವಂತದ್ದಾಗಿದ್ದು, ಉದ್ಯೋಗಾವಕಾಶಗಳನ್ನು ಕುಂದಿಸಲಿದೆ. ಇದು ಸರಕುಗಳು ಮತ್ತು ಸೇವೆಗಳಿಗೆ, ಅವು ಎಲ್ಲೇ ತಯಾರಾಗಿರಲಿ ಅಥವ ಯಾವುದೇ ಮೂಲದಿಂದ, ಆಮದಿನಿಂದಲೂ ಬಂದಿದ್ದರೂ, ಅವಕ್ಕೆ ಮುಕ್ತವಾಗಿರುವ ಏಕ–ಭಾರತ ಮಾರುಕಟ್ಟೆ.

ಇನ್ನು 13ನೇ ಹಣಕಾಸು ಆಯೋಗದ ಪಾತ್ರವೇನು?

13ನೇ ಹಣಕಾಸು ಆಯೋಗ ಜಿಎಸ್‌ಟಿ ಯೋಜನೆಯನ್ನು ಸಂಪೂರ್ಣವಾಗಿ ಸಮ್ಮತಿಸಿತ್ತು ಮತ್ತು 14ನೇ ಹಣಕಾಸು ಆಯೋಗ ಪ್ರಮುಖವಾಗಿ ಪರಿಹಾರ ಪ್ಯಾಕೇಜ್ ಕುರಿತಂತೆ ಪರಿಶೀಲನೆ ನಡೆಸಿತು. ಆದರೆ ಈ ಹಣಕಾಸು ಆಯೋಗದ ಮೂಲ ಕರ್ತವ್ಯ ಎಂದರೆ ಯೋಜನೇತರ ಹಣಕಾಸನ್ನು ಹಂಚಿಕೆ ಮಾಡುವುದು. ಹೀಗಾಗಿ ಜಿಎಸ್‌ಟಿ ಜಾರಿಗೊಂಡ ನಂತರ ಉದ್ಭವಿಸಿರುವ ಪ್ರಮುಖ ಪ್ರಶ್ನೆ ಎಂದರೆ ಐಜಿಎಸ್‌ಟಿ ಮತ್ತು ಸಿಜಿಎಸ್‌ಟಿ ವಿತರಣೆ ಮತ್ತು ಅನುದಾನ ನೀಡುವಲ್ಲಿ ಹಣಕಾಸು ಆಯೋಗದ ಪಾತ್ರ ಏನು ಎಂಬುದು. ಜೊತೆಗೆ ಜಿಎಸ್‌ಟಿ ಆದಾಯಗಳ ಶೇ.42ರಷ್ಟು ರಾಜ್ಯಗಳಿಗೆ ವಿತರಣೆ ಮಾಡುವಲ್ಲಿ ಜಿಎಸ್‌ಟಿ ಹೊಂದಾಣಿಕೆ ಹೇಗೆ ಎನ್ನುವುದು.

ಈಶಾನ್ಯ ಭಾರತ ಮತ್ತು ಬೆಟ್ಟ ರಾಜ್ಯಗಳು

ಈಶಾನ್ಯ ಭಾರತ, ಜಮ್ಮು ಮತ್ತು ಕಾಶ್ಮೀರ, ಜಾರ್ಖಂಡ್, ಹಿಮಾಚಲ ಪ್ರದೇಶ ಸೇರಿದಂತೆ ಪರ್ವತ ಪ್ರದೇಶಗಳಲ್ಲಿನ ಕೈಗಾರಿಕೆಗಳಿಗೆ ನೀಡುವ ಪ್ರದೇಶ–ಆಧಾರಿತ ಅಬಕಾರಿ ಸುಂಕ ರಿಯಾಯಿತಿ ಜಿಎಸ್‌ಟಿಯಿಂದಾಗಿ ಗಣನೀಯ ಪ್ರಮಾಣದಲ್ಲಿ ಕುಸಿಯಲಿದೆ ಎಂದು ಬಿಸಿನೆಸ್ ಲೈನ್ ದಿನಪತ್ರಿಕೆ ವರದಿ ಮಾಡಿದೆ. ಸದ್ಯ ಇರುವ ಉದ್ದಿಮೆಗಳಿಗೆ ಇದನ್ನು ಒಂದು ಬಾರಿಗೆ ವಿಸ್ತರಿಸಲಾಗಿದೆ. ಆದರೆ ಜಿಎಸ್‌ಟಿ ವ್ಯವಸ್ಥೆಯಲ್ಲಿ ಯಾವುದೇ ರಿಯಾಯಿತಿ ಇರುವುದಿಲ್ಲ. ಕೈಗಾರಿಕಾ ಘಟಕಗಳು ಮೊದಲಿಗೆ ಜಿಎಸ್‌ಟಿಯನ್ನು ಪಾವತಿಸಬೇಕು ನಂತರದಲ್ಲಿ ಕ್ಲೇಮ್ ಮಾಡಿಕೊಳ್ಳಬೇಕಾಗಿದೆ. ಅದರಲ್ಲೂ ಸಹ ಇದು ಪೂರ್ಣ ಪ್ರಮಾಣದಲ್ಲಿ ಕ್ಲೇಮ್ ಆಗುವುದಿಲ್ಲ. ಏಕೆಂದರೆ ಇಂತಹ ಐಜಿಎಸ್‌ಟಿಯನ್ನು ಕೇಂದ್ರ ಮತ್ತು ರಾಜ್ಯಗಳಿಗೆಂದು 58:42ರ ಪ್ರಮಾಣದಲ್ಲಿ ವಿಭಜಿಸಲಾಗುವುದು. ಕೇವಲ ಕೇಂದ್ರದ 58%ದಲ್ಲಿ ಮಾತ್ರ ಹಣ ಮರುಪಾವತಿ ಸಿಗುತ್ತದೆ. ಹೀಗಾಗಿ ಈ ಜಿಎಸ್‌ಟಿ ನೀತಿ ಈಶಾನ್ಯ ಭಾರತ ಮತ್ತು ಪರ್ವತ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆಯನ್ನು ಉತ್ತೇಜಿಸುವ ಬದಲು ಮತ್ತಷ್ಟು ನಿರುತ್ತೇಜಗೊಳಿಸಲಿದೆ.

ಸಾಮಾನ್ಯ ಜನರ ಮೇಲೆ ಬೃಹತ್ ಪರೋಕ್ಷ ತೆರಿಗೆ ಹೊರೆ:

ಜಿಎಸ್‌ಟಿ ಪ್ರಮುಖವಾಗಿ ಮೂರು ಅಂಶಗಳನ್ನು ಒಳಗೊಂಡಿದೆ. ಕೇಂದ್ರ ಅಬಕಾರಿ ಸುಂಕ (ಸಿಇಡಿ) ಮತ್ತು ಸೇವಾ ತೆರಿಗೆ ಹಾಗೂ ರಾಜ್ಯಗಳಲ್ಲಿನ ಮಾರಾಟ ತೆರಿಗೆ. ಒಂದೇ ಹೊಡೆತದಲ್ಲಿ ಕೇಂದ್ರ ಸರ್ಕಾರ ತನ್ನ ಪರೋಕ್ಷ ತೆರಿಗೆಗಳನ್ನು ಹಲವು ಪಟ್ಟು ಹೆಚ್ಚಿಸಿಕೊಂಡಿದೆ. ಸಿಇಡಿ ಉತ್ಪಾದನೆಯಾಗುವ ಸ್ಥಳಕ್ಕೆ ಸಂಬಂಧಿಸಿದ್ದಾದರೆ ಜಿಎಸ್‌ಟಿ ಸರಕು ಮಾರಾಟವಾಗುವ ಸ್ಥಳಕ್ಕೆ ಸಂಬಂಧಿಸಿದ್ದಾಗಿದೆ. ಇಲ್ಲಿ ಸರಕು ಉತ್ಪಾದನೆಯಾಗುವ ಸ್ಥಳದಲ್ಲಿನ ಖರ್ಚು/ಬೆಲೆಗೂ ಅದು ಗ್ರಾಹಕರಿಗೆ ಸೇರುವ ಸ್ಥಳದಲ್ಲಿನ ಬೆಲೆಗೂ ನಡುವೆ ಭಾರಿ ವ್ಯತ್ಯಾಸವಿದೆ. ಹೀಗಾಗಿ ಕೇಂದ್ರ ಸರ್ಕಾರಕ್ಕೆ ತಲುಪುತ್ತಿದ್ದ ಸರಕು ಉತ್ಪಾದನೆ ಸ್ಥಳದಲ್ಲಿನ ತೆರಿಗೆಗೂ ಮತ್ತು ಗ್ರಾಹಕರಿಗೆ ತಲುಪುವ ಸ್ಥಳದಲ್ಲಿ ವಿಧಿಸುವ ಸಿಜಿಎಸ್‌ಟಿಗೂ ಭಾರಿ ಅಂತರವಿದೆ. ಮತ್ತೊಂದು ಪ್ರಮುಖ ವಿಷಯ ಎಂದರೆ ಸಿಇಡಿ ನಿಗದಿತವಾಗಿದ್ದು ಉತ್ಪಾದನಾ ವೆಚ್ಚದಿಂದ ಸ್ವಲ್ಪ ಏರುಪೇರಾಗುತ್ತದೆ. ಆದರೆ ಜಿಎಸ್‌ಟಿ ಪ್ರತಿ ಚಿಲ್ಲರೆ ಬೆಲೆ ಏರಿದಂತೆಲ್ಲ ಏರುತ್ತಲೇ ಇರುತ್ತದೆ. ತೆರಿಗೆ ಸಂಗ್ರಹದಲ್ಲಿ ಇದ್ದಕ್ಕಿದ್ದಂತೆ ಏರಿಕೆ ಕಾಣುವ ಲಾಭವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂತೋಷದಿಂದ ಹಂಚಿಕೊಳ್ಳುತ್ತವೆ. ರೈಲು,ರಸ್ತೆ, ಜಲ ಸಾರಿಗೆ, ಅಂಚೆ ಮತ್ತು ದೂರಸಂಪರ್ಕ ಮತ್ತಿತರ ಅಗತ್ಯ ಸೇವೆಗಳ ಮೇಲೂ ಜಿಎಸ್‌ಟಿ ವಿಧಿಸಲಾಗುವುದು.

ಜಿಎಸ್‌ಟಿಎನ್ ರಚನೆ ಮತ್ತು ಪಾತ್ರ

ಜಿಎಸ್‌ಟಿಗೆ ಸಂಬಂಧಿಸಿದ ಎಲ್ಲ ಮಾಹಿತಿಗಳ ಎಲ್ಲ ಸಂಗ್ರಹ, ಕ್ರೋಡೀಕರಣ ಮತ್ತು ತೀರ್ಮಾನಗಳನ್ನು ಕೇಂದ್ರ ಸರ್ಕಾರ 2013ರಲ್ಲಿ ಸ್ಥಾಪಿಸಿದ ಖಾಸಗಿ ಸಂಸ್ಥೆ 'ಜಿಎಸ್‌ಟಿ ನೆಟ್‌ವರ್ಕ್' (ಜಿಎಸ್‌ಟಿಎನ್) ಗೆ ದಯಪಾಲಿಸಿದೆ. ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಶೇರುಗಳ ಪ್ರಮಾಣ ತಲಾ ಶೇ.24.5ರಷ್ಟು ಹಂಚಿಕೊಂಡರೆ ಖಾಸಗಿ ಕಂಪನಿಗಳು ಒಟ್ಟಾರೆಯಾಗಿ ಶೇ.51ರಷ್ಟು ಶೇರುಗಳನ್ನು ಹೊಂದಿವೆ.

ಈ ಯೋಜನೆಯಲ್ಲಿ ತೊಡಗಿಸಿಕೊಂಡಿರುವ ಕೆಲವು ಖಾಸಗಿ ಕಂಪನಿಗಳಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ)ಗಳು ಶೇ.75ರಷ್ಟು ಪಾಲು ಹೊಂದಿದ್ದಾರೆ. ಸಂಸತ್ತಿನ ಒಳಗೆ ಮತ್ತು ಹೊರಗೆ ಈ ಬಗ್ಗೆ ಪ್ರಶ್ನೆಗಳನ್ನು ಎತ್ತಲಾಗಿತ್ತು. ಜಿಎಸ್‌ಟಿಎನ್ ಸಾರ್ವಜನಿಕ ವಲಯವೂ ಸೇರಿದಂತೆ ವ್ಯಾಪಾರ ಮತ್ತು ವಾಣಿಜ್ಯಕ್ಕೆ ಸಂಬಂಧಪಟ್ಟಂತೆ ಸಂಗ್ರಹಿಸುವ ಮಾಹಿತಿಗಳು ವಿದೇಶಿ ಕಂಪನಿಗಳಿಗೂ ಸುಲಭವಾಗಿ ಲಭ್ಯವಾಗಿರುವಾಗ ಎಷ್ಟು ಭದ್ರ ಹಾಗೂ ಗೋಪ್ಯವಾಗಿರಲು ಸಾಧ್ಯ ಎಂಬ ಪ್ರಶ್ನೆ ಎದ್ದಿತ್ತು.

ಜಿಎಸ್‌ಟಿಎನ್ ನಲ್ಲಿ ಪಾಲು ಹೊಂದಿರುವ ಖಾಸಗಿ ಕಂಪನಿಗಳ ಬಗ್ಗೆ ಯಾವುದೇ ಭದ್ರತಾ ಸ್ಪಷ್ಟೀಕರಣ ಪಡೆದಿಲ್ಲ ಎಂದು ಸರಕಾರವೇ ಒಪ್ಪಿಕೊಂಡಿದೆ. ಇದೊಮದು ಖಾಸಗಿ ಸಂಸ್ಥೆಯಾದ್ದರಿಂದ ಇದರ ಲೆಕ್ಕ ಪರಿಶೋಧನೆ ಸಿಎಜಿ(ಮಹಾಲೆಕ್ಕ ಪರಿಶೋಧಕರ) ಯ ವ್ಯಾಪ್ತಿಗೆ ಬರುವುದಿಲ್ಲ. ಇತ್ತೀಚೆಗೆ ಅದು ಸಿಎಜಿಗೆ ಮಾಹಿತಿ ನೀಡಲು ನಿರಾಕರಿಸಿತು.. ಹಾಗಿದ್ದರೆ ಸಿಎಜಿ ಲೆಕ್ಕ ಪರಿಶೋಧಕರು ಜಿಎಸ್‌ಟಿ ಮಾಹಿತಿ ಪಡೆಯುವುದು ಹೇಗೆ?

ಕಾರ್ಮಿಕರ ಸಾಮಾಜಿಕ ಭದ್ರತೆಯ ಮೇಲೆ ದಾಳಿ

ಹಣಕಾಸು ಕಾಯ್ದೆ, 2016 ಹಲವಾರು ಕಾರ್ಮಿಕರ ಸಾಮಾಜಿಕ ಕಲ್ಯಾಣ ಶಾಸನಗಳನ್ನು ರದ್ದು ಮಾಡಿತು ಮತ್ತು ಸೆಸ್‌ಗಳನ್ನು, ಆಮೂಲಕ ಜಿಎಸ್‌ಟಿಯನ್ನು ರದ್ದು ಮಾಡಿತು. ಇದರ ಆಧಾರದ ಮೇಲೆ ಕೇಂದ್ರ ಹಣಕಾಸು ಇಲಾಖೆ ಜುಲೈ 27, 2016ರಂದು ಅಧಿಸೂಚನೆ ಹೊರಡಿಸಿ ಈ ಯಾವ ಸೆಸ್‌ಗಳನ್ನೂ ಎಪ್ರಿಲ್ 2016ರಿಂದ ವಸೂಲಿ ಮಾಡಬಾರದು ಎಂದು ನಿರ್ದೇಶಿಸಿತು. ಈ ಮೂಲಕ ಭ್ರಕ, ಉಪ್ಪು, ವಾಣಿಜ್ಯ ಹಡಗುಗಳು, ಜವಳಿ, ಬೆಣಚುಗಲ್ಲು ಮತ್ತು ಡೊಲೊಮೈಟ್ ಗಣಿಗಳು, ತಂಬಾಕು, ಕಬ್ಬಿಣ ಅದಿರು ಗಣಿ, ಮ್ಯಾಂಗನೀಸ್ ಗಣಿ, ಕ್ರೋಮ್ ಗಣಿ ಮತ್ತು ಸಿನಿಮಾ ಕಾರ್ಮಿಕರು ಸವಿರಿದಂತೆ ಒಟ್ಟು ಸುಮಾರು 1.5 ಕೋಟಿ ಕಾರ್ಮಿಕರು ಸಾಮಾಜಿಕ ಕಲ್ಯಾಣ ಸೌಲಭ್ಯಗಳಿಮದ ವಂಚಿತರಾಗಿದ್ದಾರೆ. ಮೋದಿ ಸರಕಾರ ಈಗಾಗಲೇ ಎಲ್ಲ ಸಾಮಾಜಿಕ ಕಲ್ಯಾಣ ಕಾಯ್ದೆಗಳನ್ನು ಏಕೈಕ ಸಾಮಾಜಿಕ ಭದ್ರತಾ ಸಂಹಿತೆಯಲ್ಲಿ ಸವಿರಿಸಿದ್ದು, ಇದನ್ನು ಕಾರ್ಮಿಕ ಸಂಘಗಳು ವಿರೋಧಿಸುತ್ತಿವೆ.

ಔಷಧ ದರಗಳಲ್ಲಿ ಏರಿಕೆ:

ಯುಪಿಎ ಸರ್ಕಾರ 2013ರಲ್ಲಿ ಅಧಿಸೂಚನೆ ಹೊರಡಿಸಿ 348 ಅಗತ್ಯ ಔಷಧಿಗಳಿಗೆ ಕೇಂದ್ರ ಅಬಕಾರಿ ಸುಂಕದಿಂದ ವಿನಾಯ್ತಿ, ಕೆಲವು ಇತರೆ ಪ್ರಮುಖ ಔಷಧಿಗಳ ಮೇಲೆ ಸೊನ್ನೆ ಸುಂಕ, ಮತ್ತಿತರ ಕೆಲವು ಔಷಧಗಳ ಮೇಲೆ ತೂಕಕ್ಕೆ ಅನುಸಾರವಾಗಿ ಶೇ.6ರಷ್ಟು ಸುಂಕ ಮಾತ್ರ ನಿಗದಿಪಡಿಸಿತ್ತು. ಆದರೆ ಜಿಎಸ್‌ಟಿ ಮಂಡಳಿ ಈ ಅಧಿಸೂಚನೆಯನ್ನು ನಿರ್ಲಕ್ಷಿಸಿ, ಅದರ ಹಿಂದಿನ ಅಧಿಸೂಚನೆಯಲ್ಲಿನ ಹೆಚ್ಚಿನ ತೆರಿಗೆ ದರಗಳನ್ನೇ ಪರಿಗಣಿಸಿದೆ. ಇದರಿಂದಾಗಿ ಮನುಷ್ಯನ ರಕ್ತ ಮತ್ತು ಗರ್ಭನಿರೋಧಕಗಳು ಮಾತ್ರವೇ ಜಿಎಸ್‌ಟಿಯಿಂದ ವಿನಾಯ್ತಿ ಪಡೆದಿವೆ. ಅಗತ್ಯ ಔಷಧಗಳಿಗೆ ಶೇ.5ರಷ್ಟು ನಿಗದಿಪಡಿಸಲಾಗಿದೆ ಮತ್ತು ಇತರ ಎಲ್ಲ ಔಷಧಗಳ ಮೇಲೆ ಶೇ.12ರಷ್ಟು ಜಿಎಸ್‌ಟಿ ನಿಗದಿಪಡಿಸಲಾಗಿದೆ. ಇದರ ಪರಿಣಾಮವಾಗಿ ಎಲ್ಲ ಅಗತ್ಯ ಔಷಧಗಳ ದರಗಳು ಶೇ.2.5ರವರೆಗೂ ಹೆಚ್ಚಲಿವೆ. ಇತರ ಔಷಧಗಳ ಮೇಲಿನ ದರಗಳು ಸಹ ನಿರಂತರವಾಗಿ ಏರಿಕೆಯಾಗಲಿದೆ. ●

ರಾಷ್ಟ್ರ-ವಿರೋಧಿ ಧೋರಣೆಗಳ ವಿರುದ್ಧ ಹೋರಾಟ, ರೈತರಿಗೆ ಹೋರಾಟಗಳಿಗೆ ಸೌಹಾರ್ದ

ಸಿಐಟಿಯು ಕಾರ್ಯಕಾರಿ ಸಮಿತಿಯ ಕರೆ

ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ ಸಿಐಟಿಯು ನ ಅಖಿಲ ಭಾರತ ಕಾರ್ಯಕಾರಿ ಸಮಿತಿ ಸಭೆ ಜುಲೈ 14ರಿಂದ 16 ರವರೆಗೆ ಅತ್ಯಂತ ಗಂಭೀರವಾಗಿಯೂ ಸ್ಫೂರ್ತಿದಾಯಕವಾಗಿಯೂ ನಡೆಯಿತು.

ವರ್ಗ ಸಂಘರ್ಷದಲ್ಲಿ ರಾಜಿ ಇಲ್ಲದ ಸಿಐಟಿಯು ಮಾತ್ರವೇ ದೇಶದ ಪ್ರತಿಯೊಂದು ಆಗುಹೋಗುಗಳಿಗೆ ತಕ್ಷಣ ಪ್ರತಿಕ್ರಿಯಿಸುತ್ತದೆ, ಜನವಿರೋಧಿ ದೇಶವಿರೋಧಿ ನಿಲುಮೆಗಳ ವಿರುದ್ಧ ಕಾರ್ಮಿಕರನ್ನು ಬೀದಿಗಿಳಿಸಿ ಜಾಗೃತಗೊಳಿಸಿ ಆಳುವವರ ಕ್ರೂರ ದಾಳಿಗಳನ್ನು ಹಿಮ್ಮೆಟ್ಟಿಸಲು ಜನತೆಯನ್ನು ರಕ್ಷಿಸಲು ಮುಂದಾಗುತ್ತಿದೆ. ಕೋಮುವಾದಿ ಆರ್.ಎಸ್.ಎಸ್ ದೇಶದಾದ್ಯಂತ ಬಾರತದ ಬಹುತ್ವಕ್ಕೆ ಅಪಾಯ ತಂದಿಟ್ಟಿದೆ. ಇಂಥ ನಿರ್ಣಾಯಕ ಸಂದರ್ಭದಲ್ಲಿ ನಮ್ಮೆದುರು ಇರುವ ಸವಾಲುಗಳನ್ನೇ ನಮಗಿರುವ ಅವಕಾಶಗಳನ್ನಾಗಿ ಪರಿವರ್ತಿಸಿಕೊಳ್ಳೋಣ." ಎಂದು ಸಭೆಯ ಆರಂಭದಲ್ಲಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಡಾ. ಹೇಮಲತಾ ಅವರು ಕರೆಕೊಟ್ಟರು. ಅವರ ಅಧ್ಯಕ್ಷೀಯ ಭಾಷಣ ಪ್ರಪಂಚದಲ್ಲಿನ ಮತ್ತು ದೇಶದಲ್ಲಿನ ರಾಜಕೀಯ, ಆರ್ಥಿಕ ಬೆಳವಣಿಗೆಗಳ ಒಂದು ಪಕ್ಷಿನೋಟವನ್ನು ನೀಡಿತು.

ಪ್ರಧಾನ ಕಾರ್ಯದರ್ಶಿಗಳು ದೇಶದ ಪ್ರಮುಖ ವಿದ್ಯಮಾನಗಳ ಹಿನ್ನೆಲೆಯಲ್ಲಿ ಕಾರ್ಮಿಕ ವರ್ಗ ಎದುರಿಸುತ್ತಿರುವ ಸಮಸ್ಯೆಗಳ ಸ್ವರೂಪ ಹೋರಾಟ ಹತ್ತಿಕ್ಕುವ ಕ್ರಿಯೆ ಮತ್ತು ಪ್ರತಿರೊಧಗಳು, ಕೆಲಸದ ಪ್ರದೇಶದಲ್ಲಿ ಅನಾಹುತ ಅವಘಡಗಳು, ದೇಶವ್ಯಾಪಿ ಬಲಗೊಳ್ಳುತ್ತಿರುವ ರೈತರ ಸಖ್ಯತೆ ವಿಶಾಲ ಹೋರಾಟಗಳು ಅದರಲ್ಲಿ ನಮ್ಮ ಪಾಲ್ಗೊಳ್ಳುವಿಕೆ ಹಾಗೂ ಮುಂದಿನ ಕರ್ತವ್ಯಗಳನ್ನು ಮಂಡಿಸಿದರು. ದೇಶಾದ್ಯಂತದಿಂದ ವಿವಿಧ ರಾಜ್ಯಗಳನ್ನು ಪ್ರತಿನಿಧಿಸಿ 47 ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡರು.

ದೇಶದ ಕಾರ್ಮಿಕರನ್ನು ಮತ್ತು ಸಾಮಾನ್ಯ ಜನತೆಯನ್ನು ಕಾಡುತ್ತಿರುವ ಹಲವಾರು ಅಂಶಗಳು ಚರ್ಚೆಯಾಗಿ ಹೋರಾಟದ ತೀರ್ಮಾನವನ್ನು ಕೈಗೊಳ್ಳಲಾಗಿದೆ. ಕರ್ನಾಟಕದಿಂದ ಕಾರ್ಯಕಾರಿ ಸಮಿತಿ ಸಭೆಗೆ ಹಾಜರಾದ ಕಾ. ಮೀನಾಕ್ಷಿ ಸುಂದರಂ, ಕನಿಷ್ಟಕೂಲಿ ಮತ್ತು ಸಂವಿಧಾನಾತ್ಮಕ ಹಿನ್ನೆಲೆ ಬಗ್ಗೆ ವಿಜೆಕೆ ನಾಯರ್, ಸಾರ್ವಜನಿಕ ಕೈಗಾರಿಕೆಗಳು ಹಾಗೂ ಕರ್ನಾಟಕದ ರಾಜಕೀಯ ಪರಿಸ್ಥಿತಿಯಲ್ಲಿ ಬೆಳೆದು ಬರುತ್ತಿರುವ ಕಾರ್ಮಿಕರ ಮತ್ತು ರೈತರ ಹೋರಾಟಗಳು ಕುರಿತು ಕೆ.ಎನ್. ಉಮೇಶ, ಚಟುವಟಿಕೆಗಳು ಮತ್ತು ಕರ್ತವ್ಯಗಳ ಕುರಿತು ಸಯ್ಯದ್ ಮುಜೀಬ್ ಮತ್ತು ಯಮುನಾ ಗಾಂವ್ಕರ್ ತಮ್ಮ ಅಭಿಪ್ರಾಯಗಳನ್ನು ಸಾಂದರ್ಭಿಕವಾಗಿ ವ್ಯಕ್ತಪಡಿಸಿದರು.

ದುಡಿಯುವ ಮಹಿಳೆಯರ ಅಖಿಲ ಭಾರತ ಸಭೆ:

ಕಾರ್ಯಕಾರಿ ಸಮಿತಿಯ ಮುನ್ನಾದಿನ ನಡೆದ ದುಡಿಯುವ ಮಹಿಳೆಯರ ಸಭೆ ನಡೆಯಿತು. ದುಡಿಯುವ ಪ್ರದೇಶದಲ್ಲಿ ಹೆಚ್ಚುತ್ತಿರುವ ದೌರ್ಜನ್ಯಗಳು, ಕಿರಕುಳ ಮತ್ತು ಲೈಂಗಿಕ ದಾಳಿ ಹಾಗೂ ಅಸುರಕ್ಷಿತತೆಯ ಅನುಭವಗಳ ಕುರಿತು ಸಭೆ ತೀವ್ರ ಆತಂಕ ವ್ಯಕ್ತಪಡಿಸಿತು ಮಾತ್ರವಲ್ಲ ಜಿಎಸ್.ಟಿಯ ಪ್ರಹಾರದಿಂದಾಗಿ ಸಾಮಾನ್ಯ ಮಹಿಳೆಯರು ತತ್ತರಿಸುವಂತಾಗಿದೆ ಹಾಗೂ ಸ್ಯಾನಿಟರಿ ನ್ಯಾಪ್ ಕಿನ್ ನಂಥ ವಸ್ತುವಿನ ಮೇಲೆ ಅತಿಯಾದ ತೆ-ರಿಗೆ ವಿರುದ್ಧ ಹೋರಾಟ ತೀವ್ರಗೊಳಿಸಬೇಕೆಂಬುದನ್ನು ಒತ್ತಿ ಹೇಳಲಾಯಿತು. ಲೈಂಗಿಕ ಕಿರುಕುಳದ ವಿರುದ್ಧ ಎಲ್ಲಾ ಹಂತಗಳಲ್ಲಿ ಅರಿವು ಮೂಡಿಸಲು ಕಾರ್ಯಾಗಾರಗಳನ್ನು, ಶಿಬಿರಗಳನ್ನು ನಡೆಸುವುದು ಮತ್ತು ಈ ಹಿಂದೆ ತೀರ್ಮಾನಿಸಿದಂತೆ ಪುರುಷ ಹಾಗೂ ಮಹಿಳೆಯರು ಒಟ್ಟಾಗಿ ಕಎಲಸ ಮಾಡುವ ಕೈಗಾರಿಕೆಗಳಲ್ಲಿ, ವಿವಿಧ ವಲಯಗಳಲ್ಲಿ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ, ಉಪಸಮಿತಿಗಳನ್ನು ರಚಿಸಿ ದುಡಿಯುವ ಮಹಿಳೆಯರಿಗೆ ಕೆಲಸದ ಪ್ರದೇಶದಲ್ಲಿ ಸಹ್ಯ ವಾತಾವರಣ ನಿರ್ಮಾಣಕ್ಕೆ ಶ್ರಮಿಸಲು ಸಭೆ ತೀರ್ಮಾನಿಸಿತು.

ಅಖಿಲ ಭಾರತ ಕಾರ್ಯಕಾರಿ ಸಮಿತಿಯ ತೀರ್ಮಾನಗಳು:

ರಾಷ್ಟ್ರೀಯ ಸಮ್ಮೇಳನದ ನಂತರದ ಏಳು ತಿಂಗಳುಗಳ ಬೆಳವಣಿಗೆಗಳನ್ನು ಪರಾಮರ್ಶಿಸಿದ ಕಾರ್ಯಕಾರಿ ಸಮಿತಿಯ ಸಭೆಯು ಕೇಂದ್ರದ ಸರ್ಕಾರದ ಹಾಗು ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಈ ಕೆಳಗಿನ ಕರ್ತವ್ಯಗಳನ್ನು ನಿರ್ವಹಿಸಲು ನಿರ್ದೇಶಿಸಿದೆ.

- ಕೇಂದ್ರ ಸರ್ಕಾರವು ತನ್ನ ಸಾಧನೆಯೆಂದು ಬಿಂಬಿಸುತ್ತಿರುವ 'ಒಂದು ದೇಶ ಒಂದು ತೆರಿಗೆ ಒಂದು ಮಾರುಕಟ್ಟೆ' ಘೋಷ ವಾಕ್ಯದ ಜಿಎಸ್‌ಟಿ ವಿರುದ್ಧ ವಿವಿದ ಭಾದಿತ ಜನ ವಿಭಾಗಗಳು ನಡೆಸುತ್ತಿರುವ ಹೋರಾಟಗಳಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ಕರೆ ನೀಡಿದೆ. (ಜಿಎಸ್‌ಟಿ ಕುರಿತು ಒಂದು ಪ್ರತ್ಯೇಕ ನಿರ್ಣಯವನ್ನು ಅಂಗೀಕರಿಸಲಾಯಿತು.)
- ಸಿಐಟಿಯುವಿನ ಸ್ವತಂತ್ರ ಕಾರ್ಯಾಚರಣೆ ಹಾಗು ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಚಟುವಟಿಕೆಗಳನ್ನು ಜಾರಿ ಮಾಡುವ ನಿಟ್ಟಿನಲ್ಲಿ ರೂಪಿಸ ಬೇಕಾದ ಯೋಜನೆಗಳನ್ನು ಹಾಗು ವಿಮರ್ಶೆಯಲ್ಲಿ ಸಂಘಟನೆಯನ್ನು ಇಡೀಯಾಗಿ ಭಾಗವಹಿಸುವಂತೆ ಮಾಡಬೇಕು. ಎಲ್ಲಾ ಸದಸ್ಯರುಗಳನ್ನು ಕ್ರಿಯಾಶೀಲಗೊಳಿಸಬೇಕು.
- ಅಗಸ್ಟ್ 8, 2017ರಂದು ನವದೆಹಲಿಯಲ್ಲಿ ನಡೆಯಲಿರುವ ಕಾರ್ಮಿಕ ಸಂಘಟನೆಗಳ ಜಂಟಿ ಸಮಾವೇಶದಲ್ಲಿ (ಜೆಸಿಟಿಯು) ಕೈಗೊಳ್ಳುವ ತೀರ್ಮಾನಗಳ ಜಾರಿಗೆ ತೀವ್ರತರ ಪ್ರಚಾರ ನಡೆಸಲು ಗಂಬೀರ ಪ್ರಯತ್ನಗಳನ್ನು ಮಾಡಬೇಕು.
- ಜೆಸಿಟಿಯುವಿನ 12 ಅಂಶಗಳ ಬೇಡಿಕೆಗಳ ಜತೆಗೆ, ಸಿಐಟಿಯು ರೂಪಿಸಿರುವ 10 ಬೇಡಿಕೆಗಳಿಗಾಗಿ ಅಗಸ್ಟ್ ಹಾಗು ಸೆಪ್ಟೆಂಬರ್ ತಿಂಗಳುಗಳಲ್ಲಿ ವ್ಯಾಪಕ ಪ್ರಚಾರಾಂದೋಳನಗಳನ್ನು ಸಿಐಟಿಯು ಸ್ವತಂತ್ರವಾಗಿ ಮಾಡಬೇಕು. ಈ ಸಂಬಂದ ಸಿಐಟಿಯು ಸದಸ್ಯತ್ವವನ್ನು ಮೀರಿ ತಲುಪದೇ ಇರುವ ಕಾರ್ಮಿಕರನ್ನು ತಲುಪಲು ಸಿಐಟಿಯು ರಾಜ್ಯ ಸಮಿತಿ ಯೋಜನೆಗಳನ್ನು ರೂಪಿಸ ಬೇಕು.
- ಕೋಮುವಾದಿ ಹಾಗು ವಿಚಿತ್ರಕಾರಿ ಶಕ್ತಿಗಳ ವಿರುದ್ಧ ಸಿಐಟಿಯು ಸ್ವತಂತ್ರ ಪ್ರಚಾರವನ್ನು ಈ ಮೇಲಿನ ಆಂದೋಳನದ ಭಾಗವಾಗಿಸಬೇಕು.
- ಜಿಲ್ಲೆಗಳು ಹಾಗು ಅದಕ್ಕಿಂತ ಕೆಳಹಂತದದಲ್ಲಿ ಮೂಡಿಬರುವ ರೈತರ ಹಾಗು ಕೃಷಿಕೂಲಿಗಾರರ ಹೋರಾಟಗಳಲ್ಲಿ ಕ್ರಿಯಾಶೀಲ ಬಾಗವಹಿಸುವಿಕೆ ಯೊಂದಿಗೆ ಎಲ್ಲಾ ರೀತಿಯ ಸೌಹಾರ್ದತೆಯನ್ನು ನೀಡಬೇಕು. ರೈತ ಸಂಘ ಹಾಗು ಕೃಷಿಕೂಲಿಕಾರರ ಸಂಘದ ನಾಯಕತ್ವದೊಂದಿಗೆ ರಾಜ್ಯ ಮಟ್ಟದಲ್ಲಿ ಸಭೆ ನಡೆಸಿ ಚರ್ಚಿಸಿ ಜಂಟಿ ಹೋರಾಟಗಳನ್ನು ರೂಪಿಸಲು ಇರುವ ಸಾಧ್ಯತೆಗಳ ಕುರಿತು ಯೋಜಿಲು ಅಗತ್ಯ ಮುತುವರ್ಜಿ ವಹಿಸಬೇಕು. ರೈತ ಚಳುವಳಿಗಳು ಜಂಟಿಯಾಗಿ ರೂಪಿಸಿರುವ ಜುಲೈ 18ರ ಸಂಸತ್ ಚಲೋ ಹಾಗು ಅಗಸ್ಟ್ 9ರ ಜಿಲ್ಲಾ ಮಟ್ಟದ ಪ್ರದರ್ಶನಗಳು ಇತ್ಯಾದಿಗಳ ಯಶಸ್ವಿಗೆ ಯೋಜನೆಗಳನ್ನು ರೂಪಿಸಬೇಕು.
- ಸರ್ಕಾರಗಳು ನಡೆಸಲು ಮುಂದಾಗಿರುವ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣದ ವಿರುದ್ಧ ಕರಪತ್ರ ವಿತರಣೆ, ಬಹಿರಂಗ ಸಭೆಗಳು, ವಿಚಾರಸಂಕೀರಣ ಮುಂತಾದ ವಿವಿಧ ಸ್ವರೂಪಗಳ ಕಾರ್ಯಕ್ರಮಗಳಲ್ಲಿ ಸಿಐಟಿಯು ಸದಸ್ಯರು ಹಾಗು ವಿವಿದ ಜನ ಸಮೂಹಗಳ ನಡುವೆ ವ್ಯಾಪಕ ಪ್ರಚಾರ ಮಾಡಬೇಕು. ಖಾಸಗೀಕರಣದ ದಾಳಿಯನ್ನು ಎದುರಿಸುತ್ತಿರುವ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಸಮರ ದೀರ ಪ್ರತಿಭಟನೆಗಳು ಹಾಗು ಮುಷ್ಕರಗಳನ್ನು ಸಂಘಟಿಸುವುದರಲ್ಲಿ ಸಿಐಟಿಯು ಪ್ರಮುಖ ಪಾತ್ರ ವಹಿಸಬೇಕು. ಹಾಗು ಇದಕ್ಕಾಗಿ ಇತರೆ ಕಾರ್ಮಿಕರ ಸೌಹಾರ್ದತೆಯನ್ನು ಅಣಿನೆರಸಬೇಕು.
- ನವೆಂಬರ್ 7, 2017ರ ವರೆಗೆ ಅಕ್ಟೋಬರ್ ಮಹಾಕ್ರಾಂತಿಯ ಪ್ರಸ್ತುತೆ ಹಾಗು ದುಡಿಯುವ ವರ್ಗದ ಪಾತ್ರದ ಕುರಿತು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ತಳಹಂತಗಳಲ್ಲಿ ಕಾರ್ಮಿಕರು ಹಾಗು ಸಮಾಜದ ಇತರೆ ಜನವಿಭಾಗವನ್ನು ವ್ಯಾಪಕವಾಗಿ ತೊಡಗಿಸಿಕೊಂಡು ವಿಚಾರಸಂಕೀರಣಗಳು ಇತ್ಯಾದಿ ಕಾರ್ಯಕ್ರಮಗಳನ್ನು ಸಂಘಟಿಸ ಬೇಕು. ರಾಜ್ಯ ಸಮಿತಿಗಳು ದೊಡ್ಡ ಸಭೆಗಳನ್ನು ಆಯೋಜಿಸಬೇಕು.
- ಸಿಐಟಿಯುವಿನ ಸ್ವತಂತ್ರ ಹಾಗು ಜಂಟಿ ಚಟುವಟಿಕೆಗಳ ಪ್ರಕ್ರಿಯೆಯಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳುವ ಕಾರ್ಯಕರ್ತರನ್ನು ಗುರುತಿಸಿ ಸೆಪ್ಟೆಂಬರ್-ಅಕ್ಟೋಬರ್ ತಿಂಗಳುಗಳಲ್ಲಿ ಎಲ್ಲಾ ರಾಜ್ಯ ಸಮಿತಿಗಳು ಹಾಗು ಒಕ್ಕೂಟಗಳು ರಾಜ್ಯ ಮಟ್ಟದ ತರಬೇತಿ ಶಿಬಿರಗಳನ್ನು ನಡೆಸಬೇಕು. ಈ ತರಬೇತಿ ಶಿಬಿರಗಳು ಸೈದ್ಧಾಂತಿಕ ತಿಳುವಳಿಕೆಗಳನ್ನು ಹೆಚ್ಚಿಸಲು ಕೇಂದ್ರೀಕೃತವಾಗಿರಬೇಕು.
- ಮುಂದಿನ ಮೂರು ತಿಂಗಳಲ್ಲಿ ಎಲ್ಲಾ ರಾಜ್ಯ ಸಮಿತಿಗಳು ರಾಜ್ಯ ಮಟ್ಟದಲ್ಲಿ ಸಾಧ್ಯತೆ ಇರುವ ಕಡೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಲೈಂಗಿಕ ಕಿರುಕುಳ ವಿರುದ್ಧ ಕಾರ್ಯಗಾರಗಳನ್ನು ನಡೆಸಬೇಕು.
- ಸಿಐಟಿಯುವಿನ ಎಲ್ಲಾ ರಾಜ್ಯ ಸಮಿತಿಗಳು ವಲಸೆ ಕಾರ್ಮಿಕರನ್ನು ಸಂಘಟಿಸಲು ಹಾಗು ಅವರ ನಿರ್ದಿಷ್ಟ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಲು ವಿಶೇಷ ಮುತುವರ್ಜಿ ವಹಿಸಬೇಕು.
- ಸಿಐಟಿಯು ಸಂಯೋಜಿತ ಎಲ್ಲಾ ಸಂಘಟನೆಗಳ ಯುವಕಾರ್ಮಿಕರ ಸಭೆಗಳನ್ನು ರಾಜ್ಯಸಮಿತಿ ಹಾಗು ಒಕ್ಕೂಟಗಳು ಆಯೋಜಿಸಬೇಕು.
- ದಲಿತರ ನಿರ್ದಿಷ್ಟ ವಿಚಾರಗಳ ಕುರಿತು ರಾಷ್ಟ್ರ ಮಟ್ಟದ ಸಭೆಯೊಂದನ್ನು ದೆಹಲಿಯಲ್ಲಿ ನಡೆಸಲಾಗುವುದು. ಅದರ ನಂತರದ ದಿನಗಳಲ್ಲಿ ಮುನಿಸಿಪಲ್ ಕಾರ್ಮಿಕರ ಸಂಘಟನೆಗಳಲ್ಲಿನ ನಾಯಕರ ರಾಷ್ಟ್ರಮಟ್ಟದ ಸಭೆಯನ್ನು ನಡೆಸಲಾಗುವುದು.
- 2017ರ ಕೊನೆಯ ವೇಳೆಗೆ ನಿರುದ್ಯೋಗದ ಪ್ರಶ್ನೆಯ ಕುರಿತು ರಾಷ್ಟ್ರೀಯ ಸಮಾವೇಶವನ್ನು ಸಂಘಟಿಸಬೇಕು. ಅದರ ಪೂರ್ವದಲ್ಲಿ ಅಥವಾ ನಂತರದಲ್ಲಿ ರಾಜ್ಯ ಸಮಾವೇಶಗಳನ್ನು ಸಂಘಟಿಸಬೇಕು.
- ಪರಿಸ್ಥಿತಿಯನ್ನು ಆಧರಿಸಿ ರಂಗವಾರು ಹೋರಾಟಗಳನ್ನು ಸ್ವತಂತ್ರವಾಗಿ ಅಥವಾ ಜಂಟಿಯಾಗಿ ಸಂಘಟಿಸಿ ತೀವ್ರಗೊಳಿಸಬೇಕು.
- ಜುಲೈ 26ರಂದು ಕ್ಯೂಬಾ ಸೌಹಾರ್ದ ದಿನಾಚರಣೆಯನ್ನು ಆಚರಿಸಬೇಕು. ○

ಆಗಸ್ಟ್ 9ರಂದು ರೈತರ ದೇಶವ್ಯಾಪಿ ಬೃಹತ್ ಹೋರಾಟ

ಜಿಲ್ಲೆಗಳಲ್ಲಿ ರ್‍ಯಾಲಿಗಳು- ಜೈಲ್ ಭರೋ: ಭೂಮಿ ಅಧಿಕಾರ್ ಆಂದೋಲನ್ ನಿರ್ಧಾರ

ಜುಲೈ 24ರಂದು ಸಭೆ ಸೇರಿದ ಭೂಮಿ ಅಧಿಕಾರ್ ಆಂದೋಲನ್(ಬಿಎಎ) ಸಮನ್ವಯ ಸಮಿತಿ ದೇಶದೆಲ್ಲೆಡೆಗಳಲ್ಲಿ ರೈತರು ನಡೆಸುತ್ತಿರುವ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿದೆ. ಆಗಸ್ಟ್ 9ರಂದು ಜಿಲ್ಲೆಗಳಲ್ಲಿ ರ್‍ಯಾಲಿಗಳಲ್ಲಿ ಜೈಲ್ ಭರೋ ಕಾರ್ಯಾಚರಣೆಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಲು ರೈತರಿಗೆ ಅದು ಕರೆ ನೀಡಿದೆ.

ಇದು ರೈತರ ಅತಿ ದೊಡ್ಡ ಹೋರಾಟವಾಗಲಿದೆ ಎಂದು ಬಿಎಎ ಹೇಳಿದೆ. ಈ ಕಾರ್ಯಾಚರಣೆಯನ್ನು ಯಶಸ್ವಿಗೊಳಿಸಲು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಸಕ್ರಿಯ ಬೆಂಬಲ ನೀಡಬೇಕು ಎಂದು ಕೋರಿದೆ. ರೈತಾಪಿಗಳು, ಕಾರ್ಮಿಕರು ಮತ್ತು ಇತರ ಶ್ರಮಜೀವಿ ವಿಭಾಗಗಳು ಪ್ರತಿಭಟನೆಯಲ್ಲಿ ಪಾಲ್ಗೊಳ್ಳುತ್ತಾರೆ ಎಂದು ಅದು ಹೇಳಿದೆ.

ಈ ಸಭೆ ಪ್ರಧಾನ ಮಂತ್ರಿಗಳಿಗೆ ಒಂದು ಮನವಿ ಪತ್ರವನ್ನು ಸಲ್ಲಿಸಲು ಸಂಸತ್ ಸದಸ್ಯರ ಒಂದು ತಂಡದ ನೆರವಿನೊಂದಿಗೆ ಪ್ರಧಾನಿಗಳನ್ನು ಭೇಟಿ ಮಾಡಲು ಕೂಡ ನಿರ್ಧರಿಸಿತು. ರೈತಾಪಿ ಜನಗಳು ಎದುರಿಸುತ್ತಿರುವ ಪ್ರಶ್ನೆಗಳನ್ನು ಚರ್ಚಿಸಿ ಪರಿಹರಿಸಲು ಮತ್ತು ರೈತರ ಹೋರಾಟದ ಇತ್ಯರ್ಥಕ್ಕೆ ರೈತ ಸಂಘಟನೆಗಳ ಒಂದು ಸಭೆಯನ್ನು ಕರೆಯುವಂತೆ ಪ್ರಧಾನ ಮಂತ್ರಿಗಳನ್ನು ಕೋರಲು ನಿರ್ಧರಿಸಿತು.

ರೈತರ ಆಗ್ರಹಗಳ ಪಟ್ಟಿ ಹೀಗಿದೆ:

1. ಕೇಂದ್ರ ಸರಕಾರ ಎಲ್ಲ ಬೆಳೆಗಳಿಗೆ ಉತ್ಪಾದನೆಯ ಖರ್ಚಿಗಿಂತ 50% ಹೆಚ್ಚು ಪ್ರತಿಫಲದಾಯಕ ಬೆಲೆಯ ಭರವಸೆ ಕೊಡುವ ಒಂದು ಕಾಯ್ದೆಯನ್ನು ತರಬೇಕು; ಸ್ವಾಮಿನಾಥನ್ ಅಧ್ಯಕ್ಷತೆಯ ರಾಷ್ಟ್ರೀಯ ರೈತರ ಆಯೋಗ ಶಿಫಾರಸು ಮಾಡಿರುವಂತೆ ಗ್ಯಾರಂಟಿ ಖರೀದಿ ಕೇಂದ್ರಗಳನ್ನು ವ್ಯವಸ್ಥೆ ಮಾಡಬೇಕು ಮತ್ತು ರೈತರ ಸಾಮಾಜಿಕ ಸಹಕಾರಿಗಳ ಅಡಿಯಲ್ಲಿ ಆಧುನಿಕ ಕೃಷಿ ಸಂಸ್ಕರಣೆ ಮತ್ತು ಮಾರಾಟ ಜಾಲಗಳನ್ನು ಪ್ರೋತ್ಸಾಹಿಸಬೇಕು.
2. ಸಾಂಸ್ಥಿಕ ಮತ್ತು ಖಾಸಗಿ ಸಾಲಗಳನ್ನೂ ಒಳಗೊಂಡಂತೆ ಎಲ್ಲ ರೈತರ ಸಮಗ್ರ ಸಾಲಮನ್ನಾ. ಎಲ್ಲ ರೈತ ಕುಟುಂಬಗಳಿಗೆ ಬಡ್ಡಿರಹಿತ ಸಾಂಸ್ಥಿಕ ಕೃಷಿ ಸಾಲನಿಡಿಕೆ ಮತ್ತು ರೈತರ ಆತ್ಮಹತ್ಯೆಗಳನ್ನು ತಡೆಯಲು ಯುದ್ಧೋಪಾದಿಯಲ್ಲಿ ಕ್ರಮಗಳು.
3. ಜಾನುವಾರು ಮಾರುಕಟ್ಟೆಗಳಲ್ಲಿ ಜಾನುವಾರು ವ್ಯಾಪಾರವನ್ನು ನಿಷೇಧಿಸುವ ಕೇಂದ್ರ ಸರಕಾರದ ಅಧಿಸೂಚನೆಯನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು. ಗೋರಕ್ಷಣೆಯ ಹೆಸರಲ್ಲಿ ವಿಶೇಷವಾಗಿ ಮುಸ್ಲಿಮರು ಮತ್ತು ದಲಿತರ ಮೇಲೆ ಹಿಂಸಾಚಾರ ನಡೆಸುವ, ಹೊಡೆದು ಸಾಯಿಸುವ ಕೋಮುವಾದಿ ವ್ಯಕ್ತಿಗಳ ವಿರುದ್ಧ ಕಟ್ಟುನಿಟ್ಟಾದ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು.
4. ಸಂಸತ್ತಿನ ಮುಂದಿರುವ ಭೂಸ್ವಾಧೀನ ಮಸೂದೆಯನ್ನು ಔಪಚಾರಿಕವಾಗಿಯೂ ಹಿಂತೆಗೆದುಕೊಳ್ಳಬೇಕು ಮತ್ತು ಎಲ್ಲ ಕಾನೂನುಬಾಹಿರ ಒಕ್ಕಲೆಬ್ಬಿಸುವಿಕೆಗಳನ್ನು ನಿಲ್ಲಿಸಬೇಕು.
5. ಅರಣ್ಯ ಹಕ್ಕುಗಳ ಕಾಯ್ದೆಯನ್ನು ಒಂದು ವರ್ಷದ ಸಮಯ ಚೌಕಟ್ಟಿನೊಳಗೆ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.
6. ಮನರೇಗವನ್ನು ಕೃಷಿಯೊಂದಿಗೆ ಬೆಸೆದು ಮತ್ತು ಎಲ್ಲ ಗ್ರಾಮೀಣ ಕೆಲಸಗಾರರಿಗೆ ಕನಿಷ್ಟ ಕೂಲಿ ದೊರೆಯುವಂತೆ ಸಮಗ್ರ ಜಾರಿ.
7. ಎಲ್ಲ ಕೂಲಿಕಾರರು ಮತ್ತು 2ಎಕ್ರೆ ವರೆಗೆ ಜಮೀನು ಹೊಂದಿರುವ ಸಣ್ಣ ಮತ್ತು ಅಂಚಿನಲ್ಲಿರುವ ರೈತರಿಗೆ 60ವರ್ಷವಾದಾಗ ಮಾಸಿಕ 5000ರೂ. ಪೆನ್ಶನ್ ಸಿಗುವಂತೆ ಮಾಡಬೇಕು.

ಸಭೆಯು ಎನ್‌ಡಿಎ ಸರಕಾರದ ಕೃಷಿ ಧೋರಣೆಗಳು ಅತ್ಯಂತ ಆಕ್ಷೇಪಾರ್ಹ, ಅವು ಈಗಾಗಲೇ ಇರುವ ತೀವ್ರ ಬಿಕ್ಕಟ್ಟನ್ನು ಉಲ್ಬಣಗೊಳಿಸುತ್ತವೆ, ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ವಿಪರೀತ ಕುಸಿತ ತರುವುದು ಮಾರುಕಟ್ಟೆ ಶಕ್ತಿಗಳು ಕೃಷಿಕರಿಂದ ಮಿಗುತೆಗಳನ್ನು ಕಸಿದುಕೊಳ್ಳುವ ಮುಖ್ಯ ವಿಧಾನವಾಗಿ ಬಿಟ್ಟಿದೆ ಎಂದು ಬಲವಾಗಿ ಖಂಡಿಸಿತು.


ಮೊಸುಲ್ ವಿಜಯ "ಇಸ್ಲಾಮಿಕ್ ಸ್ಟೇಟ್" ಪೂರ್ಣ ಸೋಲು ಅಲ್ಲ

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಉತ್ತರ ಇರಾಕಿನಲ್ಲಿ ಆಯಕಟ್ಟಿನ ನಗರವಾದ ಮೊಸುಲ್ ನಲ್ಲಿನ "ಇಸ್ಲಾಮಿಕ್ ಸ್ಟೇಟ್" (ಐ.ಎಸ್) ವನ್ನು ಮೂರು ವರ್ಷಗಳ ಹಿಂದೆ ವಶಪಡಿಸಿಕೊಂಡ ನಂತರವೂ ತ್ರೀವ್ರವಾದಿ ಉಗ್ರಗಾಮಿ ಕೊನೆಗಾಣಿಸುವ ಆರಂಭವಷ್ಟೆ. ಐ.ಎಸ್. ವಿರುದ್ಧ ಇರಾಕಿನ ಪಡೆಗಳು ತಮ್ಮ ಆಕ್ರಮಣಗಳನ್ನು ಮುಂದುವರಿಸುತ್ತಿರುವಾಗಲೇ, ಅದು ನಿಯಂತ್ರಿಸುವ ಭೂ ಪ್ರದೇಶದ ನಷ್ಟವೊಂದರಿಂದಲೇ ಭಯೋತ್ಪಾದಕ ಐ.ಎಸ್. ಸಂಪೂರ್ಣವಾಗಿ ನಿರ್ಮೂಲನೆ ಆಗಲಿಕ್ಕಿಲ್ಲ. ಅದು ಇನ್ನೊಂದು ರೂಪದಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆ ಇದೆ.

ಇರಾಕಿನ ಪ್ರಧಾನ ಮಂತ್ರಿ ಹೈದರ್ ಆಲ್-ಆಬಾದಿಯವರು ಜುಲೈ 9ರ ಭಾನುವಾರ 'ಮೊಸುಲ್'ಗೆ ಭೇಟಿಕೊಟ್ಟು, ಐ.ಎಸ್.ನಿಂದ ಮೊಸುಲ್ ನಗರವನ್ನು ಪುನಃ ವಶಪಡಿಸಿಕೊಳ್ಳುವ ನಿಟ್ಟಿನಲ್ಲಿ ಸಶಸ್ತ್ರ ಪಡೆಗಳ ಕಾರ್ಯವನ್ನು ಅಭಿನಂದಿಸಿದ್ದಾರೆ. ಅವರ ಆಗಮನದೊಂದಿಗೆ, ನಗರದಿಂದ ಐ.ಎಸ್. ಉಗ್ರಗಾಮಿಗಳ ಹೊರಹಾಕುವ ದೀರ್ಘ ಹಾಗೂ ಕಷ್ಟವಾದ ಅಭಿಯಾನ ಅಂತ್ಯಗೊಂಡಿದೆ. ಅಲ್ಲಿ ಐ.ಎಸ್.ನ ಕುಖ್ಯಾತ ಭೀಕರ ನಾಯಕ ಅಬು-ಬಕ್ರ್ ಅಲ್-ಬಾಗ್ದಾದಿ ತಮ್ಮ ಆಡಳಿತ ಘೋಷಿಸಿದ್ದ ಮಧ್ಯಯುಗದ ಅಲ್-ನೂರಿ ಮಸೀದಿ ಇದೀಗ ನೆಲಸಮಗೊಂಡಿದೆ.



ಇಸ್ಲಾಮಿಕ್ ಸ್ಟೇಟ್(ಐ.ಎಸ್) – ಪ್ರಮುಖ ನಗರಗಳಾದ ಮೊಸುಲ್ ಮತ್ತು ಡೀರ್ ಎಝುರ್ ನಡುವೆ ಉತ್ತರ ಇರಾಕ್ ಮತ್ತು ಆಗ್ನೇಯ ಸಿರಿಯಾದಲ್ಲಿ ವ್ಯಾಪಕ ಪ್ರದೇಶಗಳಲ್ಲಿ ಐ.ಎಸ್. ಕಳೆದ ಮೂರು ವರ್ಷಗಳಿಂದ ನಿಯಂತ್ರಿಸುತ್ತಿದ್ದ ನೆಲೆಗಳಲ್ಲಿ ಸುಮಾರು ನಾಲ್ಕನೆ ಒಂದು ಭಾಗವನ್ನು ಕಳೆದುಕೊಂಡಿದೆ. ಸಾಮೂಹಿಕ ಮರಣದಂಡನೆಗಳನ್ನು ನಡೆಸಿ, ಚಿತ್ರಿಕರಿಸಿ ಆನ್‌ಲೈನ್ ಮೂಲಕ ಪೋಸ್ಟ್‌ಮಾಡಿ, ತನ್ನ ಕುಖ್ಯಾತತೆಯನ್ನು ಮೆರೆಯುತ್ತಿದ್ದ ಐ.ಎಸ್. ತೀವ್ರಗಾಮಿ ಪಡೆ ಇದೀಗ ತನ್ನ ಹಿಡಿತದಲ್ಲಿದ್ದ ಹೆಚ್ಚಿನ ನಗರ ಕೇಂದ್ರಗಳನ್ನು ಕಳೆದು ಕೊಂಡಿದೆ. ಜುಲೈ 9ರಂದು ಇರಾಕ್ ಪಡೆಗಳ ವಿಜಯದ ನಂತರ, ಮೊಸುಲ್ ನಗರವನ್ನು ವಶಪಡಿಸಿಕೊಳ್ಳಲಾಯಿತು. ಇದರೊಂದಿಗೆ ಐ.ಎಸ್. ನ ಸ್ವಯಂ-ಘೋಷಿತ 'ಖಲೀಫಾತ್'ನ ಪತನ ಸನ್ನಿಹಿತವಾಗಿದೆ. ರಷ್ಯಾದ ವಾಯುಪಡೆಯ ಸಹಾಯದೊಂದಿಗೆ ಸಿರಿಯನ್ ಪಡೆಗಳು ಅಲೆಪ್ಪೊ ನಗರದಿಂದ ಐ.ಎಸ್. ಉಗ್ರರನ್ನು ಹೊರ ದಬ್ಬಿದ ನಂತರ, ಇದು ಐ.ಎಸ್. ಅನುಭವಿಸಿದ ಎರಡನೇ ಅತಿದೊಡ್ಡ ಸೋಲಾಗಿತ್ತು. ಹಳೆಯ ಪಟ್ಟಣ 'ರಾಖಾ' ದಲ್ಲಿನ ಕೆಲವು ಪ್ರದೇಶದಲ್ಲಿ ಮಾತ್ರ ಕೆಲವು ಐ.ಎಸ್. ಪಡೆಗಳು, ಸಿರಿಯನ್ ಡೆಮೊಕ್ರೆಟಿಕ್ ಪಡೆಗಳು (ಎಸ್.ಡಿ.ಎಫ್). ಕುರ್ದ್ ಮತ್ತು ಅರಭ್ ಹೋರಾಟಗಾರರಿಂದ ಸುತ್ತುವರೆಯಲ್ಪಟ್ಟಿದ್ದು, ಓಡಿಹೋಗುವುದು ಅಥವಾ "ಸಾಯುವವರೆಗೆ ಹೋರಾಟ" ಮಾತ್ರ ಅವರ ಆಯ್ಕೆಯಾಗಿದೆ..

'ಖಲೀಫಾತ್' ಇರಾಕಿನ ಯುದ್ಧ ಮತ್ತು ಸಿರಿಯನ್ ಸಂಘರ್ಷದ ನಂತರ ಸ್ಥಾಪಿತ ವಾಯಿತು. ವಿವಿಧ ಜಿಹಾದಿ ಗುಂಪುಗಳಲ್ಲಿ ಒಂದು 'ಖಲೀಫಾತ್'(ಒಂದು ಪ್ರಭುತ್ವ) ಸ್ಥಾಪಿಸಿದ ಮೊದಲನೆಯ ಗುಂಪು ಇದು. ಟರ್ಕಿ, ಜರ್ಮನಿ ಮತ್ತು ಬ್ರಿಟನ್ ಮುಂತಾದ ದೇಶಗಳಲ್ಲಿ ಕ್ರೂರ ಭೀಕರ ಭಯೋತ್ಪಾದಕ ಕೃತ್ಯಗಳಿಂದ ಅಸಾಧಾರಣ ಶಕ್ತಿಯಾಗಿ ಹೊರಹೊಮ್ಮಿತ್ತು. ಈ ಗುಂಪು ಇದೀಗ ಯುದ್ದದಿಂದ ಹಾನಿಗೊಳಗೊಂಡ ಎರಡು ದೇಶಗಳಲ್ಲಿನ (ಇರಾಕ್ ಮತ್ತು ಸಿರಿಯಾ) ನಗರ ಪ್ರದೇಶಗಳಿಂದ, ಗ್ರಾಮೀಣ ಪ್ರದೇಶದ ಕಡೆ ಚಲಿಸಿ, ತಮ್ಮ ಬೀಡು ವಿಸ್ತರಿಸಿದೆ. ಈ ರೀತಿಯ ಹೊಸ ಯೋಜನೆಗಳೊಂದಿಗೆ ಮುಂದೆ ಸಾಗುತ್ತಿದೆ. ಆರಭ್ ಗಣರಾಜ್ಯಗಳು, ಅಫಘಾನಿಸ್ತಾನ್, ಚೆಚನ್ಯಾ ಮತ್ತು ಇನ್ನಿತರ ಪ್ರದೇಶಗಳಿಂದ ಬಂದ ಐ.ಎಸ್. ಐ.ಎಸ್. ಉಗ್ರಗಾಮಿಗಳಿಗೆ ಗ್ರಾಮೀಣ ಪ್ರದೇಶಗಳಲ್ಲಿ ಯುದ್ಧ ಹೆಚ್ಚು ಇಷ್ಟಪಡಬಹುದು.

ಅದು ನಿಯಂತ್ರಿಸುತ್ತಿದ್ದ ಪ್ರದೇಶಗಳ ನಷ್ಟದಿಂದ ಐ.ಎಸ್. ನಿರ್ಮೂಲವೇನೂ ಆಗುವುದಿಲ್ಲ. ಪ್ರದೇಶಗಳ ನಷ್ಟದಿಂದ ಆ ಪ್ರದೇಶಗಳ ಜನರಿಗೆ ಆರೋಗ್ಯ ಮತ್ತು ಶಿಕ್ಷಣ ಒಗಿಸುವ ಸಮಸ್ಯೆಗಳ ಹೊರೆ ಕಡಿಮೆ ಆಗುತ್ತದೆ. ತೈಲ ಮತ್ತು ಅನಿಲ ಕ್ಷೇತ್ರಗಳ ಮೇಲಿನ ನಿಯತ್ರಣಗಳನ್ನು ಕಳೆದುಕೊಂಡರೂ ಸಹ, ಭಯೋತ್ಪಾದಕ ದಾಳಿಗಳಿಗೆ ಬೇಕಾದಷ್ಟು ಇತರೆ ಮೂಲಗಳಿಂದ ಬರುವ ಆದಾಯ ಸಾಕಾಗುತ್ತದೆ. ಆಲ್-ಖೈದಾ ಮತ್ತಿತರ ಭಯೋತ್ಪಾದಕ ಸಂಘಟನೆಗಳಂತೆ ಅದು ಭಯೋತ್ಪಾದಕ ಚಟುವಟಿಕೆಗಳಿಗೆ ಸೀಮಿತವಾಗಿರುವುದನ್ನು ಆಯ್ದುಕೊಳ್ಳಬಹುದು.

ಆಲ್-ಖೈದಾ ಹಿಂದೆ ಭೂಪ್ರದೇಶಗಳನ್ನೂ ವಶಪಡಿಸಿಕೊಳ್ಳದಿರಲು ನಿರ್ಧರಿಸಿತ್ತು. 2010ರಲ್ಲಿ ಆಲ್‌ಖೈದಾದ ಒಸಮಾ ಬಿನ್ ಲಾಡೆನ್ ಈ ನಿರ್ಧಾರಕ್ಕೆ ಕಾರಣ ಕೊಡುತ್ತಾ ಈ ರೀತಿ ಬರೆದಿದ್ದರು "ರಾಷ್ಟ್ರಗಳು ಅಥವಾ ನಗರಗಳನ್ನು ವಶಪಡಿಸಿಕೊಳ್ಳುವ ಮೊದಲು ಮೂಲಭೂತ ಅವಶ್ಯಕತೆಗಳನ್ನು ಒದಗಿಸುವ ವಿಷಯವನ್ನು ಪರಿಶೀಲಿಸಬೇಕಾಗುತ್ತದೆ. ಜನರ ಮೂಲಭೂತ ಅವಶ್ಯಕತೆಗಳನ್ನು ಒದಗಿಸಲು ವಿಫಲವಾದರೆ, ಅವರ ಬೆಂಬಲವನ್ನು ಕಳೆದುಕೊಳ್ಳಬೇಕಾಗುತ್ತದೆ. ಇದರಿಂದಾಗಿ ಕಷ್ಟಕರ ಸ್ಥಿತಿಯೇ ಉದ್ಭವಿಸಿ ಅದು ಉಲ್ಬಣಿಸುತ್ತಾ ಹೋಗುತ್ತದೆ".

ಒಂದು ಕಡೆ, ಈ ಪ್ರದೇಶದ ಸಮಸ್ಯೆಗಳನ್ನು ಅರಿತುಕೊಳ್ಳುವ ಮುಂಚೆಯೇ, ಐ.ಎಸ್. ಆ ಪ್ರದೇಶಗಳ ಮೇಲೆ ನಿಯಂತ್ರಣ ಹೊಂದಿತ್ತು. ಜನರ ಮೂಲಭೂತ ಸಮಸ್ಯೆಗಳನ್ನು ಕಡೆಗಣಿಸಿತ್ತು. ಆಹಾರ ಮತ್ತು ಇತರ ಆವಶ್ಯಕತೆಗಳ ಪೂರೈಕೆಯ ಅಭಾವದಿಂದಾಗಿ ಸ್ಥಳೀಯ ಜನರ ಸಂಕಷ್ಟ ತೀವ್ರವಾಗಿತ್ತು. ಮತ್ತೊಂದೆಡೆ, ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಮುಂದಾಗದ ಆಲ್‌ಖೈದಾ ಜಬತ್ ಅಲ್-ನುಸ್ರಾ ಮುಂತಾದ ವಿಭಿನ್ನ ರೂಪಗಳಲ್ಲಿ ಹಲವು ಯೋಜನೆಗಳ ಮೂಲಕ ಬೆಳೆದಿದೆ.

ಹೀಗೆ ಐ.ಎಸ್. ಅನುಭವಿಸಿದ ಎಲ್ಲಾ ನಷ್ಟಗಳಿಂದಾಗಿ, ಸಿರಿಯನ್ ಮತ್ತು ಇರಾಕಿನ ನಗರ ಪ್ರಾಂತ್ಯಗಳ ಉಳಿದ ಭಾಗಗಳಿಂದ ಭಯೋತ್ಪಾದಕ ಪಡೆಗಳನ್ನು ಮುಗಿಸಲು ಅವಕಾಶಗಳು ಹೊರಹೊಮ್ಮಿದೆ. ಆದಾಗ್ಯೂ, ಈ ಇಸ್ಲಾಮಿಕ್ ತೀವ್ರ ಉಗ್ರಗಾಮಿ ಪಡೆ ಬಿತ್ತಿರುವ ಸೈದ್ಧಾಂತಿಕ ಬೀಜ ಬೇರೆ ಸಂಘಟನೆಗಳನ್ನು ಬೆಳೆಸಬಹುದಾದ ಸಾಧ್ಯತೆ ತಳ್ಳಿ ಹಾಕುವಂತಿಲ್ಲ. ಆದ್ದರಿಂದ, ಸಾಮಾಜಿಕ ಹಾಗೂ ರಾಜಕೀಯವಾಗಿ, ಸೈನಿಕವಾಗಿ – ಎಲ್ಲಾ ಸಾಧ್ಯತೆಗಳನ್ನು ಕ್ರೋಡಿಕರಿಸಿದ ಅನೇಕ ರಂಗ ಹಾಗೂ ವಿಧಗಳಲ್ಲಿ ಐ.ಎಸ್. ನ್ನು ಎದುರಿಸಬೇಕು. ಇಲ್ಲದಿದ್ದರೆ, ಹೊಸ ತಂತ್ರಗಳ, ಮೈತ್ರಿಗಳ ಮತ್ತು ಪರ್ಯಾಯ ಉಗ್ರಗಾಮಿಗಳು ಸಜ್ಜುಗೊಳ್ಳುವ ಸಾಧ್ಯತೆ ಉದ್ಭವಿಸಬಹುದು.

ಆದ್ದರಿಂದ 'ಮೊಸುಲ್' ಮೇಲಿನ ಇರಾಕ್ ಪಡೆಗಳ ವಿಜಯ ಐ.ಎಸ್. ಉಗ್ರಗಾಮಿಗಳನ್ನು ಪೂರ್ಣವಾಗಿ ಸೋಲಿಸಲು ಸಾಕಾಗುವುದಿಲ್ಲ. ●

ಇಂಧನ ಇಲಾಖೆ ಬಳಸಿ ಬಿಸಾಡುತ್ತಿದೆ...... ಪುಟ 16 ರಿಂದ

ಪ್ರತಿನಿಧಿಗಳು ಐದೂ ಎಸ್ಕಾಂ, ಕೆ.ಪಿ.ಟಿ.ಸಿ.ಎಲ್ ಮತ್ತು ಕೆ.ಪಿ.ಸಿ ಗುತ್ತಿಗೆ ಕಾರ್ಮಿಕರ ವತಿಯಿಂದ ವರದಿಯ ಮೇಲೆ ಮಾತನಾಡಿದರು. ಇಡೀ ರಾಜ್ಯದಲ್ಲಿ ವಿದ್ಯುತ್ ಗುತ್ತಿಗೆ ಕಾರ್ಮಿಕರ ಪರಿಸ್ಥಿತಿಯನ್ನು ಪ್ರತಿನಿಧಿ ಸಂಗಾತಿಗಳು ವಿವರಿಸಿದರು. ನಮ್ಮ ರಾಜ್ಯದಲ್ಲಿ ಅತಂತ್ರ ಸ್ಥಿತಿಯಲ್ಲಿರುವ ವಿದ್ಯುತ್ ಗುತ್ತಿಗೆ ಕಾರ್ಮಿಕರ ಸಮಸ್ಯೆಗಳನ್ನು ಹೋಗಲಾಡಿಸಲು ಅಗತ್ಯ ಕ್ರಮಗಳ ಬಗ್ಗೆ ಕಾರ್ಮಿಕರು ವಿವರಿಸಿದರು. ವರದಿಯ ಚರ್ಚೆಗಳ ಮೇಲಿನ ಉತ್ತರವನ್ನು ಸಂಘದ ಪ್ರಧಾನ ಕಾರ್ಯದರ್ಶಿಗಳು ನೀಡಿದರು.

ಹೊಸ ರಾಜ್ಯ ಸಮಿತಿಯನ್ನು ಅಂಯ್ಕೆ ಮಾಡಲಾಯಿತು. 17 ಜನ ಪಧಾಧಿಕಾರಿಗಳು ಹಾಗೂ 30 ಮಂದಿ ಇರುವ ರಾಜ್ಯ ಸಮಿತಿಯನ್ನು ಅವಿರೋದವಾಗಿ ಅಯ್ಕೆ ಮಾಡಲಾಗಿದೆ. ಅಧ್ಯಕ್ಷರಾಗಿ ಜೆ.ಸತ್ಯ ಬಾಬು (ಬಳ್ಳಾರಿ), ಪ್ರಧಾನ ಕಾರ್ಯದರ್ಶಿಯಾಗಿ ಶಿವಕುಮಾರ್.ಎಸ್. ಎಂ (ಬೆಳ್ತಂಗಡಿ, ದ.ಕ.) ಖಜಾಂಜಿಯಾಗಿ ಸುರೇಶ್. ಹೆಚ್ (ಬೆಂಗಳೂರು), ಸಂಘಟನಾ ಕಾರ್ಯದರ್ಶಿಗಳಾಗಿ ಗೋಪಿ. (ಕನಕಪುರ) ವೀರೇಶ್ ಕುಬಾರ್ (ಬಳ್ಳಾರಿ) ಎಲ್.ಪಿ.ಮಹೇಶ್ (ಬೆಳ್ತಂಗಡಿ.ದ.ಕ) ಉಪಾಧ್ಯಕ್ಷರುಗಳಾಗಿ ದೊಡ್ಡಪ್ಪ ಬೋಳಗಟ್ಟಿ (ಹಾವೇರಿ) ಸುರೇಶ್ (ಮೈಸೂರು) ಮಹೇಶ್ (ಬೆಂಗಳೂರು) ಅಮೃತ್ ಡಿ ಸಜ್ಜನಕರ (ಕಲಬುರ್ಗಿ) ಕಾರ್ಯದರ್ಶಿಗಳಾಗಿ ಸಮಿತ್ ಸುಳ್ಯ (ದ.ಕ.) ಪ್ರಸನ್ನ ಕುಮಾರ್ (ರಾಮ ನಗರ) ಆನಂದ ಅಂಗಡಿ (ಬೆಳಗಾವಿ), ತಿಪ್ಪೇ ಸ್ವಾಮಿ (ಬಳ್ಳಾರಿ) ಆಯ್ಕೆಯಾದರು.

ಸಮ್ಮೇಳನದ ತೀರ್ಮಾನಗಳು

1. 5 ಕನಿಷ್ಠ ಬೇಡಿಕೆ ಮುಂದಿಟ್ಟು ನಿರಂತರ ಚಳವಳಿ
   1) ಸಮಾನ ಕೆಲಸಕ್ಕೆ ಸಮಾನ ವೇತನ
   2) ಇಂಧನ ಇಲಾಖೆಯ ಎಲ್ಲಾ ವಿಭಾಗದ ಗುತ್ತಿಗೆ ಕಾರ್ಮಿಕರನ್ನು ಖಾಯಮಾತಿಗಾಗಿ
   3) ನೇರ ನೇಮಕಾತಿ ತಕ್ಷಣ ನಿಲ್ಲಿಸಲು
   4) ಕನಿಷ್ಠ ಮಾಸಿಕ ವೇತನ ರೂ.21,000/
   5) ಗುತ್ತಿಗೆ ಕಾರ್ಮಿಕರನ್ನು ಬಳಸಿ ಬಿಸಾಡುವ ನೀತಿಯ ವಿರುದ್ಧ ಹೊರಾಟ.
2. ಈ ಬೇಡಿಕೆಗಳನ್ನು ಮತ್ತು ಇತರ ಬೇಡಿಕೆಗಳನ್ನು ಮುಂದಿಟ್ಟು ಹೊರಾಟಗಳು. **ಅಗಸ್ಟ್ 9 ರಂದು ಕಾರ್ಡ್ ಚಳವಳಿ**. ಎಲ್ಲಾ ಗುತ್ತಿಗೆ ಕಾರ್ಮಿಕರು ಅಂದು ಸ್ವತಃ 4 ಮಂದಿಗೆ ಕಾರ್ಡ್ ಬರೆಯುವುದು. 1) ಮುಖ್ಯ ಮಂತ್ರಿ, 2) ಇಂದನ ಸಚಿವರಿಗೆ 3) ಕಾರ್ಮಿಕ ಸಚಿವರಿಗೆ 4) ಸರ್ಕಾದ ಮುಖ್ಯ ಕಾರ್ಯದರ್ಶಿಯವರಿಗೆ.
3. **ಅಗಸ್ಟ್ 25** ರಂದು ಸ್ಥಳೀಯ ಶಾಸಕರಿಗೆ ಪ್ರಮುಖ ಬೇಡಿಕೆಗಳನ್ನು ಇಟ್ಟು ಮನವಿ.
4. **ಅಗಸ್ಟ್ 31** ರಂದು ಚೆಸ್ಕಾಂ, ಜೆಸ್ಕಾಂ ಮತ್ತು ಬೆಸ್ಕಾಂ ಎದುರು 24 ಗಂಟೆಗಳ ಉಪವಾಸ ಸತ್ಯಾಗ್ರಹ.
5. **ಸೆಪ್ಟೆಂಬರ್ 4** ರಂದು ರಂದು ಮೆಸ್ಕಾಂ ಮತ್ತು ಹೆಸ್ಕಾಂ ಎದುರು 24 ಗಂಟೆಗಳ ಉಪವಾಸ ಸತ್ಯಾಗ್ರಹ.
6. **ಸೆಪ್ಟೆಂಬರ್ 14** ರಂದು ಸಿ.ಐ.ಟಿ.ಯು ವತಿಯಿಂದ ನಡೆಸುವ ಗುತ್ತಿಗೆ ಪದ್ಧತಿ ರದ್ದಾಗಲು, ಕನಿಷ್ಠ ವೇತನ ನೀಡಲು ಒತ್ತಾಯಿಸಿ ನಡೆಸುವ ಹೋರಾಟದಲ್ಲಿ ಎಲ್ಲಾ ಗುತ್ತಿಗೆ ಕಾರ್ಮಿಕರು ಭಾಗವಹಿಸುವುದು.
7. ಎಲ್ಲಾ ಜಿಲ್ಲೆಯಲ್ಲಿ 1 ವರ್ಷ ಅವದಿಯಲ್ಲಿ ಜಿಲ್ಲಾ ಸಮಿತಿಗಳನ್ನು ರಚನೆ ಮಾಡುವುದು.
8. ಸಂಘದ ಸದಸ್ಯತ್ವ 10 ಸಾವಿರ ಮಾಡುವುದು,
9. ಖಾಯಂ ನೌಕರರನ್ನು ನಮ್ಮ ಸಂಘದ ಸದಸ್ಯರನ್ನಾಗಿ ಮಾಡುವುದು.
10. ಎಲ್ಲಾ ಜಿಲ್ಲೆಗಳಲ್ಲಿ ಪೂರ್ಣ ಕಾಲ ಕಾರ್ಯಕರ್ತರನ್ನು ನೇಮಕ ಮಾಡುವುದು.

ಅಖಿಲ ಭಾರತ ವಿದ್ಯುತ್ ನೌಕರಕರ ಒಕ್ಕೂಟ (EEFI)ದ ಅಧ್ಯಕ್ಷರಾದ ಕಾಂ.ಕೆ.ಒ.ಹಬೀಬ್, ಕಾರ್ಯದರ್ಶಿಗಳಾದ ಅಜಿತ್ ಕುಮಾರ್. ಕಾಂ.ವಿ.ಜೆ. ಕೆ ನಾಯರ್ ಹಿರಿಯ ಕಾರ್ಮಿಕ ಮುಖಂಡರು 2 ದಿನಗಳ ಕಾಲ ಸಮ್ಮೇಳನದ ಕಲಾಪದಲ್ಲಿ ಭಾಗವಹಿಸಿದರು. ಸಿ.ಐ.ಟಿ.ಯು ರಾಜ್ಯಾಧ್ಯಕ್ಷರಾದ ಕಾಂ.ಎಸ್.ವರಲಕ್ಷ್ಮಿ ಅವರ ನೇತೃತ್ವದಲ್ಲಿ ಮತ್ತು ಅವರ ಸಲಹೆಯಂತೆ ಈ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಹೊಸ ರಾಜ್ಯ ಸಮಿತಿಗೆ ಅವರ ಮಾರ್ಗ ನಿರ್ದೇಶನದ ಅಗತ್ಯವಿದೆ. ಸಮ್ಮೇಳನ ಯಶಸ್ವಿಗೆ ಶ್ರಮಿಸಿದ ಬೆಂಗಳೂರು, ರಾಮನಗರ, ಚಿಕ್ಕಬಳ್ಳಾಪುರ ಸಂಗಾತಿಗಳ ಶ್ರಮ ಸ್ಲಾಘನೀಯ. ಸಂಗಾತಿ ಗೋಪಿ, ಮಹೇಶ್, ಪ್ರಸನ್ನಕುಮಾರ್ ಮತ್ತು ಅವರ ತಂಡದ ಎಲ್ಲಾ ಸದಸ್ಯರಿಗೂ ಈ ಸಮ್ಮೇಳನದ ಹೃದಯಸ್ಪರ್ಶಿ ಅಭಿನಂದನೆಗಳು. ಈ ಸಮ್ಮೇಳನ ಇಷ್ಟು ಯಶಸ್ವಿಯಾಗಲು ಸಿ.ಐ.ಟಿ.ಯು ರಾಜ್ಯಾಧ್ಯಕ್ಷರಾದ ಕಾಂ.ಎಸ್.ವರಲಕ್ಷ್ಮಿ ಅವರ ನಿರಂತರ ಪ್ರಯತ್ನಗಳು ಸ್ಲಾಘನೀಯ. ●

'ಸಮಾನತೆಯ ಅನ್ವೇಷಣೆ'ಯಲ್ಲಿ.......... ಪುಟ 10 ರಿಂದ

ಹಲವು ಪ್ರಶ್ನೆಗಳಿಗೆ ಮಾನ್ಯ ಸಿದ್ದರಾಮಯ್ಯ ತಮ್ಮ ರಾಜಕೀಯ ಅನುಭವದ ಮಾತುಗಳನ್ನು ನೆರೆದಿದ್ದ ಜನರ ಪ್ರಶಂಸೆಗೆ ಪಾತ್ರರಾಗುವಂತೆ ಉತ್ತರಿಸಿದರು. ಸಭಿಕರಿಂದಲೂ ಪ್ರಶ್ನೆಗಳು ಬಂದವು.

ಸಮಾರೋಪ ಸಮಾರಂಭದಲ್ಲಿ 41 ಅಂಶಗಳ ಬೆಂಗಳೂರು ಘೋಷಣೆಗಳನ್ನು ಅಂಗೀಕರಿಸಲಾಯಿತು. ಅವುಗಳಲ್ಲಿ ಪ್ರಮುಖವಾದುವುಗಳೆಂದರೆ

- ಎಸ್.ಸಿ/ಎಸ್.ಟಿ, ಒಬಿಸಿ ಹಾಗೂ ಅಲ್ಪಸಂಖ್ಯಾತರಿಗೆ ಮಹಿಳೆಯರಿಗೆ ಸಮಾನ ಅವಕಾಶ ಕಲಿಸುವ ನಿಟ್ಟಿನಲ್ಲಿ ಆಯೋಗ.
- ಶಾಲಾ ಪಠ್ಯದಲ್ಲಿ ಅಂಬೇಡ್ಕರ್, ಜ್ಯೋತಿ ಭಾ ಫುಲೆ, ಸಾವಿತ್ರಿ ಬಾ ಫುಲೆ ಕುರಿತ ಪಠ್ಯ ಅಳವಡಿಸುವಿಕೆ.
- ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಎಸ್.ಸಿ/ಎಸ್.ಟಿ/ ಒಬಿಸಿಗಳಿಗೆ ಹಾಗೂ ಖಾಸಗೀ ಕ್ಷೇತ್ರಗಳಲ್ಲಿಯೂ ಮೀಸಲಾತಿ ಅಗತ್ಯತೆ.
- ಪರಿಶಿಷ್ಟರಿಗೆ ಭೂ ಒಡೆತನ ಖಾತ್ರಿ ಹೊಸ ಕಾನೂನು. ಪರಿಶಿಷ್ಟರ ಭೂಮಿ ರಕ್ಷಣೆ

ಘೋಷಣೆಯ ನಂತರ ತಮ್ಮ ಸಮಾರೋಪ ಭಾಷಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಕೋಮುವಾದಿಗಳು ಜನರ ನಡುವೆ ಕಂದಕ ಸೃಷ್ಟಿಸುತ್ತಿದ್ದಾರೆ. ಸಂಘಪರಿವಾರದವರು ಯುವಕರನ್ನು ಅಡ್ಡದಾರಿಗೆ ನೂಕುತ್ತಿದ್ದಾರೆ. ನನ್ನ ಸರ್ಕಾರವು ಕೋಮುವಾದಿಗಳನ್ನು ಮಟ್ಟ ಹಾಕುವಲ್ಲಿ ಕಠಿಣವಾದ ಕ್ರಮ ತೆಗೆದುಕೊಳ್ಳುತ್ತದೆ. ಅವರ ಬಲಿ ನಿಶ್ಚಿತವೆಂದು ನೇರವಾಗಿ ಹೇಳಿದರು.

ಒಟ್ಟಾರೆಯಾಗಿ ಅಂಬೇಡ್ಕರ್‌ರವರ 126ನೇ ಜನ್ಮ ವರ್ಷಾಚರಣೆಯ ಅಂಗವಾಗಿ ನಡೆದ ಸಮಾನತೆಗಾಗಿ ಅನ್ವೇಷಣೆ ಅಂತರರಾಷ್ಟ್ರೀಯ ಸಮ್ಮೇಳನವು 2019 ರಲ್ಲಿ ಕಾಂಗ್ರೆಸ್ ನಾಯಕತ್ವದಲ್ಲಿ ಎಲ್ಲಾ ಇತರೆ ಪಕ್ಷಗಳು ಕೋಮುವಾದಿ, ಫ್ಯಾಸಿಸ್ಟ್ ಸ್ವರೂಪದ ಪ್ರತಿಗಾಮಿ ಬಿಜೆಪಿಯನ್ನು ಸೋಲಿಸಲು ಪಣತೊಡಬೇಕೆಂಬ ಮನೋಭಾವನೆಗಳು ವ್ಯಕ್ತವಾದವು. ಪ್ರಭಾತ್ ಪಟ್ನಾಯಕ್ ಹೇಳಿದಂತೆ ಕಾಂಗ್ರೆಸ್ ಅಂಬೇಡ್ಕರ್ ರವರ ವಿಚಾರಗಳಿಗೆ-ಚಿಂತನೆಗಳಿಗೆ ಸಂವಿಧಾನದ ಆಶಯಗಳಾದ ಸಾಮಾಜಿಕ ನ್ಯಾಯ, ಸಮಾನತೆ, ಜಾತ್ಯಾತೀತತೆ ಹಾಗೂ ಒಕ್ಕೂಟ ಪ್ರಭುತ್ವದ ರಕ್ಷಣೆಗಳಿಗೆ ನೈಜವಾದ ಸೈದ್ಧಾಂತಿಕವಾದ ಬದ್ಧತೆಯಿಂದ ಪ್ರಾಮಾಣಿಕವಾಗಿ ನಡೆದುಕೊಳ್ಳದೆ ಅದು ಸಾಧ್ಯವಿಲ್ಲ. ಕಳೆದ ಎರಡುವರೆ ದಶಕಗಳ ಮತ್ತು ಇಂದಿಗೂ ಅದರ ನೀತಿಗಳೂ ಸಂಘಟನಾ ನೆಲೆಗಳನ್ನು ನೋಡಿದರೆ ಕಾಂಗ್ರೆಸ್ ಇದನ್ನು ಮಾಡಿತೇ ಎಂಬುದು ಇಡೀ ಸಮ್ಮೇಳನದ ನಂತರ ನನಗೆ ಪ್ರಶ್ನೆಯಾಗಿ ಕಾಡಿತು. ●

JANASHAKTHI KANNADA VARA PATRIKE JULY 31-AUGUST 6, 2017 Price : Rs. 10/- Date of Publication: 28 JULY 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಕರ್ನಾಟಕ ರಾಜ್ಯ ವಿದ್ಯುತ್ ಕಾರ್ಮಿಕರ ಫೆಡರೇಷನ್ 2ನೇ ರಾಜ್ಯ ಸಮ್ಮೇಳನ

ಇಂಧನ ಇಲಾಖೆ ಬಳಸಿ ಬಿಸಾಡುತ್ತಿದೆ : ವರಲಕ್ಷ್ಮಿ

ಶಿವಕುಮಾರ್.ಎಸ್.ಎಂ



"ಇಂಧನ ಇಲಾಖೆಯವರು ಬಳಸಿ ಬಿಸಾಡುವ ಕೆಲಸ ಮಾಡುತ್ತಿದ್ದಾರೆ. ವಿದ್ಯುತ್ ಅನಾಹುತಗಳಲ್ಲಿ ಮೃತ ಪಟ್ಟ ಗುತ್ತಿಗೆ ಕಾರ್ಮಿಕರಿಗೆ ಪರಿಹಾರ ನೀಡದೆ ಇಂಧನ ಇಳಾಖೆ ಕಾರ್ಮಿಕರಿಗೆ ಮೋಸ ಮಾಡಿದೆ." ಎಂದು ಸಿ.ಐ.ಟಿ.ಯು ರಾಜ್ಯಾಧ್ಯಕ್ಷರಾದ ಕಾಂ.ವರಲಕ್ಷ್ಮಿ ಅವರು ಹೇಳಿದರು. ಅವರು ಕಾಂ.ಎಸ್.ಪ್ರಸನ್ನ ಕುಮಾರ್ ವೇದಿಕೆ ಶಿಕ್ಷಕರ ಸದನ ಬೆಂಗಳೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ವಿದ್ಯುತ್ ಕಾರ್ಮಿಕರ ಫೆಡರೇಷನ್ (KSEWF)ನ 2ನೇ ರಾಜ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಿದ್ದರು. ಸಿ.ಐ.ಟಿ.ಯು ವಿದ್ಯುತ್ ಗುತ್ತಿಗೆ ಕಾರ್ಮಿಕರನ್ನು ಖಾಯಮಾತಿಗಾಗಿ ನಿರಂತ ಹೋರಾಟ ಮಾಡುವುದಾಗಿ ಭರವಸೆ ನೀಡಿದರು.

ಇಂಧನ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ವಿಭಾಗದ ಗುತ್ತಿಗೆ ಕಾರ್ಮಿಕರನ್ನು ಖಾಯಂಮಾಡಬೇಕು. ಸರ್ವೋಚ್ಚ ನ್ಯಾಯಾಲದ ತೀರ್ಪಿನಂತೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಎಲ್ಲಾ ವಿದ್ಯುತ್ ಗುತ್ತಿಗೆ ಕಾರ್ಮಿಕರು 26-10-2016 ರಿಂದ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಲು ಅರ್ಜಿ ಸಲ್ಲಿಸ ಬೇಕು ಎಂದು ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಸಿಐಟಿಯು ಉಪಾಧ್ಯಕ್ಷ ಕಾ. ವಿ.ಜೆ.ಕೆ, ನಾಯರ್ ಹೇಳಿದರು. ಮುಖ್ಯ ಅತಿಥಿಗಳಾದ ಅಖಿಲ ಭಾರತ ವಿದ್ಯುತ್ ನೌಕರಕರ ಒಕ್ಕೂಟದ (EEFI) ಪ್ರಧಾನ ಕಾರ್ಯದರ್ಶಿ ಕಾಂ. ಪ್ರಶಾಂತಿ ನಂದಿ ಚೌದರಿ ಅವರು ಸಂಘದ ಹೋರಾಟದಿಂದ ಆಂದ್ರ, ತೆಲಂಗಾಣ ಮತ್ತು ತಮಿಳು ನಾಡಿನಲ್ಲಿ 75,000 ಗುತ್ತಿಗೆ ಕಾರ್ಮಿಕರನ್ನು ಖಾಯಂ ಮಾಡಲಾಗಿದೆ. ಕರ್ನಾಟಕದಲ್ಲಿಯೂ ಸಂಘ ಬಲಗೊಂಡಿದೆ ಎಂದು ತಿಳಿಸಿದರು.



ಅಧ್ಯಕ್ಷರು: ಜೆ.ಸತ್ಯ ಬಾಬು



ಪ್ರ. ಕಾರ್ಯದರ್ಶಿ:
ಶಿವಕುಮಾರ್.ಎಸ್.ಎಂ

ಸಮಾನ ಕೆಲಸಕ್ಕೆ ಸಮಾನ ವೇತನ

ಇನ್ಫೋರ್ವ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಕೆ.ಎಸ್.ಪುಟ್ಟಣ್ಣಯ್ಯ ಅವರು ರಾಜ್ಯ ಸರ್ಕಾರ ಎಲ್ಲಾ ಕ್ಷೇತ್ರಗಳಲ್ಲಿನ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ದೊರೆಯುವೋತೆ ಮಾಡ ಬೇಕು ಎಂದು ಹೇಳಿದರು. ಕೆ.ಸುಬ್ಬರಾವ್, ವಿ.ಹಿಟ್ಟಣಗಿ ಉದ್ಘಾಟನೆ ಸಮಾರಂಬದಲ್ಲಿ ಮತನಾಡಿದರು. ಸಂಘದ ಅಧ್ಯಕ್ಷರಾದ ಕಾಂ.ಜೆ.ಸತ್ಯ ಬಾಬು ಸಭೆಯ ಅಧ್ಯಕ್ಷತೆ ವಹಿಸಿದರು. ಪ್ರಸನ್ನ ಕುಮಾರ್ ಕಾರ್ಯಕ್ರಮ ನಿರೂಪಣೆ ಮಾಡಿದರು. ಗೀತಾ (ಜೀವನ ವಿಮಾ ನೌಕರರ ಸಂಘ) ಅವರು ಕಾಂ. ಪ್ರಶಾಂತಿ ನಂದಿ ಚೌದರಿ ಅವರ ಭಾಷಣವನ್ನು ಭಾಷಾಂತರ ಮಾಡಿದರು. ಶಿಕ್ಷಕರ ಸದನ ವಿದ್ಯುತ್ ಗುತ್ತಿಗೆ ಕಾರ್ಮಿಕರಿಂದ ತುಂಬಿ ತುಳುಕಿತ್ತು. ಕಾರ್ಮಿಕರು ಭಾಗವಹಿಸಿದ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮ ಯಶಸ್ವಿಯಾಗಿದೆ. ಸಂಗಾತಿ ಗೋಪಿಯವರು ಎಲ್ಲರನ್ನು ಸ್ವಾಗತಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶಿವಕುಮಾರ್.ಎಸ್.ಎಂ ಪ್ರಾಸ್ತಾವಿಕ ಬಾಷಣ ಮಾಡಿದರು.

ಸಮ್ಮೇಳನಕ್ಕೆ ಮೊದಲು ಬೆಂಗಳೂರು ರೈಲ್ವೆ ನಿಲ್ದಾಣದಿಂದ ಶಿಕ್ಷಕರ ಸದನದವರೆಗೆ ಆಕರ್ಷಕ ಮೆರವಣಿಗೆ ನಡೆಯಿತು. ಮೆರವವಣಿಗೆಯನ್ನು ಸಿ.ಐ.ಟಿ.ಯು ರಾಜ್ಯಾಧ್ಯಕ್ಷರಾದ ಕಾಂ.ವರಲಕ್ಷ್ಮಿ ಅವರು ಉದ್ಘಾಟಿಸಿದರು. ಮೆರವಣಿಗೆಯ ನೇತೃತ್ವನ್ನು ಸಂಘದ ಅಧ್ಯಕ್ಷರಾದ ಕಾಂ. ಜೆ. ಸತ್ಯ ಬಾಬು ವಹಿಸಿದರು. ಸುಮಾರು 3000 ಗುತ್ತಿಗೆ ಕಾರ್ಮಿಕರು ಮೆರವವಣಿಗೆಯಲ್ಲಿ ಭಾಗವಹಿಸಿದ್ದು. ಸಿ.ಐ.ಟಿ.ಯು ಮುಖಂಡರುಗಳಾದ ಮಾಲಿನಿ ಮೇಸ್ತ ಮತ್ತು ಲಕ್ಷ್ಮಿ ಗೌರಮ್ಮ ಭಾಗಿಯಾದರು. ಐದೂ ಎಸ್ಕಾಂ, ಕೆ.ಪಿ.ಟಿ.ಸಿ.ಎಲ್ ಮತ್ತು ಕೆ.ಪಿ.ಸಿ ಗುತ್ತಿಗೆ ಕಾರ್ಮಿಕರು 2 ಕಿ.ಮಿ. ದೂರದ ಶಿಕ್ಷಕರ ಸದನಕ್ಕೆ ಮೆರವಣಿಗೆಯಲ್ಲಿ ಸಾಗಿದರು.

ಪ್ರತಿನಿಧಿ ಸಮ್ಮೇಳನ

ಜುಲೈ 19 ರಂದು ಸಂಜೆ 5 ಗಂಟೆಗೆ ಪ್ರತಿನಿಧಿ ಸಮ್ಮೇಳನ ಶೇಷಾದ್ರಿಪುರಂ ಸಭಾ ಭವನದಲ್ಲಿ ಕಾಂ.ಎಸ್ .ಪ್ರಸನ್ನ ಕುಮಾರ್ ವೇದಿಕೆಯಲ್ಲಿ ನಡೆಯಿತು. ಸಿ.ಐ.ಟಿ.ಯು ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಕಾಂ.ಮೀನಾಕ್ಷಿ ಸುಂದರಂ ಅವರು ಉದ್ಘಾಟಿಸಿದರು. ಅವರ ಉದ್ಘಾಟನಾ ಭಾಷಣದಲ್ಲಿ ಕರ್ನಾಟಕ ರಾಜ್ಯದ ಈವತ್ತಿನ ಕಾರ್ಮಿಕರ ಪರಿಸ್ಥಿತಿ ಹಾಗು ಗುತ್ತಿಗೆ ಕಾರ್ಮಿಕರು ಎದುರಿಸುವ ಸಮಸ್ಯೆಗಳನ್ನು ವಿವರಿಸಿದರು.

ಪ್ರತಿನಿಧಿ ಸಮ್ಮೇಳನದ ಕಲಾಪ ನಡೆಸಲು ಸಂಘದ ಅಧ್ಯಕ್ಷರಾದ ಕಾಂ.ಜೆ.ಸತ್ಯ ಬಾಬು ಅವರ ನೇತೃತ್ವದಲ್ಲಿ ಸಮಿತ್ (ಸುಳ್ಯ), ಗೋಪಿ (ಕನಕಪುರ), ಸುರೇಶ್ (ಮೈಸೂರು), ವಿರೇಶ್ (ಬಳ್ಳಾರಿ), ತಿಪ್ಪೇ ಸ್ವಾಮಿ, ದೊಡ್ಡಪ್ಪ ಬೋಳಗಟ್ಟಿ, ಪ್ರಸನ್ನ ಕುವಾರ್ ಇವರನ್ನು ಒಳಗೊಂಡ ಒಂದು ಅಧ್ಯಕ್ಷೀಯ ಮಂಡಳಿಯನ್ನು ರಚಿಸಲಾಯಿತು. ಮೊದಲಿಗೆ ಪ್ರಧಾನ ಕಾರ್ಯದರ್ಶಿ ಸ್ವಾಗತಿಸಿ ಕಾಂ.ಜೆ.ಸತ್ಯ ಬಾಬು ಅವರು ಶ್ರದ್ಧಾಂಜಲಿ ನಿರ್ಣಯವನ್ನು ಮಂಡಿಸಿದರು. ಉದ್ಘಾಟನೆಯ ಬಳಿಕ 5 ವರ್ಷದ ಚಟುವಟಿಕಾ ವರದಿಯನ್ನು ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶಿವಕುಮಾರ್.ಎಸ್.ಎಂ ಮಂಡಿಸಿದರು. ಸಿ.ಐ.ಟಿ.ಯು ರಾಜ್ಯಾಧ್ಯಕ್ಷರಾದ ಕಾಂ.ವರಲಕ್ಷ್ಮಿ ಪ್ರತಿನಿಧಿ ಸಮ್ಮೇಳವನ್ನು ಉದ್ದೇಶಿಸಿ ಕರ್ನಾಟಕ ರಾಜ್ಯದ ವಿದ್ಯುತ್ ಗುತ್ತಿಗೆ ಕಾರ್ಮಿಕರು ಎದುರಿಸುವ ಜ್ವಲಂತ ಸಮಸ್ಯಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು. ವಿದ್ಯುತ್ ಗುತ್ತಿಗೆ ಕಾರ್ಮಿಕರು ಯಾ-ಕ್ಕೆ ಸಂಘಟನೆ ಮಾಡಬೇಕು ಮತ್ತು ಯಾವ ರೀತಿ ಚಳವಳಿಯನ್ನು ಮುಂದುವರಿಸಬೇಕು ಎಂದು ವಿವರಿಸಿದರು. ಅಖಿಲ ಭಾರತ ವಿದ್ಯುತ್ ನೌಕರಕರ ಒಕ್ಕೂಟ (EEFI) ದ ಅಧ್ಯಕ್ಷರಾದ ಕಾಂ.ಕೆ.ಒ.ಹಬೀಬ್ ಅವರು ಪ್ರತಿನಿಧಿ ಸದಸ್ಯರನ್ನು ಉದ್ದೇಶಿಸಿ ಮಾತಾಡುವಾಗ ಭಾರತದ ಇಂಧನ ಕ್ಷೇತ್ರದಲ್ಲಿ ನಡೆಯುವ ಕಾರ್ಮಿಕರ ಶೋಷಣೆ ಮತ್ತು ಸಂಘಟನೆಯ ಮಧ್ಯ ಪ್ರವೇಶ ಹಾಗು ಸಂಘಟನೆ ವಿಸ್ತಾರಗೊಳಿಸುವ ಅಗತ್ಯದ ಬಗ್ಗೆ ತಿಳಿಸಿದರು. ಅಖಿಲ ಭಾರತ ವಿದ್ಯುತ್ ನೌಕರಕರ ಒಕ್ಕೂಟದ ಕಾರ್ಯದರ್ಶಿಗಳಾದ ಅಜಿತ್ ಕುಮಾರ್. ಕಾಂ.ವಿ.ಜೆ.ಕೆ ನಾಯರ್ ಪ್ರತಿನಿಧಿ ಸಮ್ಮೇಳನದ ಕಲಾಪದಲ್ಲಿ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು. ಕಲಾಪ ರಾತ್ರಿ 10 ಗಂಟೆವರೆಗೆ ನಡೆಯಿತು. ಜಿಲ್ಲಾವಾರು ಗುಂಪು ಚರ್ಚೆ ಕೂಡ ನಡೆಯಿತು. ಒಟ್ಟು 200 ಪ್ರತಿನಿಧಿ ಸಂಗಾತಿಗಳು ಪ್ರತಿನಿಧಿ ಸಮ್ಮೇಳನದ ಕಲಾಪದಲ್ಲಿ ಹಾಜರಿದ್ದರು.

ವರದಿಯ ಮೇಲೆ ಚರ್ಚೆ

ಜುಲೈ 20ರಂದು ಬೆಳಗ್ಗೆ 9-30 ಕ್ಕೆ ದ್ವಜಾರೋಹಣ ಮಾಡುವ ಮೂಲಕ 2ನೇ ದಿನದ ಪ್ರತಿನಿಧಿ ಸಮ್ಮೇಳನದ ಕಲಾಪ ಆರಂಭವಾಯಿತು. ಜಿಲ್ಲಾವಾರು ವರದಿಯ ಮೇಲೆ ನಡೆದ ಗುಂಪು ಚರ್ಚೆಯಲ್ಲಿ 25 ಮಂದಿ

ಪುಟ 15 ಕ್ಕೆ

ವಿದ್ಯುತ್ ರಂಗದಲ್ಲಿ 30 ಸಾವಿರ ಗುತ್ತಿಗೆ ಕಾರ್ಮಿಕರು (ಸಮ್ಮೇಳನ ವರದಿಯಿಂದ)

ಜಾಗತೀಕರಣದ ಪ್ರಭಾವ ಕೆ.ಇ.ಬಿಗೆ ಕೂಡಾ ಅಂಟಿ 1999 ರಂದು ಕೆ.ಪಿ.ಟಿ.ಸಿ ಎಲ್ ಸ್ಥಾಪನೆ ಆಯಿತು. ನವ ಉದಾರಿಕರಣ ನೀತಿಗಳಿಂದಾಗಿ ಜೂನ್ 2002ರಲ್ಲಿ ವಿದ್ಯುತ್ ವಿತರಣೆಯನ್ನು 5 ಕಂಪನಿಗಳನ್ನಾಗಿ ವಿಭಜನೆ ಮಾಡಲಾಯಿತು. ಬೆಸ್ಕೋಂ, ಹೆಸ್ಕೋಂ, ಮೆಸ್ಕೋಂ, ಗಸ್ಕೋಂ ನಂತರ ಚೆಸ್ಕೋಂ ಕೂಡ ಪ್ರಾರಂಭವಾಯಿತು. ಈ ವರ್ಷ ಮುಂಗಡ ಪತ್ರದಲ್ಲಿ ಇಂಧನ ಇಲಾಖೆ ನೀಡಿದ ಅನುಧಾನ 12,632 ಕೋಟಿ ಅಂದರೆ ಬಜೆಟ್ ಮೊತ್ತದ 14.65%. ವಿದ್ಯುತ್ ಉತ್ಪಾಧನೆ 2016 ರಲ್ಲಿ 15,962 ಮೆ.ವ. ಇತ್ತು. ವಿದ್ಯುತ್ ರಂಗದಲ್ಲಿ ಗುತ್ತಿಗೆ ಪದ್ದತಿ ಜಾಗತೀಕರಣದ ಪ್ರಭಾವ ಜೊತೆಯಲ್ಲಿಯೇ ಆರಂಭವಾಯಿತು. ಕರ್ನಾಕದಲ್ಲಿ 30 ಸಾವಿರಕ್ಕೂ ಮಿಕ್ಕಿ ಗುತ್ತಿಗೆ, ತಾತ್ಕಾಲಿಕ ಹಾಗು ದಿನಕೂಲಿ ನೌಕರರನ್ನು ದುಡಿಸಿ ದುರ್ಲಾಭ ಪಡೆಯುತ್ತಿದ್ದಾರೆ.

ಇತ್ತೀಚೆಗೆ ಸ್ವಲ್ಪ ಮಾತ್ರದಲ್ಲಿ ಇಂಜಿನೀಯರುಗಳನ್ನು ಮತ್ತು ಮೇಲ್ವಿಚಾರಕರನ್ನು ಮಾತ್ರ ಕಾಯಂ ನೌಕರರನ್ನಾಗಿ ನೇಮಕ ಮಾಡಲಾಗಿದೆ. ವಿದ್ಯುತ್ ಕಾಯ್ದೆ 2003 ಜಾರಿ ಆದ ಬಳಿಕ ಖಾಸಗಿ ರಂಗದಲ್ಲಿ 9% ವಿದ್ಯುತ್ ಉತ್ಪಾದನೆ. ಆದರೆ 2013 ಕ್ಕೆ ಇದು 30% ಏರಿದೆ. ಖಾಸಗಿ ರಂಗದಲ್ಲಿ ಗುತ್ತಿಗೆ ನೌಕರರ ಸಂಖ್ಯೆ ಕಾಯಂ ನೌಕರರಿಗಿಂತ ಬಹಳ ಹೆಚ್ಚಾಗಿದೆ. ನಮ್ಮ ರಾಜ್ಯದಲ್ಲಿ ವಿತರಣೆಯನ್ನು 5 ಕಂಪನಿಗಳಾಗಿ ಮಾಡಿದ ನಂತರ ಗುತ್ತಿಗೆ ಪದ್ದತಿ ಮತ್ತು ಗುತ್ತಿಗೆ ನೌಕರರ ಶೋಷಣೆ ಮಿತಿ ಮೀರಿದೆ. ಇಲಾಖೆ ವರದಿ ಪ್ರಕಾರ 2016-17 ರಲ್ಲಿ 1501 ವಿದ್ಯುತ್ ಅಪಘಾತಗಳಾಗಿದೆ ಈ ಅಪಘಾತಗಳಲ್ಲಿ ಗುತ್ತಿಗೆ ಕಾರ್ಮಿಕರು ಬಹುತೇಕ ಸಾವನ್ನಪ್ಪುತ್ತಿದ್ದಾರೆ. ಗುತ್ತಿಗೆ ಕಾರ್ಮಿಕರ ಸಾವಾದರೂ ಪೋಲೀಸ್ ಕೇಸು ದಾಖಲೆ ಮಾಡಿಕೊಳ್ಳಲು ನಿರಾಕರಿಸಿದ ಘಟನೆಗಳು ಇವೆ. ಇಲಾಖೆ ನೇರ ನೇಮಕಾತಿ ಮಾಡಿಕೊಳ್ಳುವ ಮುಖಾಂತರ 15-20 ವರ್ಷಗಳಿಂದ ದುಡಿದ ಗುತ್ತಿಗೆ ಕಾರ್ಮಿಕರನ್ನು "ಗುತ್ತಿಗೆಯನ್ನು ರದ್ದು ಪಡಿಸಿದೆ" ಎಂಬ ಒಂದು ಸಣ್ಣ ಮೆಸೇಜ್ ಮಾಡುವ ಮುಖಾಂತರ ಕೆಲಸದಿಂದ ಅಮಾನವೀಯವಾಗಿ ತೆಗೆದುಹಾಕಲಾಗುತ್ತಿದೆ. ಇಲಾಖೆಯ ಬಳಸಿ ಬಿಸಾಡುವ ನೀತಿಯಿಂದ ಕಾರ್ಮಿಕರು ಕಂಗಾಲಾಗಿರುತ್ತಾರೆ.

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**